ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 19 ಗುರುವಾರ 2022

ಸಂಪುಟ: 43 | ಸಂಚಿಕೆ: 33 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಿಧಾನಸಭೆಯಿಂದ ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆ: ಮೂರೂ ಪಕ್ಷಗಳಿಗೆ

'ಅಡ್ಡ' ಭೀತಿ

ಬೆಂಗಳೂರು, ಮೇ 18 (ಕೆಎಂಶಿ)–ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು, ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಅಡ್ಡ ಮತದಾನದ ಭಯ ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ಗೆ ಕಾಡುತ್ತಿದೆ.

ಅಡ್ಡ ಮತದಾನದಿಂದ ಪಾರಾಗಲು ಅವಿರೋಧ ಆಯ್ಕೆಗೆ ಮೂರು ಪಕ್ಷಗಳೂ ಒಲವು ತೋರಿವೆ. ರಾಜ್ಯಸಭೆಯಲ್ಲಿ ಬಿಜೆಪಿಗೆ ಎರಡು, ಕಾಂಗ್ರೆಸ್‌ಗೆ ಒಂದು, ಜೆಡಿಎಸ್ ಇತರೆ ಸದಸ್ಯರ ಬೆಂಬಲ ಪಡೆದು ಒಂದು ಸ್ಥಾನ ಗೆಲ್ಲಬಹುದಾಗಿದೆ. ಇನ್ನು ವಿಧಾನ ಪರಿಷತ್ತಿನ 7 ಸ್ಥಾನಗಳಲ್ಲಿ ಬಿಜೆಪಿ 4, ಕಾಂಗ್ರೆಸ್‌ಗೆ 2, ಜೆಡಿಎಸ್‌ಗೆ 1 ಸ್ಥಾನ ತಮ್ಮ ವಿಧಾನಸಭೆ ಸದಸ್ಯರ ಬಲಾಬಲದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಅವಿರೋಧ ಆಯ್ಕೆಗೆ ಹರಸಾಹಸ

ಯಾವುದಾದರೂ ರಾಜಕೀಯ ಪಕ್ಷ ತನಗಿಲ್ಲದ ಸ್ಥಾನಕ್ಕೆ ಒಲವು ತೋರಿದರೆ, ಅಂತಹ ಸಂದರ್ಭದಲ್ಲಿ ಅಡ್ಡಮತದಾನದ ಭೀತಿ ಎದುರಾಗಬಹುದೆಂಬ ಭೀತಿ ಕಾಡುತ್ತಿದೆ. ಈ ಹಿಂದೆ ವಿಜಯ್‌ಮಲ್ಯ, ಎಂಎಂ ರಾಮಸ್ವಾಮಿ, ರಾಜೀವ್ ಚಂದ್ರಶೇಖರ್, ಕುಪೇಂದ್ರ ರೆಡ್ಡಿ, ಕೆ.ಸಿ.ರಾಮಮೂರ್ತಿ ಸೇರಿದಂತೆ ಹಲವು ಬಲಾಢ್ಯರು ಪಕ್ಷೇತರರಾಗಿ ಕಣಕ್ಕಿಳಿದು, ರಾಜಕೀಯ ಪಕ್ಷಗಳ ಅಧಿಕೃತ ಅಭ್ಯರ್ಥಿಗಳನ್ನೇ ಸೋಲಿಸಿ, ಜಯಭೇರಿ ಬಾರಿಸಿದ್ದರು. ಮೂರು ಪಕ್ಷಗಳಲ್ಲೂ ಒಂದಲ್ಲ ಒಂದು ಕಾರಣಕ್ಕೆ ಕೆಲವು ಶಾಸಕರು ▶ 8ನೇ ಪುಟಕ್ಕೆ

ಮಹಾರಾಷ್ಟ್ರದಲ್ಲಿ ನಾಪತ್ತೆಯಾಗಿರುವ ಮಹಿಳಾ ಪೇದೆ ಮೈಸೂರಲ್ಲಿರುವ ಶಂಕೆ

● ಮೊಬೈಲ್ ಲೊಕೇಷನ್ ಆಧರಿಸಿ ಮಹಾರಾಷ್ಟ್ರ ಪೊಲೀಸರಿಂದ ಪರಿಶೀಲನೆ ● ಪೇದೆಯನ್ನು ವಂಚಕನೊಬ್ಬ ಅಪಹರಿಸಿರುವ ಗುಮಾನಿ

ಮೈಸೂರು, ಮೇ 18(ಜಿಎ)–ಮಹಾರಾಷ್ಟ್ರದಲ್ಲಿ ನಿಗೂಢವಾಗಿ ನಾಪತ್ತೆಯಾಗಿದ್ದ ಮಹಿಳಾ ಪೇದೆಯ ಮೊಬೈಲ್ ಲೊಕೇಷನ್ ಮೈಸೂರಿನಲ್ಲಿ ಪತ್ತೆಯಾಗಿದೆ. ಆಕೆಯನ್ನು ವ್ಯಕ್ತಿಯೋರ್ವ ಅಪಹರಿಸಿದ್ದಾನೆ ಎಂದು ಶಂಕಿಸಿ, ಮಹಾರಾಷ್ಟ್ರ ಪೊಲೀಸರ ತಂಡ ಮೈಸೂರಲ್ಲಿ ತೀವ್ರ ಹುಡುಕಾಟ ನಡೆಸಿದೆ.


ತೇಜಾ ರಾಜೇಂದ್ರ ತುಪೆ


ಮುಜಾಮಿಲ್ ಖಾನ್

ವಿವರ: ಮಹಾರಾಷ್ಟ್ರ ಸತಾರಾ ಜಿಲ್ಲೆಯ ಸತಾರಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೇದೆ ತೇಜಾ ರಾಜೇಂದ್ರ ತುಪೆ(38) ಮೇ 10ರಂದು ಕರ್ತವ್ಯದ ವೇಳೆಯಲ್ಲೇ ಮಧ್ಯಾಹ್ನ 2.30ರ ಸುಮಾರಿನಲ್ಲಿ ನಾಪತ್ತೆಯಾಗಿದ್ದರು. ಈ ಸಂಬಂಧ ಆಕೆಯ ತಾಯಿ ಜಯಶ್ರೀ ಅವರು ಅಂದೇ ಅದೇ ಠಾಣೆಯಲ್ಲಿ ಮಗಳ ನಾಪತ್ತೆ ಸಂಬಂಧ ದೂರು ಸಲ್ಲಿಸಿದ್ದರು. ಕರ್ತವ್ಯದ ವೇಳೆ ಠಾಣೆಯಿಂದ ಹೊರ ಹೋದ ಮಹಿಳಾ ಪೇದೆ ನಿಗೂಢವಾಗಿ ನಾಪತ್ತೆಯಾಗಿದ್ದನ್ನು ಗಂಭೀರವಾಗಿ ಪರಿಗಣಿಸಿದ್ದ ಅಲ್ಲಿನ ಪೊಲೀಸರು ತನಿಖೆ ಆರಂಭಿಸಿದಾಗ ಆಕೆಯ ▶ 8ನೇ ಪುಟಕ್ಕೆ

ಮೈಸೂರಲ್ಲಿ ಮುಂದುವರಿದ ವರುಣನ ಆರ್ಭಟ

ಹಾನಿಗೀಡಾದ ಪ್ರದೇಶಗಳಲ್ಲಿ ಸಂಸದ, ಮುಡಾ ಅಧ್ಯಕ್ಷ, ಅಧಿಕಾರಿಗಳ ಪರಿಶೀಲನೆ

ಎಲ್ಲೆಡೆ ಮಳೆ ನೀರು ಚರಂಡಿ ಸುಧಾರಣೆಗೆ ಸೂಚನೆ





ಮೈಸೂರು, ಮೇ 18 (ಆರ್‌ಕೆ)– ಕಳೆದ ನಾಲ್ಕು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹಾನಿಗೊಳಗಾದ ಪ್ರದೇಶಗಳಿಗೆ ಸಂಸದ ಪ್ರತಾಪ್‌ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಹಾಗೂ ಅಧಿಕಾರಿಗಳು ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಬೋಗಾದಿಯ ಮರಿಯಪ್ಪನ ಕೆರೆ ತುಂಬಿ ಕೋಡಿ ಬಿದ್ದ ನೀರು ಹರಿದಿದ್ದರಿಂದ ಕೊಚ್ಚಿಹೋಗಿದ್ದ ಸೇತುವೆ, ಜಲಾವೃತಗೊಂಡಿದ್ದ ಸಿಎಫ್‌ಟಿಆರ್‌ಐ, ಆನಂದನಗರ ಆಶ್ರಯ ಬಡಾವಣೆ, ಶಾರದಾದೇವಿ ನಗರದ ತಗ್ಗು ಪ್ರದೇಶ, ಮಳೆ ನೀರಿನ ಚರಂಡಿ ಹಾದುಹೋಗಿರುವ ಸ್ಥಳ ಹಾಗೂ ಲಿಂಗಾಂಬುದಿ ಕೆರೆಗಳಿಗೆ ಭೇಟಿ ನೀಡಿ ಉಂಟಾಗಿರುವ ಅವಾಂತರವನ್ನು ವೀಕ್ಷಿಸಿದ ಸಂಸದ, ಮುಡಾ ಅಧ್ಯಕ್ಷರಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

ಮರಿಯಪ್ಪನ ಕೆರೆ ಮತ್ತು ಲಿಂಗಾಂಬುದಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ಹಾದು ಹೋಗಿರುವ ಬಗ್ಗೆ ಮೂಲ ನಕ್ಷೆ ಪರಿಶೀಲಿಸಿದ ಅವರು, ಅದರಂತೆ ಕಾಲುವೆಯ ನೈಜ ಸ್ಥಿತಿಯ ಬಗ್ಗೆ ಸರ್ವೆ ನಡೆಸಿ ಒತ್ತುವರಿಯಾಗಿದ್ದರೆ ತೆರವುಗೊಳಿಸಿ, ನೀರು ಹರಿದು ಹೋಗಲು ಅಡ್ಡಿಯಾಗಿರುವ ಗಿಡಗಂಟಿ, ಕಲ್ಲು, ಮಣ್ಣನ್ನು ತೆಗೆಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮರಿಯಪ್ಪನ ಕೆರೆಯಿಂದ ಶಾರದಾದೇವಿನಗರದವರೆಗೆ 1.2 ಕಿ.ಮೀ. ಚರಂಡಿ ಅಭಿವೃದ್ಧಿ ಕಾಮಗಾರಿ ನಡೆಸಲು ಯೋಜನೆ ರೂಪಿಸಿರುವ ಮುಡಾ ಅಧಿಕಾರಿಗಳು ಶೀಘ್ರ ಟೆಂಡರ್ ಕರೆದು ಕೆಲಸ ಆರಂಭಿಸುವಂತೆ ನಿರ್ದೇಶನ ನೀಡಲಾಯಿತು. ಮಳೆ ನೀರು ಚರಂಡಿಯನ್ನು ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಲಿಂಗಾಂಬುದಿ ಕೆರೆವರೆಗೆ ಮೈಸೂರು ಮಹಾನಗರ ಪಾಲಿಕೆ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕು. ಮಳೆಗಾಲ ಆರಂಭವಾಗಿರುವುದರಿಂದ ಮುಂದೆ ಸಂಭವಿಸಬಹುದಾದ ಅಪಾರ ಹಾನಿ ತಡೆಗಟ್ಟಲು ಮುಡಾ ▶ 8ನೇ ಪುಟಕ್ಕೆ

ಕಾರ್ಪೊರೇಟರ್ಸ್ ಮನೆ ಮುಂದೆ ಧರಣಿ ಕೂತ್ಕೊಳ್ಳಿ

ಮೈಸೂರು ಜನರಿಗೆ ಸಂಸದ ಪ್ರತಾಪ್ ಸಿಂಹ ಕರೆ

ಮೈಸೂರು,ಮೇ 18(ಜಿಎ)– ನಿಮ್ಮ ಏರಿಯಾದಲ್ಲಿ ಕಸ ತೆಗೆದಿಲ್ವಾ? ಯುಜಿಡಿ ಓವರ್ ಫ್ಲೋ ಆಗ್ತಾ ಇದಿಯಾ? ನಿಮ್ಮ ಏರಿಯಾದ ಯಾವುದೇ ಸಮಸ್ಯೆ ಇದ್ದರೂ ಕಾರ್ಪೊರೇಟರ್ಸ್ ಮನೆ ಮುಂದೆ ಧರಣಿ ಕೂತ್ಕೊಳ್ಳಿ ಎಂದು ಸಂಸದ ಪ್ರತಾಪ್ ಸಿಂಹ ಮೈಸೂರಿನ ನಾಗರಿಕರಿಗೆ ಕರೆ ನೀಡಿದರು.

ಮಳೆ ಹಾನಿ ಪ್ರದೇಶ ವೀಕ್ಷಣೆ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾರ್ಪೊರೇಟರ್ಸ್ ಕೆಲಸಗಳನ್ನು ನಾನೇ ಮಾಡಬೇಕು. ಮೈಸೂರಲ್ಲಿ 65 ಜನ ಕಾರ್ಪೊರೇಟರ್‌ಗಳಿದ್ದಾರೆ. ಕೇಬಲ್ ಹಾಕಲು ರಸ್ತೆ ಅಗೆಯುವುದಕ್ಕೆ ಬಿಡುತ್ತಾರೆ. ಆದರೆ ಜನಕ್ಕೆ ಅನುಕೂಲವಾಗುವ ಗ್ಯಾಸ್ ಪೈಪ್‌ಲೈನ್‌ಗೆ ವಿರೋಧಿಸುತ್ತಾರೆ. ಅವರ ಈ ಮನಸ್ಥಿತಿಯನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದರು. ಪ್ರತಿಯೊಂದಕ್ಕೂ ನಾನೇ ಬರುವುದಕ್ಕೆ ಆಗುವುದಿಲ್ಲ. ವಿದ್ಯಾರಣ್ಯಪುರಂ ಪ್ಲಾಂಟ್‌ನ ಕಸ ತೆಗೆಸುವ ಕೆಲಸ ಮಾಡಿಸುತ್ತಿದ್ದೇನೆ. ಗ್ರೇಟರ್ ಮೈಸೂರು ಮಾಡಲು ಪ್ರಯತ್ನಿಸುತ್ತಿದ್ದೇನೆ. ಸಾರ್ವಜನಿಕರು ತಮ್ಮ ನಿತ್ಯದ ಸಮಸ್ಯೆಗಳಿಗೆ ನಿಮ್ಮ ನಿಮ್ಮ ವ್ಯಾಪ್ತಿಯ ಕಾರ್ಪೊರೇಟರ್‌ಗಳ ಮನೆ ಮುಂದೆ ಧರಣಿ ಕೂರುವುದನ್ನು ಕಲಿತುಕೊಳ್ಳಿ ಎಂದರು. ಅಧಿಕಾರಿಯೊಬ್ಬರಿಗೆ ಕರೆ ಮಾಡಿದ ಸಂಸದರು, ನಿಮಗೆ ರೋಡ್ ಕನ್‌ಸ್ಟ್ರಕ್ಷನ್ ಕೆಲಸ ಗೊತ್ತೇನ್ರಿ? ರಸ್ತೆಬದಿಯಲ್ಲಿ ನೀರು ಓವರ್ ಫ್ಲೋ ಆಗುವುದನ್ನು ಕೂಡಲೇ ನಿಲ್ಲಿಸಬೇಕು. ಶೀಘ್ರವೇ ಎಂ.ಜಿ.ರಸ್ತೆ ದುರಸ್ಥಿ ಕಾರ್ಯ ಮಾಡಿಸಬೇಕು ಎಂದು ತರಾಟೆಗೆ ತೆಗೆದುಕೊಂಡರು.

ಕ್ರೈಂ ಬಾಕ್ಸ್

ಷೇರು ಮಾರುಕಟ್ಟೆಯ ಲಾಭದ ಆಮಿಷ: ಕುಟುಂಬವೊಂದಕ್ಕೆ 2.14 ಕೋಟಿ ವಂಚನೆ

ದಂಪತಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮೇ 18– ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸಿದರೆ ಲಾಭ ಬರುತ್ತದೆ ಎಂದು ನಂಬಿಸಿ ಕುಟುಂಬವೊಂದರ ಸದಸ್ಯರಿಂದ 2.14 ಕೋಟಿ ರೂ. ವಂಚನೆ ಮಾಡಿರುವ ಬಗ್ಗೆ ದಂಪತಿ ವಿರುದ್ಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿನಕಲ್‌ನಲ್ಲಿ ಹಿಮಾಲಯ ಕಾಮಾಡಿಟೀಸ್ ಎಂಬ ಹೆಸರಿನಲ್ಲಿ ಸಂಸ್ಥೆಯೊಂದನ್ನು ನಡೆಸುತ್ತಿದ್ದ ಜಿ.ಎನ್. ಕೃಷ್ಣಮೂರ್ತಿ (45) ಮತ್ತು ಅವರ ಪತ್ನಿ ಡಯಾನ ಆರೋಪಕ್ಕೆ ಗುರಿಯಾದವರಾಗಿದ್ದು, ಹಲವರಿಂದ ಕೋಟ್ಯಾಂತರ ರೂ. ಸಂಗ್ರಹಿಸಿರುವ ಇವರು ಇತ್ತೀಚೆಗೆ ಹಿನಕಲ್‌ನಲ್ಲಿರುವ ತಮ್ಮ ಕಚೇರಿಯನ್ನು ಮುಚ್ಚಿದ್ದು, ಅವರ ಮೊಬೈಲ್ ನಂಬರ್‌ಗಳು ಕೂಡ ಸ್ವಿಚ್ ಆಫ್ ಆಗಿದೆ ಎಂದು ಬೋಗಾದಿಯ ಟೆಲಿಕಾಂ ಲೇಔಟ್ ನಿವಾಸಿ ಅಂಥೋಣಿ ನಿಶಾನ್ ಲೀಮ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿವರ: ತಾನು ಎಸ್‌ಬಿಐ ಲೈಫ್ ಇನ್ಸೂರೆನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ 2014ರಲ್ಲಿ ಜಿ.ಎನ್. ಕೃಷ್ಣಮೂರ್ತಿ ತಮ್ಮ ತಂದೆಯ ಮೂಲಕ ಪರಿಚಯವಾದರು ಎಂದು ದೂರಿನಲ್ಲಿ ತಿಳಿಸಿರುವ ಅವರು, ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿದರೆ ವಾರ್ಷಿಕ ಶೇ.24ರಿಂದ 36ರವರೆಗೆ ಲಾಭ ಸಿಗುತ್ತದೆ ಎಂದು ಹೇಳಿ ತಮ್ಮ ತಂದೆಯಿಂದ 1 ಲಕ್ಷ ರೂ. ಪಡೆದಿದ್ದ ಕೃಷ್ಣಮೂರ್ತಿ, ತಿಂಗಳಿಗೆ 2 ಸಾವಿರ ರೂ.ಗಳಂತೆ ಲಾಭದ ಹಣವನ್ನು ತಂದೆಗೆ ನೀಡುತ್ತಿದ್ದ. ಆರು ತಿಂಗಳ ನಂತರ ಹಣದ ಅವಶ್ಯಕತೆ ಇದೆ ಎಂದು ತಂದೆ ಹೇಳಿದಾಗ ಹಣವನ್ನು ಹಿಂದಿರುಗಿಸಿ ನಂಬಿಕೆ ಹುಟ್ಟಿಸಿದ್ದ ಎಂದು ಅಂಥೋಣಿ ದೂರಿನಲ್ಲಿ ತಿಳಿಸಿದ್ದಾರೆ.

2014–15ರಲ್ಲಿ ಕೃಷ್ಣಮೂರ್ತಿ ಮತ್ತು ಪತ್ನಿ ಡಯಾನ ತಮ್ಮನ್ನು ಭೇಟಿ ಮಾಡಿ ತಾವು ಹಿಮಾಲಯ ಕಾಮಾಡಿಟೀಸ್ ಎಂಬ ಹೆಸರಿನಲ್ಲಿ ಷೇರು ಮಾರುಕಟ್ಟೆ ಸಂಸ್ಥೆಯನ್ನು ತೆರೆದಿರುವುದಾಗಿಯೂ ಅಲ್ಲದೆ, ಗುಡ್‌ವಿಲ್ ಕಾಂಕ್ರೀಟ್ ಎಂಬ ಹೆಸರಿನಲ್ಲಿ ಪ್ರಾಜೆಕ್ಟ್ ತೆಗೆದುಕೊಂಡಿರುವುದಾಗಿಯೂ ತಿಳಿಸಿ, ಹಣ ಹೂಡಿಕೆ ಮಾಡುವಂತೆ ಹೇಳಿದ್ದರು. ಅದರಂತೆ ತಾನು, ತಮ್ಮ ತಂದೆ, ಬಾವ, ಸೇರಿದಂತೆ ನಮ್ಮ ಕುಟುಂಬದವರೆಲ್ಲ ಇವರ ಬಳಿ ಒಟ್ಟು 2,14,84,500 ರೂ. ಹೂಡಿಕೆ ಮಾಡಿದ್ದು, ಈ ದಂಪತಿ 2016ರಿಂದ 2019ರವರೆಗೆ ನಮಗೆ ಯಾವುದೇ ರೀತಿಯ ಲಾಭಾಂಶವನ್ನು ನೀಡಿಲ್ಲ. ಅವರನ್ನು ಭೇಟಿ ಮಾಡಿ ಹಣ ಹಿಂದಿರುಗಿಸುವಂತೆ ಕೇಳಿದಾಗ ಸುಳ್ಳು ಹೇಳುತ್ತಿದ್ದರು, ಇತ್ತೀಚೆಗೆ ತಮ್ಮ ಕಚೇರಿ ಮುಚ್ಚಿಕೊಂಡು ನಾಪತ್ತೆಯಾಗಿದ್ದಾರೆ. ಅಲ್ಲದೆ ಅವರ ಮೊಬೈಲ್‌ಗಳು ಕೂಡ ಸ್ವಿಚ್ ಆಫ್ ಆಗಿದೆ. ಈ ದಂಪತಿ ನಮ್ಮ ಕುಟುಂಬದವರಿಗೆ ಮಾತ್ರವಲ್ಲದೆ ಇನ್ನೂ ಅನೇಕರಿಗೆ ಮೋಸ ಮಾಡಿರುವ ಸಾಧ್ಯತೆ ಇದೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಮುಡಾ ಆಸ್ತಿಯನ್ನು ಮಾರಾಟ ಮಾಡಿ ವ್ಯಕ್ತಿಗೆ ವಂಚನೆ: ಹಿನಕಲ್ ನಿವಾಸಿ ವಿರುದ್ಧ ಕೇಸ್ ದಾಖಲು

ಮೈಸೂರು, ಮೇ 18–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವಶಪಡಿಸಿಕೊಂಡಿರುವ ಆಸ್ತಿಯನ್ನು ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡುವ ಮೂಲಕ ವಂಚನೆ ಎಸಗಿದ ಆರೋಪದ ಮೇರೆಗೆ ಹಿನಕಲ್ ನಿವಾಸಿಯೊಬ್ಬರ ವಿರುದ್ಧ ಮೈಸೂರಿನ ವಿಜಯನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಹಿನಕಲ್ ನಿವಾಸಿ ಕೆಂಪನಾಯಕ ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ವಿಜಯನಗರ 1ನೇ ಹಂತದ ನಿವಾಸಿ ಕೆ.ಎನ್.ಹರೀಶ್ ಎಂಬುವರಿಗೆ ಮುಡಾ ವಶಪಡಿಸಿಕೊಂಡಿರುವ ನಿವೇಶನವನ್ನು ಮಾರಾಟ ಮಾಡುವ ಮೂಲಕ ವಂಚನೆ ಎಸಗಿದ್ದು, ಮೈಸೂರಿನ 4ನೇ ಹೆಚ್ಚುವರಿ ಸೀನಿಯರ್ ಸಿವಿಲ್ ನ್ಯಾಯಾಲಯದ ನಿರ್ದೇಶನದ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿವರ: ಹಿನಕಲ್ ಗ್ರಾಮದ ಗಿರಿಗೌಡ ಎಂಬುವರ ಮಕ್ಕಳಾದ ವಿಶ್ವನಾಥೇಗೌಡ ಮತ್ತು ಕಾಮರಾಜು ಎಂಬುವರು ಸರ್ವೆ ನಂ.331/5ಎ ನಲ್ಲಿ ಒಂದು ಎಕರೆ ಜಮೀನನ್ನು ಅನ್ಯಕ್ರಾಂತ ಮಾಡಿಸಿಕೊಂಡು 1999ರ ಅಕ್ಟೋಬರ್ 25ರಂದು ಆರೋಪಿ ಕೆಂಪನಾಯಕ ಅವರಿಗೆ ನೋಂದಾಯಿತವಲ್ಲದ ಕ್ರಯಪತ್ರ ಮಾಡಿಕೊಟ್ಟಿದ್ದಾರೆ. ಆದರೆ ಮುಡಾ ಈ ಜಮೀನಿಗೆ 1981ರ ಏಪ್ರಿಲ್ 1ರಂದು ಪ್ರಥಮ ನೋಟಿಸ್ ಹೊರಡಿಸಿ 1984ರ ಮಾರ್ಚ್ 30ರಂದು ಅಂತಿಮ ಪ್ರಕಟಣೆ ಹೊರಡಿಸಿದ ನಂತರ ಜಮೀನನ್ನು ವಶಕ್ಕೆ ಪಡೆದಿತ್ತು.

ಈ ಆಸ್ತಿ ಮುಡಾ ಸ್ವಾಧೀನಪಡಿಸಿಕೊಂಡಿರುವುದು ತಿಳಿದಿದ್ದರು ಕೂಡ ಆರೋಪಿ ಕೆಂಪನಾಯಕ 2006ರ ಆಗಸ್ಟ್ 8ರಂದು ವಿಜಯನಗರ ನಿವಾಸಿ ಕೆ.ಎನ್.ಹರೀಶ್ ಅವರಿಗೆ ಈ ಜಮೀನಿನ ಪೈಕಿ 40X60 ಅಳತೆಯ ನಿವೇಶನವನ್ನು ಮಾರಾಟ ಮಾಡಿದ್ದಾರೆ. ಅವರು ತಮ್ಮ ರಾಜಕೀಯ ಪ್ರಭಾವವನ್ನು ಬಳಸಿಕೊಂಡು ಹಿನಕಲ್ ಗ್ರಾಮ ಪಂಚಾಯಿತಿಯಲ್ಲಿ ಖಾತೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಪೊಲೀಸರು ಕೆಂಪನಾಯಕ ವಿರುದ್ಧ ಭಾರತೀಯ ದಂಡ ಸಂಹಿತೆ 406, 420, 468ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮನೆ ಬಾಗಿಲು ಮೀಟಿ ಚಿನ್ನಾಭರಣ ದೋಚಿದರು

ಮೈಸೂರು, ಮೇ 18–ಮನೆಯ ಬಾಗಿಲು ಮೀಟಿ ಚಿನ್ನಾಭರಣ ದೋಚಿದ ಘಟನೆ ಮೈಸೂರಿನ ರಾಜೀವ್‌ನಗರ ಒಂದನೇ ಹಂತದಲ್ಲಿ ನಡೆದಿದೆ. ಅಲ್ಲಿನ 5ನೇ ಕ್ರಾಸ್ ನಿವಾಸಿ ಸಯ್ಯದ್ ನಜರ್‌ವುಲ್ಲಾ ಎಂಬುವರು ಮೇ 14ರಂದು ಮನೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಕೇರಳದ ಕ್ಯಾಲಿಕಟ್‌ಗೆ ಪ್ರವಾಸ ಹೋಗಿದ್ದು, ಮೇ 15ರಂದು ರಾತ್ರಿ ಮನೆಗೆ ಹಿಂದಿರುಗಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ. ಮನೆಯ ಬಾಗಿಲು ಮೀಟಿ ಒಳ ನುಗ್ಗಿರುವ ಕಳ್ಳರು, ಬೀರುವಿನಲ್ಲಿದ್ದ ಚಿನ್ನದ ಹಾರ, ಒಂದು ಜೊತೆ ಚಿನ್ನದ ಬಳೆ, ಚಿನ್ನದ ಸರ, 3 ಬ್ರೇಸ್‌ಲೆಟ್‌ಗಳು, 10 ಉಂಗುರ, ಜುಮುಕಿ, ಚಿನ್ನದ ಡಾಲರ್, ಬೆಳ್ಳಿ ಪದಾರ್ಥಗಳು ಸೇರಿದಂತೆ 3 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ಈ ಸಂಬಂಧ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ವಿದ್ಯಾರ್ಥಿಗಳ ಲ್ಯಾಪ್‌ಟಾಪ್ ಕಳವು

ಮೈಸೂರು, ಮೇ 18–ವಿದ್ಯಾರ್ಥಿಗಳು ವಾಸವಿದ್ದ ರೂಂನಲ್ಲಿ ಲ್ಯಾಪ್‌ಟಾಪ್‌ಗಳು ಕಳುವಾಗಿರುವ ಬಗ್ಗೆ ತಡವಾಗಿ ವರದಿಯಾಗಿದೆ. ಬೋಗಾದಿಯ ಅಮೃತಾನಂದಮಯಿ ಕಾಲೇಜಿನಲ್ಲಿ ಮೊದಲನೇ ವರ್ಷದ ಎಂಸಿಎ ವ್ಯಾಸಂಗ ಮಾಡುತ್ತಿರುವ ಋಷಿದೇವ್ ಜಯಚಂದ್ರನ್ ಅವರು ತನ್ನ ಸ್ನೇಹಿತನೊಂದಿಗೆ ಬೋಗಾದಿ ಎರಡನೇ ಹಂತದ ಬಾಟಲ್ ಕಿಂಗ್ ಬಾರ್‌ನ ಮೊದಲನೇ ಹಂತದಲ್ಲಿರುವ ಕೊಠಡಿಯಲ್ಲಿ ವಾಸವಿದ್ದರು. ಇವರು ಕಳೆದ ಏಪ್ರಿಲ್ 27ರಂದು ಬೆಳಗ್ಗೆ ರೂಂನಲ್ಲಿ 2 ಲ್ಯಾಪ್‌ಟಾಪ್‌ಗಳನ್ನು ಇಟ್ಟು ಕಾಲೇಜಿಗೆ ಹೋಗಿ ಮಧ್ಯಾಹ್ನ 2.30ರ ಸುಮಾರಿನಲ್ಲಿ ಬರುವುದರೊಳಗಾಗಿ ರೂಂನಲ್ಲಿದ್ದ ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡಲಾಗಿದೆ. ಈ ಸಂಬಂಧ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ನಕಲಿ ದಾಖಲೆ ಮೂಲಕ ನಿವೇಶನ ಕಬಳಿಕೆ

ಮೈಸೂರು,ಮೇ 18–ಲಕ್ಷಾಂತರ ರೂ. ಮೌಲ್ಯದ ನಿವೇಶನವನ್ನು ನಕಲಿ ದಾಖಲೆ ಸೃಷ್ಟಿಸಿ, ಅನಾಮಧೇಯ ವ್ಯಕ್ತಿಗಳನ್ನು ಬಳಸಿಕೊಂಡು ನೋಂದಣಿ ಮಾಡಿಸಿಕೊಂಡಿರುವ ಬಗ್ಗೆ ಮೈಸೂರಿನ ನರಸಿಂಹರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಸ್ ದಾಖಲು

ಮೈಸೂರಿನ ಅಸ್ಲಂ ಪಾಷ ಮತ್ತು ಮಹಮ್ಮದ್ ಇಮ್ರಾನ್ ಖಾನ್ ಎಂಬುವರು ಶ್ರೀಮತಿ ಸುನಂದಾ ಎಂಬುವರ ಹೆಸರಿನಲ್ಲಿದ್ದ ನಿವೇಶನವನ್ನು ನಕಲಿ ದಾಖಲೆಗಳ ಮೂಲಕ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ವಿವರ: ಮಂಡ್ಯ ಟೌನ್ ಬಂಡೀಗೌಡ ಬಡಾವಣೆಯ ಕೆ.ಎ.ಲಿಂಗೇಗೌಡ ಎಂಬುವರಿಗೆ 1974ರ ಆಗಸ್ಟ್ 23ರಂದು ಅಂದಿನ ಸಿಐಟಿಬಿ ವತಿಯಿಂದ ಮೈಸೂರಿನ ಬನ್ನಿಮಂಟಪ 'ಸಿ' ಲೇಔಟ್‌ನ ನಿವೇಶನ ಸಂಖ್ಯೆ 243 (30X40 ಅಳತೆ) ಮಂಜೂರಾಗಿತ್ತು. ಅವರ ನಿಧನದ ನಂತರ ಪತ್ನಿ ಹೆಚ್.ಎಸ್.ಸುನಂದಾ ಅವರ ಹೆಸರಿಗೆ ಮುಡಾದಲ್ಲಿ 2003ರ ಮೇ 24ರಂದು ಖಾತೆ ವರ್ಗಾವಣೆಯಾಗಿ 2004ರ ಆಗಸ್ಟ್ 10ರಂದು ಟೈಟಲ್ ಡೀಡ್ ನೀಡಲಾಗಿದೆ. ಪಾಲಿಕೆಯಲ್ಲಿ ಖಾತೆಯೂ ಕೂಡ ಸುನಂದಾ ಅವರ ಹೆಸರಿಗೆ ವರ್ಗಾವಣೆಯಾಗಿದೆ. ಈ ಮಧ್ಯೆ 2018ರ ಆಗಸ್ಟ್ 29ರಂದು ಮಹಮ್ಮದ್ ಇಮ್ರಾನ್ ಖಾನ್ ಎಂಬುವರ ಜಿಪಿಎ ಪ್ರತಿನಿಧಿಯಾಗಿ ನೇಮಕಗೊಂಡಿರುವ ಅಸ್ಲಂ ಪಾಷಾ ಎಂಬುವರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ತಮ್ಮ ಹೆಸರಿಗೆ ಈ ನಿವೇಶನವನ್ನು ಶುದ್ಧ ಕ್ರಯಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ. ಆ ವೇಳೆ ಶ್ರೀಮತಿ ಸುನಂದಾ ಹಾಗೂ ಅವರ ಪುತ್ರ ಕೆ.ಎಲ್.ಸುರೇಶ್ ಹೆಸರಿನಲ್ಲಿ ನಕಲಿ ವ್ಯಕ್ತಿಗಳು ಅಸ್ಲಂ ಪಾಷಾಗೆ ನೋಂದಣಿ ಮಾಡಿಕೊಟ್ಟಿದ್ದಾರೆ ಎಂದು ಸುನಂದಾ ಅವರ ಪುತ್ರಿ ಕೆ.ಎಲ್.ಸವಿತಾ ಮೇ 16ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ರಾಜ್ಯದ ಆರ್ಥಿಕ ದುಸ್ಥಿತಿಗೆ ಸಿದ್ದರಾಮಯ್ಯ ಕಾರಣ

ಬಿಜೆಪಿ ರಾಜ್ಯ ವಕ್ತಾರ ಗಣೇಶ್ ಕಾರ್ಣಿಕ್ ಆರೋಪ

ಮೈಸೂರು, ಮೇ 18(ಆರ್‌ಕೆಬಿ)– ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯ ದುಸ್ಥಿತಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಕಾರಣ ಎಂದು ಬಿಜೆಪಿ ರಾಜ್ಯ ವಕ್ತಾರ ಗಣೇಶ್ ಕಾರ್ಣಿಕ್ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುವ ಮುನ್ನ 2012–13ರವರೆಗೆ ಸಾಲ 1.18 ಕೋಟಿ ರೂ. ಇತ್ತು. ಅವರು ಮುಖ್ಯಮಂತ್ರಿಯಾದ ಬಳಿಕ ಅವರ 5 ವರ್ಷದ ಆಡಳಿತ ಅವಧಿಯಲ್ಲಿ 90,000 ಕೋಟಿ ಸಾಲ ಮಾಡಿದರು ಎಂದ ಅವರು, ರಾಜ್ಯದ ಆರ್ಥಿಕ ದುಸ್ಥಿತಿಗೆ ಕಾರಣ ಯಾರೆಂದು ಸಿದ್ದರಾಮಯ್ಯ ಒಮ್ಮೆ ತಮ್ಮನ್ನು ತಾವು ಪ್ರಶ್ನಿಸಿಕೊಳ್ಳಲಿ ಎಂದರು.

ದೇಶದಲ್ಲಿ 8 ವರ್ಷದಿಂದ ಬಿಜೆಪಿ ಅಧಿಕಾರ ನಡೆಸುತ್ತಿದೆ. ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. 2 ಬಾರಿ ಸಿಎಂ ಆಗಿದ್ದ ಎಚ್.ಡಿ.ಕುಮಾರಸ್ವಾಮಿ ಸ್ವತಂತ್ರವಾಗಿ ಅಧಿಕಾರ ಹಿಡಿದಿದ್ದರೆ? ಎಂದು ಪ್ರಶ್ನಿಸಿದರಲ್ಲದೆ, ಕುಮಾರಸ್ವಾಮಿ ಅವಕಾಶವಾದಿ ಜೊತೆಗೆ ಅಪ್ರಬುದ್ಧ ರಾಜಕಾರಣಿ ಕೂಡ. ಹಾಗಾಗಿ ಅವರ ಹೇಳಿಕೆಗೆ ಮಹತ್ವ ನೀಡಬೇಕಿಲ್ಲ ಎಂದರು.



ಬಿಜೆಪಿಗೆ ರಾಜ್ಯದ ಜನತೆಯ ಆಶೀರ್ವಾದ ಇದೆ. ಚುನಾವಣೆಗೆ ಇನ್ನು 11 ತಿಂಗಳಷ್ಟೇ ಬಾಕಿ ಇದೆ. ಯಾರಿಗೆ ಬಹುಮತ ಬರುತ್ತದೆ ಎಂಬುದನ್ನು ಜನ ತೀರ್ಮಾನ ನೀಡಲಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ನಾಯಕರ ಬಗ್ಗೆ ಟೀಕಿಸಿದ ಅವರು, ಚಿಂತನಾ ಶಿಬಿರ ಆರಂಭಿಸಿದ್ದು ಬಿಜೆಪಿ. ಈಗ ಇದನ್ನೇ ಇಂದು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಅವರಿಗೆ ಸೋಲಿನ ಹತಾಶೆ ಕಾಡುತ್ತಿದೆ. ಹಾಗಾಗಿ ಬಿಜೆಪಿಯ ಕಾರ್ಯಕ್ರಮಗಳನ್ನು ಅನುಸರಿಸುತ್ತಿದ್ದಾರೆ ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾ ಮಾಧ್ಯಮ ವಕ್ತಾರ ಶ್ರೀನಿವಾಸಗೌಡ, ಸಹ ವಕ್ತಾರ ವಸಂತ ಕುಮಾರ್, ನಗರ ವಕ್ತಾರ ಪ್ರದೀಪ್, ವಿಭಾಗ ವಕ್ತಾರ ನಾಗೇಶ್, ಜಿಲ್ಲಾ ಮಾಧ್ಯಮ ವಕ್ತಾರ ಎನ್.ರಾಜಕುಮಾರ್ ಉಪಸ್ಥಿತರಿದ್ದರು.


ಪದವೀಧರರು ಬಿಜೆಪಿ ಪರ ಇದ್ದಾರೆ

ದಕ್ಷಿಣ ಪದವೀಧರ ಚುನಾವಣೆಗೆ ಅಭ್ಯರ್ಥಿ ಮೈ.ವಿ.ರವಿಶಂಕರ್ ಗುರುವಾರ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಗಣೇಶ್ ಕಾರ್ಣಿಕ್ ತಿಳಿಸಿದರು.

ಕೋವಿಡ್ ಸಂದರ್ಭದಲ್ಲಿ ಬಿಜೆಪಿ ಉತ್ತಮ ನಿರ್ವಹಣೆ ಮಾಡಿದೆ. ಆಡಳಿತ ವೈಖರಿ ನೋಡಿ ಚುನಾವಣೆಯಲ್ಲಿ ಪದವೀಧರರು ಬಿಜೆಪಿಗೆ ಮತ ನೀಡಲಿದ್ದಾರೆ. ಪ್ರಪಂಚದ ಎಲ್ಲಾ ದೇಶಗಳ ಆರ್ಥಿಕ ಸ್ಥಿತಿ ಕುಗ್ಗಿದ್ದರೂ ಭಾರತದಲ್ಲಿ ಮಾತ್ರ ಉತ್ತಮ ನಿರ್ವಹಣೆಯಾಗುತ್ತಿದೆ. ದೇಶದ ಜನರಿಗೆ ದಾಖಲೆ ಮಟ್ಟದಲ್ಲಿ ಲಸಿಕೆ ನೀಡಲಾಗಿದೆ. ಇದೆಲ್ಲವನ್ನು ಗಮನಿಸಿ ಪದವೀಧರರು ಬಿಜೆಪಿ ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜೀವ್ ಗಾಂಧಿ ಹತ್ಯೆ ಪ್ರಕರಣ

ಅಪರಾಧಿ ಪೇರರಿವಾಳನ್ ಬಿಡುಗಡೆಗೆ ಸುಪ್ರೀಂ ಆದೇಶ



ನವದೆಹಲಿ, ಮೇ 18– ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿ ಎ.ಜಿ. ಪೇರರಿವಾಳನ್ ಅವರನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ಪೀಠವು ಈ ಆದೇಶವನ್ನು ನೀಡಿದೆ.

ಕ್ಷಮಾಪಣೆ ಅರ್ಜಿಯನ್ನು ನಿರ್ಧರಿಸುವಲ್ಲಿ ಸುಪ್ರೀಂ ಕೋರ್ಟ್ ಆರ್ಟಿಕಲ್ 142 ಅಂದರೆ ಸುಪ್ರೀಂಕೋರ್ಟ್‌ಗೆ ಸಂವಿಧಾನವು ನೀಡಿರುವ ಅನಿರ್ದಿಷ್ಟ ಅಧಿಕಾರವನ್ನು ಚಲಾಯಿಸಿದೆ, ರಾಜ್ಯಪಾಲರ ವಿಳಂಬದ ನಂತರ ಎಜಿ ಪೆರರಿವಾಳನ್ ಅವರನ್ನು ಬಿಡುಗಡೆ ಮಾಡಲು ನ್ಯಾಯಾಲಯ ಆದೇಶಿಸಿದೆ. ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು ಮೇ 21, 1991 ರಂದು ತಮಿಳುನಾಡಿನ ಶ್ರೀಪೆರಂಬದೂರಿನಲ್ಲಿ ಚುನಾವಣಾ ರ್ಯಾಲಿಯಲ್ಲಿ ಮಹಿಳಾ ಆತ್ಮಾಹುತಿ ಬಾಂಬರ್‌ನಿಂದ ಹತ್ಯೆಗೀಡಾಗಿದ್ದರು. ಈ ಹತ್ಯೆ ಪ್ರಕರಣದಲ್ಲಿ ಪೇರರಿವಾಳನ್ ಕಳೆದ 31 ವರ್ಷಗಳಿಂದ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ. ಹತ್ಯೆಯ ಸಮಯದಲ್ಲಿ 19 ವರ್ಷ ವಯಸ್ಸಿನವನಾಗಿದ್ದ ಪೇರರಿವಾಳನ್ ರಾಜೀವ್ ಹತ್ಯೆಯ ಮಾಸ್ಟರ್‌ಮೈಂಡ್‌ನ ಎಲ್‌ಟಿಟಿಇ ವ್ಯಕ್ತಿ ಶಿವರಸನ್‌ಗಾಗಿ ಎರಡು 9–ವೋಲ್ಟ್ ಬ್ಯಾಟರಿಗಳನ್ನು ಖರೀದಿಸಿದ್ದನೆಂದು ಆರೋಪಿಸಲಾಗಿತ್ತು



ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ ನೂತನ ಅಧ್ಯಕ್ಷ ಲಿಂಗರಾಜು, ಉಪಾಧ್ಯಕ್ಷ ಆನಂದ್, ಕಾರ್ಯದರ್ಶಿ ಶಿವಾಜಿರಾವ್, ಖಜಾಂಚಿ ಅಶೋಕ, ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಕಾರ್ಯಕಾರಿ ಸಮಿತಿ ಸದಸ್ಯ ಶ್ಯಾಮಸುಂದರ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಭಿನಂದಿಸಿದರು.

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ದಂಪತಿಗೆ ಸನ್ಮಾನ



ಮೈಸೂರು, ಮೇ18(ಜಿಎ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾದಲ್ಲಿ ನೃತ್ಯಾಲಯ ಟ್ರಸ್ಟ್ ವತಿಯಿಂದ ಬುಧವಾರ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಮತ್ತು ಅವರ ಪತ್ನಿ ವೆಂಕಟಲಕ್ಷ್ಮಿ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ತಾರಾನಾಥ್ ಮಾತನಾಡಿ, ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಅವರಿಗೆ ಮಂಗಳೂರಿನಲ್ಲಿ ಉನ್ನತ ಹುದ್ದೆಗಳು ಅರಿಸಿ ಬಂದರೂ ತಮ್ಮ ಸಂಶೋಧನೆಗೆ ಅಡೆ–ತಡೆಯಾಗಬಾರದು ಎಂದು ಸಂಶೋಧನೆಯನ್ನೇ ಜೀವನದ ವ್ರತವಾಗಿಸಿಕೊಂಡಿದ್ದಾರೆ. ಕೆಲವರು ಒಂದು ಕ್ಷೇತ್ರದಲ್ಲಿ ಅಥವಾ ವಿಭಾಗದಲ್ಲಿ ಪರಿಣಿತಿ ಹೊಂದಿರುತ್ತಾರೆ. ಆದರೆ ವೆಂಕಟಾಚಲಶಾಸ್ತ್ರೀ ಅವರು 9ಕ್ಕೂ ಹೆಚ್ಚು ಕ್ಷೇತ್ರದಲ್ಲಿ ಕೆಲಸಗಳನ್ನು ಮಾಡಿ ಪರಿಣಿತಿ ಹೊಂದಿದ್ದಾರೆ ಎಂದರು.

ಸಾಹಿತ್ಯ ಪರಿಷತ್ತಿಗೂ ಅನೇಕ ಸೇವೆಗಳನ್ನು ಸಲ್ಲಿಸಿದ್ದಾರೆ. ಹಲ್ಮಿಡಿ ಶಾಸನ ಸೇರಿದಂತೆ ಅನೇಕ ಹಳೆ ಶಾಸನಗಳಿಗೆ ಅರ್ಥವನ್ನು ಬರೆದಿರುವುದು ಅವರಿಗೆ ಭಾಷೆಯ ಬಗ್ಗೆ ಇರುವ ಹಿಡಿತ ಮತ್ತು ಭಾಷೆಗೆ ಸಂಬಂಧಿಸಿದಂತೆ ಅವರಿಗೆ ಅಪಾರ ಗ್ರಹಿಕಾ ಶಕ್ತಿ ಇರುವುದನ್ನೂ ಸಾಬೀತು ಪಡಿಸುತ್ತದೆ ಎಂದರು.

ಮೈಸೂರಿನ ಸುತ್ತ ಮುತ್ತಲಿನ ಪ್ರಮುಖರ ಆತ್ಮಚರಿತ್ರೆ ಬರೆದಿರುವ ಗೌರವವು ಅವರಿಗೆ ಸಲ್ಲುತ್ತದೆ ಹಾಗೂ ಮೈಸೂರಿನ ಬಗ್ಗೆ ಮತ್ತು ಇಲ್ಲಿನ ಭೌಗೋಳಿಕತೆಯ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದಾರೆ ಎಂದ ಅವರು ಇವರು ಈ ಶತಮಾನದ ಶಾಸ್ತ್ರ ಪುರುಷ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ನಿರ್ದೇಶಕ ಡಾ.ಡಿ.ಕೆ. ರಾಜೇಂದ್ರ, ನೃತ್ಯಾಲಯ ಟ್ರಸ್ಟ್ ಅಧ್ಯಕ್ಷೆ ಡಾ. ತುಳಸಿ ರಾಮಚಂದ್ರ ಸೇರಿದಂತೆ ಮತ್ತಿತರರಿದ್ದರು.

ಮುಕ್ತ ವಿವಿ ಕುಲಪತಿಯಾಗಿ ಡಾ.ವಿದ್ಯಾಶಂಕರ ಮುಂದುವರಿಕೆ

ಮೈಸೂರು, ಮೇ 18(ಆರ್‌ಕೆ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಡಾ.ಎಸ್.ವಿದ್ಯಾಶಂಕರ ಅವರ ಅಧಿಕಾರಾವಧಿಯನ್ನು ಮತ್ತೆ ಒಂದು ವರ್ಷ ಮುಂದುವರಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಆದೇಶಿಸಿದ್ದಾರೆ.



2022ರ ಮೇ 29ಕ್ಕೆ ಡಾ. ಎಸ್. ವಿದ್ಯಾಶಂಕರ ಅವರ ಕುಲಪತಿ ಅಧಿಕಾರಾವಧಿ ಮುಕ್ತಾಯಗೊಳ್ಳುತ್ತಿತ್ತು. ಆದರೆ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಮೇ 30ರಿಂದ ಜಾರಿಗೆ ಬರುವಂತೆ ಮತ್ತೆ ಒಂದು ವರ್ಷದ ಅವಧಿಗೆ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಮುಂದುವರಿಯುವಂತೆ ಆದೇಶ ಹೊರಡಿಸಲಾಗಿದೆ.

ಮಂಡೇಪಂಡ ಶೈಲ ನಿಧನ



ಮೈಸೂರು,ಮೇ18– ಮೈಸೂರಿನ ಹೆಬ್ಬಾಳ್ 3ನೇ ಹಂತದ ಸಿಐಟಿಬಿ ಛತ್ರದ ಮುಂಭಾಗವಿರುವ ಹೆಚ್‌ಐಜಿ 34 ಸಂಖ್ಯೆಯ ಮನೆಯಲ್ಲಿ ವಾಸಿಸುತ್ತಿದ್ದ ರವಿ ಮಂಡೇಪಂಡ ಅವರ ಪತ್ನಿ ಮಂಡೇಪಂಡ ಶೈಲ(57) ಅವರು ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪುತ್ರ ಬನ್ನಿ ಬೆಳ್ಳಿಯಪ್ಪ ಹಾಗೂ ಅವರ ಬಂಧು ವರ್ಗವನ್ನು ಅಗಲಿದ್ದು, ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ಇಂದು ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತ್ತು ಎಮದು ಕುಟುಂಬದ ಮೂಲಗಳು ತಿಳಿಸಿವೆ.

ಪಂಜಾಬ್, ದೆಹಲಿ ಮಾದರಿ ರಾಜ್ಯದಲ್ಲೂ ಆಮ್ ಸರ್ಕಾರ

ನಿವೃತ್ತ ಪೊಲೀಸ್ ಅಧಿಕಾರಿ, ಆಮ್ ಆದ್ಮಿ ಮುಖಂಡ ಭಾಸ್ಕರ್‌ರಾವ್ ಆಶಯ

- ಆಮ್ ಆದ್ಮಿ ಜಾತಿ, ಹಣ ಬಲದಿಂದ ರಾಜಕೀಯ ಮಾಡಲ್ಲ
- ಯುವಕರಿಗೆ ಆದ್ಯತೆ, ಅಭಿವೃದ್ಧಿಯೇ ಮಂತ್ರ

ಮೈಸೂರು, ಮೇ 18(ಎಂಟಿವೈ)– ರಾಜ್ಯದಲ್ಲೂ ದೆಹಲಿ ಮತ್ತು ಪಂಜಾಬ್ ಮಾದರಿಯಲ್ಲಿ ಆಮ್ ಆದ್ಮಿ ಸರ್ಕಾರ ತರಬೇಕಾಗಿದೆ ಎಂದು ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಆಮ್ ಆದ್ಮಿ ಪಕ್ಷದ ಮುಖಂಡರೂ ಆದ ಭಾಸ್ಕರ್‌ರಾವ್ ಆಶಯ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿ ಮುಖ್ಯಮಂತ್ರಿ ಯಾವುದೇ ವಿದೇಶಕ್ಕೆ ಹೋಗುತ್ತಿಲ್ಲ. ಬದಲಾಗಿ ಶಿಕ್ಷಕರನ್ನು ವಿದೇಶಕ್ಕೆ ಕಳುಹಿಸಿ ಅಲ್ಲಿನ ಪದ್ಧತಿ ಅಳವಡಿಸುತ್ತಿದ್ದಾರೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳು ಖಾಸಗಿ ಶಾಲೆ ಬಿಟ್ಟು ಸರ್ಕಾರಿ ಶಾಲೆ ಸೇರುತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲೂ ಪಂಜಾಬ್ ಮತ್ತು ದೆಹಲಿ ಮಾದರಿಯಲ್ಲೇ ಸರ್ಕಾರ ತರಬೇಕು ಎಂಬುದು ನಮ್ಮ ಉದ್ದೇಶವಾಗಿದೆ ಎಂದರು.

ಜನರ ದುಡ್ಡನ್ನೇ ಜನರಿಗಾಗಿ ಬಳಕೆ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸರ್ಕಾರ ಎಲ್ಲಾ ಸೌಲಭ್ಯವನ್ನು ಉಚಿತವಾಗಿ ನೀಡಿ, ಹಲವು ಬಿಟ್ಟಿ ಯೋಜನೆಗಳನ್ನು ಜಾರಿಗೆ ತಂದು ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಆರೋಪಿಸುತ್ತಿದ್ದಾರೆ. ಆದರೆ, ನಮ್ಮ ಸರ್ಕಾರ ಯಾವುದನ್ನೂ ಬಿಟ್ಟಿ ಕೊಟ್ಟಿಲ್ಲ. ಜನರ ತೆರಿಗೆ ಹಣವನ್ನು ಯಾರಿಗೆ ತಲುಪಿಸಬೇಕೋ ಅವರಿಗೆ ಯೋಜನೆಗಳ ಮೂಲಕ ನೀಡಲಾಗುತ್ತಿದೆ. ಜನರಿಂದ ತೆರಿಗೆ ಮೂಲಕ ಸಂಗ್ರಹಿಸಿದ ಹಣದಲ್ಲೇ ಜನರಿಗೆ ಕಾರ್ಯಕ್ರಮಗಳನ್ನು ಕೊಡುತ್ತಿದ್ದೇವೆ. ದೆಹಲಿಯಲ್ಲಿ ಕೊಡುತ್ತಿರುವ ಸೌಲಭ್ಯಗಳನ್ನು ಸಾಲ ಮಾಡಿ ಕೊಡುತ್ತಿಲ್ಲ. ಕಾಮಗಾರಿಗಳಲ್ಲಿ ಉಳಿದ ಹಣದಿಂದ ಸೌಲಭ್ಯ ನೀಡುತ್ತಿದ್ದೇವೆ. ಭ್ರಷ್ಟಾಚಾರ ಮುಕ್ತ ಸರ್ಕಾರವಿರುವುದರಿಂದ ಇದು ಸಾಧ್ಯವಾಗಿದೆ ಎಂದು ಹೇಳಿದರು.



ಆಮ್ ಆದ್ಮಿ ಪಕ್ಷ ಎಂದಿಗೂ ಜಾತಿ ಬಲ, ಹಣ ಬಲದಿಂದ ರಾಜಕೀಯ ಮಾಡುವುದಿಲ್ಲ. ಜನಸಾಮಾನ್ಯರು ಹಾಗೂ ಯುವ ಜನರಿಗೆ ಹೆಚ್ಚಿನ ಅವಕಾಶ ನೀಡುವ ಏಕೈಕ ಪಕ್ಷವಾಗಿದೆ. 32 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ಈಗ ಆಮ್ ಆದ್ಮಿ ಪಾರ್ಟಿ ಸೇರಿದ್ದೇನೆ. ಬೆಳೆಯುತ್ತಿರುವ ಪಕ್ಷ ಸೇರಿಕೊಂಡು ಭ್ರಷ್ಟಾಚಾರ ರಹಿತ ಆಡಳಿತ ನೀಡಬೇಕು. ಹೊಸಬರು, ಯುವಕರು ರಾಜಕೀಯಕ್ಕೆ ಕರೆತರಬೇಕು ಎಂದು ಆಮ್ ಆದ್ಮಿ ಪಕ್ಷಕ್ಕೆ ಸೇರಿದ್ದೇನೆ ಎಂದು ಭಾಸ್ಕರ್ ರಾವ್ ತಿಳಿಸಿದರು.

ಮೈಸೂರಲ್ಲಿ ಗುಂಪುಗಾರಿಕೆ ಇಲ್ಲ: ಮೈಸೂರಲ್ಲಿ ಆಮ್ ಆದ್ಮಿ ಪಕ್ಷದಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ಆರಂಭದ ದಿನದಲ್ಲೂ ಪಕ್ಷ ಸಂಘಟನೆಗೆ ದುಡಿದ, ಈ ಹಿಂದೆ ಕೆಲವು ಚುನಾವಣೆಗಳಲ್ಲಿ ಪಕ್ಷದಿಂದ ಸ್ಪರ್ಧಿಸಿದ್ದ ಮುಖಂಡರು ಇಂದಿಗೂ ನಮ್ಮ ಪಕ್ಷದಲ್ಲೇ ಇದ್ದಾರೆ. ಅವರು ಮುಂದಿನ ದಿನಗಳಲ್ಲೂ ನಮ್ಮ ಪಕ್ಷದಲ್ಲೇ ಮುಂದುವರೆಯಲಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪದ್ಮಮ್ಮ ಹಾಗೂ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮಾಲಿನಿ ನಮ್ಮ ಪಕ್ಷದಲ್ಲೇ ಇದ್ದಾರೆ. ಯಾವುದೇ ಗುಂಪುಗಳು ನಮ್ಮ ಪಕ್ಷದಲ್ಲಿಲ್ಲ ಎಂದರು. ಗೋಷ್ಠಿಯಲ್ಲಿ ರಾಜ್ಯ ವಕ್ತಾರ ಶರತ್ ಖಾದ್ರಿ, ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ, ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷೆ ಧರ್ಮಶ್ರೀ ಇದ್ದರು.

ಅಕ್ರಮದ ವಾಸನೆ ಬಂದಿತ್ತು...

ಪಿಎಸ್‌ಐ ಪರೀಕ್ಷಾ ಅಕ್ರಮ ವಿಚಾರ ಕುರಿತು ಮಾತನಾಡಿದ ಭಾಸ್ಕರ್‌ರಾವ್, ನಾನು ಕಮಿಷನರ್ ಆದ ಸಂದರ್ಭದಲ್ಲಿ ಈ ಅಕ್ರಮದ ವಾಸನೆ ಬಂದಿತ್ತು. ನನಗಿಂತ ಕಿರಿಯ ಅಧಿಕಾರಿಯನ್ನು ನೇಮಕಾತಿ ವಿಭಾಗಕ್ಕೆ ನೇಮಿಸಲು ಮುಂದಾದಾಗ ಈ ಅನುಮಾನ ಬಲವಾಯಿತು. ತಮ್ಮ ರಾಜಕೀಯ ಹಿತಾಸಕ್ತಿಗೆ ಹೀಗೆ ಮಾಡುತ್ತಿದ್ದಾರೆ ಎಂದು ಈಗ ಅನ್ನಿಸುತ್ತಿದೆ ಎಂದು ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.05.2022 ಗುರುವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ : ಮೂಲ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಬಿ.ಶ್ರೀರಾಂಭಟ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ ಕೆ.ಎಲ್.ಪದ್ಮಿನಿ ಹೆಗಡೆ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಡಾ.ವಿ.ಸಹನಾ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಬೆಳಗ್ಗೆ:** 12.05 ವನಿತಾ ವಿಹಾರ, 12.30 ದೇವರನಾಮ–ಎಸ್.ಶಂಕರ್, ಡಾ.ಆರ್.ಎನ್.ಶ್ರೀಲತಾ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ–ಜಯಂತಿ ವಿ.ಭಟ್, 3.00 ರಾಗಲಹರಿ–ರಾಗ 'ಹಂಸನಾದ, ಪ್ರಸ್ತುತಿ–ಜಿ.ಪುಷ್ಪಲತಾ, 4.00 ಹಳ್ಳಿ ಹಾಡು–ಸತ್ತೇಗಾಲದ ಶಿವಮ್ಮ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, ಬೇಳೆ ಕಾಳು ಬೆಳೆಗಳ ಕೃಷಿ ಹಾಗೂ ಆಹಾರ ಭದ್ರತೆ ಕುರಿತು ಡಾ.ಹೆಚ್.ವಿ.ದಿವ್ಯಾ ಅವರೊಡನೆ ಸಂದರ್ಶನ, 9.00 ಹಲೋ ಯುವವಾಣಿ–ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 9.30 ಕನ್ನಡ ಭಾರತಿ, 10.00 ನಾಟಕ

- **ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ, ಜೆಎಸ್‌ಎಸ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ :** ಕಣ್ಣಿನ ಉಚಿತ ತಪಾಸಣಾ ಶಿಬಿರ, ಸ್ಥಳ: ಸರ್ಕಾರಿ ಆಸ್ಪತ್ರೆ, ಅಶೋಕಪುರಂ, ಬೆಳಗ್ಗೆ 10ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.
- **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ವೇದಸಭೆ, ವೇದಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರ ವಿತರಣೆ, ಬೆಳಗ್ಗೆ 10ಕ್ಕೆ ಚೈತನ್ಯಾರ್ಚನೆ–ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಾದ ವಿದ್ವಾನ್ ಆರ್.ವಿ. ಶ್ರೀರಾಮ ಘನಪಾಠಿ, ವಿದ್ವಾನ್ ಹರಿ ಸೀತಾರಾಮಮೂರ್ತಿ, ವಿದ್ವಾನ್ ಕೆ. ಸಂತೋಷಕುಮಾರ ಘನಪಾಠಿ, ವಿದ್ವಾನ್ ಡಿ. ಸುಬ್ರಹ್ಮಣ್ಯ ಜೋಷಿ, ವಿದ್ವಾನ್ ಟಿ.ವಿ.ಎಸ್. ರಾಘವೇಂದ್ರ ಶರ್ಮ, ವಿದ್ವಾನ್ ಆಕೆಳ್ಳ ವೆಂಕಟನಾರಾಯಣ ಮೂರ್ತಿ, ವಿದ್ವಾನ್ ವಿಂಜಮೂರಿ ಕುಮಾರ ಸೂರ್ಯನಾರಾಯಣ, ಡಾ. ಗೋಪಾಲಕೃಷ್ಣ ಶರ್ಮ, ವಿದ್ವಾನ್ ಆರ್. ಸುಬ್ರಹ್ಮಣ್ಯ ಘನಪಾಠಿ, ವಿದ್ವಾನ್ ದುವ್ವೂರಿ ಫಣಿಯಾಜಿ, ವಿದ್ವಾನ್ ಎಂ. ಶ್ರೀನಿವಾಸ ಘನಪಾಠಿ ಅವರಿಗೆ ಸನ್ಮಾನ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ :** ಹಿರಿಯ ವಿದ್ವಾಂಸ, ಇತಿಹಾಸ ತಜ್ಞ ಡಾ.ಎ.ವಿ. ನರಸಿಂಹಮೂರ್ತಿ ಅವರ ಇತಿಹಾಸದ ತಾರೆಗಳು ಕೃತಿ ಲೋಕಾರ್ಪಣೆ, ಕೃತಿ ಲೋಕಾರ್ಪಣೆ: ನಾಡೋಜ ಡಾ. ಭಾಷ್ಯಂ ಸ್ವಾಮೀಜಿ, ಕೃತಿ ಕುರಿತು ಮಾತನಾಡುವವರು : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಮುಖ್ಯ ಅತಿಥಿಗಳು : ಮಾಜಿ ಶಾಸಕ ವಾಸು, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.
- **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನ ಪಕ್ಕ, ಸಂಜೆ 6ಕ್ಕೆ.
- **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ರಕ್ಷಾಬಂಧನ, ಕಲ್ಯಾಣೋತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ, ಸಂಜೆ 6ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಹಿನಕಲ್‌ನಲ್ಲಿಂದು ಮೈಸೂರು ತಾಲೂಕು

- **ಹಿನಕಲ್ ಶ್ರೀ ಮಾರಮ್ಮನ ದೇವಸ್ಥಾನ :** ಬ್ರಹ್ಮಶಿಲಾ (ಕರುಕಲ್ಲು) ಪ್ರತಿಷ್ಠಾಪನೆ ಮತ್ತು ಪೂಜಾ ಮಹೋತ್ಸವ, ಬೆಳಗ್ಗೆ ನವಗ್ರಹ ಸ್ಥಾಪನೆ, ಗ್ರಹಶಾಂತಿ ಹೋಮ, ಗಣಪತಿ ಹೋಮ, ಮೃತ್ಯುಂಜಯ ಹೋಮ, ದುರ್ಗಾ ಹೋಮ, ಶಿಲೆಗೆ ಅಭಿಷೇಕ, ರುದ್ರಾಭಿಷೇಕ, ಸೂಕ್ತ ಪಾರಾಯಣ, ಜಲಾದಿವಾಸ, ಮಹಾಮಂಗಳಾರತಿ, ಸುದರ್ಶನ ಹೋಮ, ಪುಷ್ಪಾಧಿವಾಸ, ಫಲಾಧಿವಾಸ, ಧಾನ್ಯಾಧಿವಾಸ, ಅಷ್ಟಾವಧಾನ, ಮಹಾಮಂಗಳಾರತಿ, ಶಯನಾಧಿವಾಸ, ಸ್ಥಳ: ಶ್ರೀ ಮಾರಮ್ಮನ ದೇವಸ್ಥಾನದ ಆವರಣ, ಹಿನಕಲ್ ಗ್ರಾಮ

ಯುವತಿಯರನ್ನು ಲೈಂಗಿಕವಾಗಿ ಬಳಸಿಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದ ಕಾಮುಕನ ಬಂಧನ

ಮೈಸೂರು, ಮೇ 18–ಗೂಗಲ್ ಮೀಟ್, ಫೇಸ್‌ಬುಕ್ ಮುಂತಾದ ಸಾಮಾಜಿಕ ಜಾಲ ತಾಣಗಳ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು ಲೈಂಗಿಕವಾಗಿ ಬಳಸಿಕೊಂಡ ನಂತರ ಬ್ಲಾಕ್‌ಮೇಲ್ ಮಾಡುತ್ತಿದ್ದ ಕಾಮುಕನೋರ್ವನನ್ನು ಮೈಸೂರು ಜಿಲ್ಲೆ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.




ನಂಜನಗೂಡು ತಾಲೂಕು ಬಸವಟಿಕೆ ಗ್ರಾಮದ ಬಿ.ಜಿ.ಶಿವಪ್ರಕಾಶ್ ಬಂಧಿತ ಕಾಮುಕನಾಗಿದ್ದು, ಈತ ಸಾಮಾಜಿಕ ಜಾಲ ತಾಣದ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು ಪ್ರೀತಿ–ಪ್ರೇಮದ ನಾಟಕವಾಡಿ ಅವರನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದ. ಆ ಸಂದರ್ಭದಲ್ಲಿ ಯುವತಿಯರಿಗೆ ತಿಳಿಯದಂತೆ ವೀಡಿಯೋ ಮಾಡಿಕೊಳ್ಳುತ್ತಿದ್ದ ಆತ, ನಂತರ ಅದನ್ನಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದ ಎಂದು ಹೇಳಲಾಗಿದೆ. ಮೈಸೂರು ಮೂಲದ ಯುವತಿಯೋರ್ವಳನ್ನು ಇದೇ ರೀತಿ ಪರಿಚಯಿಸಿಕೊಂಡ ನಂತರ ವೀಡಿಯೋವನ್ನು ಸಾಮಾಜಿಕ ಜಾಲ ತಾಣದಲ್ಲಿ ಹರಿ ಬಿಡುವುದಾಗಿ ಬ್ಲಾಕ್‌ಮೇಲ್ ಮಾಡಿ ಸುಮಾರು 20 ಲಕ್ಷ ರೂ.ವರೆಗೆ ಆಕೆಯಿಂದ ಪಡೆದಿದ್ದನೆನ್ನಲಾಗಿದ್ದು, ಮತ್ತೆ ಹಣಕ್ಕಾಗಿ ಪೀಡಿಸಿದಾಗ ಯುವತಿ ಪೊಲೀಸರಿಗೆ ದೂರು ಸಲ್ಲಿಸಿದ್ದು, ಮಹಿಳಾ ಠಾಣೆ ಪೊಲೀಸರು ಆತನನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ. ಈತ ಹಲವಾರು ಯುವತಿಯರ ವೀಡಿಯೋ ಇಟ್ಟುಕೊಂಡಿದ್ದು, ಅವರನ್ನೆಲ್ಲಾ ಬ್ಲಾಕ್‌ಮೇಲ್ ಮಾಡುತ್ತಿದ್ದ ಎಂದು ಹೇಳಲಾಗಿದೆ.



ಕಳೆದಿದೆ

O.N. ಮಣಿಕಂಠ, S/o O.V. ನಾಗೇಂದ್ರ ಗುಪ್ತ, #466–1, SKPT Street, ಹನೂರು, ಚಾಮರಾಜನಗರ ಜಿಲ್ಲೆ, ಇವರಿಗೆ ಸೇರಿದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನ ಛತ್ರ ಹೋಬಳಿ, ಹೆಜ್ಜಿಗೆ ಗ್ರಾಮದ ಸರ್ವೆ ನಂ. 170/2 ರಲ್ಲಿ 1.28 ಎಕರೆ ಜಮೀನಿನ 2214/86–87ನೇ ಕ್ರಯಪತ್ರ ಮತ್ತು ಸ.ನಂ. 169/1ರಲ್ಲಿ 1.21 ಎಕರೆ ಜಮೀನಿನ 1151/86–87, 2226/86–87ನೇ ನಂಬರುಗಳ ಒಟ್ಟು 03 ಕ್ರಯ ಪತ್ರಗಳ ಮೂಲ ಪ್ರತಿಯು ಕಳೆದಿದೆ.
ಸಿಕ್ಕಿದವರು ಸಂಪರ್ಕಿಸಿ:
9449509729, 9481818282



ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮಳವಳ್ಳಿ
ಜಾರಿ ಅರ್ಜಿ ಸಂಖ್ಯೆ: 1/2021

ಅರ್ಜಿದಾರರು :ಶ್ರೀಮತಿ ಪುಷ್ಪ ಎಂ.ವಿ.ಕೋಂ ಶಿವಕುಮಾರ್ ವಯಸ್ಸು : 40 ವರ್ಷ ವಾಸ: # 365, ಸ್ವಿಮಿಂಗ್‌ಪುಲ್ ರಸ್ತೆ, 5ನೇ ಮೈನ್, ಸರಸ್ವತಿಪುರಂ, ಮೈಸೂರು.
ವಿರುದ್ಧ
ಎದುರುದಾರರು: ಶ್ರೀ ಪುಟ್ಟರಾಜು ಎಂ.ಕೆ.ಬಿನ್ ಲೇಟ್ ಕೆಂಪೇಗೌಡ. ವಯಸ್ಸು: ಸುಮಾರು 60 ವರ್ಷವಾಸ: ಮಾದಹಳ್ಳಿ ಗ್ರಾಮ, ಕಿರುಗಾವಲು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ : ಮೇಲ್ಕಂಡ ಡಿಕ್ರಿದಾರರಾದ ಶ್ರೀಮತಿ ಪುಷ್ಪ ಎಂ.ವಿ. ರವರು ನಿಮ್ಮ ವಿರುದ್ಧ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನಿನ ಬಾಬ್ತು ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಲಯ, ಮಳವಳ್ಳಿ ಅಸಲು ದಾವಾ ಸಂಖ್ಯೆ: 393/2018 ರಲ್ಲಿ ತಮ್ಮ ವಿರುದ್ಧ ನಿರ್ದಿಷ್ಟ ಪರಿಹಾರ ಕೋರಿ ಸಲ್ಲಿಸಿದ ದಾವಾದಲ್ಲಿನ ತೀರ್ಪು ಮತ್ತು ಡಿಕ್ರಿ ದಿನಾಂಕ: 29–02–2020ರಂತೆ ದಾವಾ ಸ್ವತ್ತಿನ ಬಾಬ್ತು ತಾವು ಡಿಕ್ರಿದಾರರ ಪರ ನೋಂದಾಯಿತ ಕ್ರಯಪತ್ರವನ್ನು ನಿಮಗೆ ಪಾವತಿಸಬೇಕಾದ ಕ್ರಯದ ಪ್ರತಿಫಲ ಬಾಕಿ ಹಣ ರೂ.50,000–00 ಗಳನ್ನು ಪಡೆದುಕೊಂಡು ಸಕ್ಷಮ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಿಕೊಡಲು ಕೋರಿ ಸಲ್ಲಿಸಿದ ಅರ್ಜಿ ಇದಾಗಿದ್ದು, ನ್ಯಾಯಾಲಯದಿಂದ ತಮ್ಮ ಮೇಲ್ಕಂಡ ವಿಳಾಸಕ್ಕೆ ತಮಗೆ ನ್ಯಾಯಾಲಯದಿಂದ ನೋಟಿಸ್‌ನ್ನು ಕಳುಹಿಸಿದ್ದಾಗ್ಯೂ, ನೀವು ಪಡೆದುಕೊಳ್ಳದೆ ಹಿಂದಿರುಗಿಸುತ್ತಿರುತ್ತೀರಿ. ಆದ್ದರಿಂದ ಈ ತಿಳುವಳಿಕೆ ನೀಡಲಾಗಿದೆ. ಈ ಮೇಲಿನ ಜಾರಿ ಅರ್ಜಿಯ ಮುಂದಿನ ಸುನಾವಣಾ ದಿನಾಂಕ: 04.06.2022 ರಂದು ಬೆಳಿಗ್ಗೆ 11–00. ಗಂಟೆಗೆ ನಿಗದಿಯಾಗಿದ್ದು ಆ ದಿನ ನೀವು ನಿಮ್ಮ ಪರ ದಾಖಲಾತಿಗಳು ಏನಾದರೂ ಇದ್ದಲ್ಲಿ ಖುದ್ದಾಗಿಯಾಗಲಿ ಯಾ ನಿಮ್ಮ ಮೂಲಕ ನಿರ್ದೇಶಕರಾದ ವಕೀಲರ ಮೂಲಕವಾಗಲಿ ಈ ಘನ ನ್ಯಾಯಾಲಯದಲ್ಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ತಕರಾರು ಏನು ಇಲ್ಲವೆಂದು ತಿಳಿದು ಏಕಪಕ್ಷೀಯ ಆದೇಶವನ್ನು ಮಾಡುತ್ತದೆಂದು ತಿಳಿಯತಕ್ಕದ್ದು

ಷೆಡ್ಯೂಲ್ : ಮಳವಳ್ಳಿ ತಾಲ್ಲೂಕು, ಕಿರುಗಾವಲು ಹೋಬಳಿ, ಮಾದಹಳ್ಳಿ ಗ್ರಾಮದ ಸರ್ವೆ ನಂ.56/3 ರಲ್ಲಿ ಪೂರ್ತಾ ವಿಸ್ತೀರ್ಣ 1 ಎಕರೆ 0–21 ಗುಂಟೆ ಅಕಾರ ರೂ.2–07 ಪೈಸೆವುಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ನಮ್ಮ ಬಾಬ್ತು ಬೇರೆ ಜಮೀನು, ಪಶ್ಚಿಮಕ್ಕೆ : ಸರ್ಕಾರಿ ಓಣಿ, ಉತ್ತರಕ್ಕೆ : ಕೆಂಚೇಗೌಡ, ರಾಜಣ್ಣ ರವರ ಜಮೀನು, ದಕ್ಷಿಣಕ್ಕೆ : ಸರ್ಕಾರಿ ಓಣಿ. ದಿನಾಂಕ: 16.05.2022ರಂದು ನ್ಯಾಯಾಲಯದಲ್ಲಿ ಅಪ್ಪಣೆ ಮೇರೆಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಮುಖ್ಯ ಲಿಪಿಕಾ ಅಧಿಕಾರಿ, ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ, ನ್ಯಾಯಾಲಯ , ಮಳವಳ್ಳಿ
ಅರ್ಜಿದಾರರ ಪರ ವಕೀಲರು
ಸಹಿ/–ಶ್ರೀ ಕೃಷ್ಣಸ್ವಾಮಿ, ವಕೀಲರು ,ಮೈಸೂರು
ಸ್ಥಳ: ಮಳವಳ್ಳಿ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರು, **ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹಳೇ ಕೆಂಪಯ್ಯನ ಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಎಂ. ಪುಟ್ಟಸ್ವಾಮಿರವರ ಧರ್ಮಪತ್ನಿಯಾದ ಶ್ರೀಮತಿ ಅನಿತಾ ಹಾಗೂ ಇವರ ಕುಟುಂಬಸ್ಥರಿಂದ** ಶುದ್ಧ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 15 (ಹದಿನೈದು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: **ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೋಕು, ಕಸಬಾ ಹೋಬಳಿ, ಬೊಮ್ಮನಾಯಕನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ: 133/1 ರ ವಿಸ್ತೀರ್ಣ 1 ಎಕರೆ 24 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ: ಪೂರ್ವಕ್ಕೆ : ನಾಗರವರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ: ಸರ್ಕಾರಿ ರಸ್ತೆ, ಉತ್ತರಕ್ಕೆ: ಪುಟ್ಟಸ್ವಾಮಿ ರವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ: ಮಣ್ಣು ರಸ್ತೆ .**

ಸಹಿ/–ರವಿಕಿರಣ್.ಎಸ್
ಬಿಎಸ್‌ಸಿ, ಎಲ್‌ಎಲ್‌ಬಿ, ವಕೀಲರು,
KAR No: 713/2000
Office: #1143/1E, 1st Floor, Chanakaya Circle, Geetha Road, Chamarajapuram, Mysore-570004
Ph: 9980776068
ದಿನಾಂಕ: 16–05–2022
ಸ್ಥಳ: ಮೈಸೂರು.



ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–10/2022–23 ದಿನಾಂಕ: 18.05.2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತದ ಬಡಾವಣೆಯಲ್ಲಿ ಎಲ್ಲಾ ಸಾರ್ವಜನಿಕ ಸೌಲಭ್ಯಗಳನ್ನೊಳಗೊಂಡ ವಿವಿಧ ವರ್ಗದ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ. ಪ್ರಸ್ತುತ ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಆರಂಭಿಕ ಠೇವಣಿ ಮೊತ್ತವನ್ನು e-Payment ಮೂಲಕ ಪಾವತಿ ಮಾಡಬಹುದಾಗಿದೆ. ಅರ್ಜಿ ಜೊತೆಯಲ್ಲಿ ಪಾವತಿಸಬೇಕಾದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ವಿವರಗಳು ಈ ಕೆಳಕಂಡಂತಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20–06–2022

ಕ್ರ ಸಂ	ಸ್ಥಳ ಮತ್ತು ಜಿಲ್ಲೆ	ವರ್ಗ	ಅಂದಾಜು ಸ್ವತ್ತುಗಳ ವಿವರ	ನೊಂದಣಿ ಶುಲ್ಕ	ಆರಂಭಿಕ ಠೇವಣಿ	ಮಂಡಳಿಯ ದರ ಪ್ರತಿ ಚದರಡಿಗೆ (ರೂ.ಗಳಲ್ಲಿ)
1	ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತ	LIG	21	500/-	25,000/-	ರೂ. 455/–
2		MIG	121	1000/-	50,000/-	
3		HIG	36	1500/-	75,000/-	

ಅರ್ಜಿ ಮತ್ತು ಆರಂಭಿಕ ಠೇವಣಿ ಹಣ ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ದಿನಾಂಕ: 18.05.2022
DIPR/CP/551/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–5:820:2022–23 ದಿನಾಂಕ: 07–05–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ

ಮೈಸೂರು ತಾಲ್ಲೋಕು, ಜೈಪುರ ಹೋಬಳಿ, ಕಳಲವಾಡಿ ಗ್ರಾಮದ ಸರ್ವೆ ನಂ. 181 ರ 03 ಎಕರೆ 29 ಗುಂಟೆ, 182ರ 03 ಎಕರೆ 27 ಗುಂಟೆ, 183ರ 03 ಎಕರೆ 27 ಗುಂಟೆ, 184ರ 01 ಎಕರೆ 31 ಗುಂಟೆ ಮತ್ತು 185ರ 03ಎಕರೆ 31 ಗುಂಟೆ ಒಟ್ಟು 16 ಎಕರೆ 25ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಸಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಜಗದೀಶ್ ಮತ್ತು ಇತರರುಗಳ ಪರವಾಗಿ ಜಿ.ಪಿ.ಎ.ದಾರರಾದ ಶ್ರೀಎಸ್.ಎಂ.ಶಿವಪ್ರಕಾಶ್ & ಶ್ರೀ ಪ್ರವೀಣ್ ಇವರಗಳು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು



ನಕ್ಕರೆ ಅದೇ ಸ್ವರ್ಗ

ಗುಂಡ : "ಏಕೆ ಆ ಸಮೋಸಾದ ಒಳಗಿರುವ ತರಕಾರಿಯನ್ನು ಮಾತ್ರ ತಿನ್ನುತ್ತಿದ್ದೀಯಾ?"

ಮನು : "ಏಕೆಂದರೆ ಹೊರಗಡೆಯದ್ದು ಏನನ್ನೂ ತಿನ್ನಬಾರದು ಅಂತ ನನ್ನಮ್ಮ ಹೇಳಿದ್ದಾರೆ!!"

ಮೈಸೂರು ಮಿತ್ರ

ಗುರುವಾರ, 19 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜೀವನದಲ್ಲಿ ತೃಪ್ತಿ ಎನ್ನುವುದು ಸಕಲ ಸುಖಕ್ಕೂ ಮೂಲ –ಎ.ವಿ.ಕೂಪರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ನವಿಲು ನೋಡಿ ಕೆಂಬೂತ ಪುಕ್ಕ ತರಕೊಂಡಂಗೆ

ನಿಮ್ಮ ಪತ್ರಗಳು

ಉಪನ್ಯಾಸಕನಿಂದ ರಾಜಕೀಯ!?

ಮಾನ್ಯರೆ,

ಮಂಗಳವಾರ ಮೈಸೂರಲ್ಲಿ ಪತ್ರಿಕಾಗೋಷ್ಠಿ ನಡೆಸಿರುವ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡರು, ಕಳೆದ 35 ವರ್ಷದಿಂದ ಜಯರಾಂ ಕಿಲಾರ ಜಾತ್ಯತೀತ ಜನತಾ ದಳದ ಕಾರ್ಯಕರ್ತರಾಗಿ ಪರೋಕ್ಷವಾಗಿ ದುಡಿದಿದ್ದಾರೆ. ಅವರಿಗೆ ಈಗ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುತ್ತಿರುವ ಚುನಾವಣೆಗೆ ಜೆಡಿಎಸ್ ಟಿಕೆಟ್ ನೀಡದಿರುವುದು ತಪ್ಪು. ಅವರ ಬಳಿ ಹಣ ಇಲ್ಲದ್ದಕ್ಕೆ ಜೆಡಿಎಸ್‌ನವರು ಟಿಕೆಟ್ ನೀಡದೇ, ಹಣವಿರುವ ರಾಮುಗೆ ಟಿಕೆಟ್ ನೀಡಿದ್ದಾರೆ ಎಂದು ಅಣಿಮುತ್ತು ಉದುರಿಸಿದ್ದಾರೆ. ಅದನ್ನು ವಿರೋಧಿಸಿ, ತಾವು ಜೆಡಿಎಸ್ ತೊರೆಯಲು ನಿರ್ಧರಿಸಿರುವುದಾಗಿ ಹೇಳಿದ್ದಾರೆ. ಏನು ಸ್ವಾಮಿ, ಜಯರಾಂ ಕಿಲಾರ ಅವರು ಮಹಾರಾಣಿ ಜೂನಿಯರ್ ಕಾಲೇಜಲ್ಲಿ ಉಪನ್ಯಾಸಕರಾಗಿದ್ದರು ಎಂದು ಕೇಳಿದ್ದೇನೆ. ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕಾದವರು ಒಂದು ರಾಜಕೀಯ ಪಕ್ಷದ ಕಾರ್ಯಕರ್ತರಾಗಿ ಕಾರ್ಯ ನಿರ್ವಹಿಸಬಹುದೇ? ಅದಕ್ಕೆ ಸರ್ಕಾರಿ ಸೇವಾ ನಿಯಮಗಳಲ್ಲಿ ಅವಕಾಶವಿದೆಯೇ? ಒಂದು ವೇಳೆ ಇಲ್ಲ ಎನ್ನುವುದೇ ಆದರೆ ವಿಧಾನಪರಿಷತ್ ಸದಸ್ಯರ ಹೇಳಿಕೆಯನ್ನೇ ಆಧರಿಸಿ, ಜಯರಾಂ ಕಿಲಾರ ಅವರ ಮೇಲೆ ಕ್ರಮ ಜರುಗಿಸಲೇಬೇಕಲ್ಲವೆ. ಪಾಠ ಮಾಡಬೇಕಾದ ಉಪನ್ಯಾಸಕ ರಾಜಕೀಯ ಮಾಡಿದರೆ ಮಕ್ಕಳ ಪಾಡೇನು ಸ್ವಾಮಿ? ನಮ್ಮ ಶಿಕ್ಷಣ ವ್ಯವಸ್ಥೆ ಏನಾಯಿತು. ಮೈಸೂರು ಜಿಲ್ಲಾಧಿಕಾರಿಗಳು, ಪ್ರಾದೇಶಿಕ ಆಯುಕ್ತರು, ಶಿಕ್ಷಣ ಇಲಾಖೆ ಅಧಿಕಾರಿಗಳು ವಿಧಾನಪರಿಷತ್ ಸದಸ್ಯರ ಹೇಳಿಕೆಯ ಸಂಬಂಧ ಏನು ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡೋಣ.

– ನರೇಂದ್ರ, ವಿಜಯನಗರ 2ನೇ ಹಂತ, ಮೈಸೂರು.


ಇಂತಹ ಇಡ್ಲಿ ಸೇವನೆ ಹಾನಿಕರ

ಮಾನ್ಯರೆ,

ಮೈಸೂರಿನ ಹಲವಾರು ಹೋಟೆಲ್‌ಗಳು ಹಾಗೂ ರಸ್ತೆ ಬದಿಯ ಫಾಸ್ಟ್ ಫುಡ್ ಸೆಂಟರ್‌ಗಳಲ್ಲಿ ಇಡ್ಲಿ ಪಾತ್ರೆಯ ತಟ್ಟೆಗಳಿಗೆ ಬಟ್ಟೆ ಹಾಕಿ ಬೇಯಿಸಿದರೆ, ನಿತ್ಯ ಬಟ್ಟೆ ಸ್ವಚ್ಛಗೊಳಿಸುವುದರ ಜೊತೆಗೆ ಬಟ್ಟೆಗೆ ಇಡ್ಲಿ ಅಂಟಿಕೊಂಡರೆ ಅದನ್ನು ಬಿಡಿಸುವುದು ಕಷ್ಟ ಹಾಗೂ ಇಡ್ಲಿ ಬೇಗ ಬೇಯದೆ ಗ್ಯಾಸ್ ಸಹ ಹೆಚ್ಚು ಖರ್ಚಾಗುತ್ತದೆ ಎಂದು ಇಡ್ಲಿ ಬೇಯಿಸಲು ತೆಳುವಾದ ಬಟ್ಟೆಬದಲಿಗೆ ಪ್ಲಾಸ್ಟಿಕ್ ಕವರ್ ಬಳಸಲಾಗುತ್ತಿದೆ. ಹೀಗೆ ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಬಳಸುವುದರಿಂದ ಅದು ಕರಗಿ ಅದರಿಂದ ಜೀವ ವಿರೋಧಿ ರಾಸಾಯನಿಕಗಳು ಬಿಡುಗಡೆಯಾಗಿ ಅದು ಇಡ್ಲಿಗೆ ಸೇರಿ ಅದನ್ನು ತಿನ್ನುವವರ ಜೀವಕ್ಕೇ ಮಾರಕವಾಗುವ ಸಂಭವವೇ ಹೆಚ್ಚು. ಹೀಗಾಗಿ, ನಗರಪಾಲಿಕೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಇದನ್ನು ಪತ್ತೆ ಹಚ್ಚಿ ದಂಡ ವಿಧಿಸಿ ಇಡ್ಲಿ ಬೇಯಿಸಲು ಬಟ್ಟೆಯನ್ನೇ ಬಳಸುವಂತೆ ಕಟ್ಟುನಿಟ್ಟಾಗಿ ತಿಳುವಳಿಕೆ ನೀಡಬೇಕಿದೆ.

–ಬಿ.ಗಣೇಶ,
ಕೆ.ಜಿ.ಕೊಪ್ಪಲು, ಮೈಸೂರು.

ಈ ರಸ್ತೆಗೆ ಕಾಯಕಲ್ಪ ಅನಿವಾರ್ಯ



ಮಾನ್ಯರೆ,

ಮೈಸೂರಿನ ಹೊರವಲಯ ಇಲವಾಲದ (ಮೈಸೂರಿನಿಂದ ಬಂಟ್ವಾಳ ರಸ್ತೆಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ 88) ಎನ್.ಜೆ. ಆಸ್ಪತ್ರೆಗೆ ಸಂಪರ್ಕ ಕಲ್ಪಿಸುವ ಸುಮಾರು 1.5 ಕಿ.ಮೀ. ಉದ್ದದ ರಸ್ತೆ ಹಳ್ಳಕೊಳ್ಳಗಳಿಂದ ಕೂಡಿದ್ದು, ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದೆ. 2020 ರಿಂದಲೂ ಯಾವುದೇ ಅಧಿಕಾರಿಗಳು ಇತ್ತ ಪರಿಶೀಲಿಸಿ, ರಸ್ತೆ ರಿಪೇರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನವೂ ಮಾಡಿಲ್ಲ. ಈ ರಸ್ತೆಯ ಸುತ್ತಮುತ್ತಲಿನ ಗ್ರಾಮಗಳಾದ ನಾಗವಾಲ, ಬೊಮ್ಮೇನಹಳ್ಳಿ ಇನ್ನಿತರ ಗ್ರಾಮಗಳ ನಿವಾಸಿಗಳು ಎನ್.ಜೆ. ಆಸ್ಪತ್ರೆಗೆ ಚಿಕಿತ್ಸೆಗೆ ಹೋಗುವುದುಂಟು. ಆದ್ದರಿಂದ ತಕ್ಷಣ ಈ ರಸ್ತೆ ರಿಪೇರಿ ಮಾಡಿ, ರೋಗಿಗಳ ಕಾಪಾಡುವುದರ ಜೊತೆಗೆ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಅಲ್ಲದೆ ಈ ರಸ್ತೆಯು ಆಚಾರ್ಯ ವಿದ್ಯಾಕುಲ (ಎವಿಕೆ) ಶಾಲೆಗೆ ಸಂಪರ್ಕ ಕಲ್ಪಿಸಲಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರಯಾಣಿಸುವುದುಂಟು. ಮಳೆಗಾಲ ಆರಂಭವಾಗುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯನ್ನು ರಿಪೇರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ನೊಂದ ನಾಗರಿಕ, ಮೈಸೂರು.

ಹೆಡಗೆವಾರ್ ಭಾಷಣ ಸೇರ್ಪಡೆ ಸೂಕ್ತ

ಮಾನ್ಯರೆ,

ರಾಜ್ಯ ಸರ್ಕಾರ ಹತ್ತನೇ ತರಗತಿ ಪಠ್ಯಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಂ ಹೆಡಗೆವಾರ್ ಅವರ ಭಾಷಣ ಸೇರ್ಪಡೆ ಮಾಡಿರುವುದು ಅತ್ಯಂತ ಸಮಂಜಸ ಹಾಗೂ ಸೂಕ್ತ ತೀರ್ಮಾನವಾಗಿದೆ.

ದೇಶ ಅನುಭವಿಸಿದ ಅನೇಕ ಕಷ್ಟಕರ ಸನ್ನಿವೇಶಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ಮಹತ್ವದ ಕಾಯಕಗಳನ್ನು ನಡೆಸಿದೆ. ಭಾರತದ ಪ್ರಮುಖ ಜನ ಸಮುದಾಯವಾದ ಹಿಂದೂಗಳಲ್ಲಿ ಜಾಗೃತಿಯನ್ನು ತಂದಿದೆ. ಇದು ಹೆಡಗೆವಾರ್ ಅವರ ಚಿಂತನೆಗಳಿಂದ ಮೂಡಿದ್ದು ಎಂಬುದು ಮಹತ್ವದ್ದು. ಈ ಸಂಸ್ಥೆ ದೇಶಕ್ಕೆ ಉತ್ತಮ ಕಾರ್ಯಕರ್ತರನ್ನು, ಉತ್ತಮ ನೇತಾರರನ್ನು ಕೊಟ್ಟಿದೆ ಎಂದರೆ ತಪ್ಪಾಗಲಾರದು. ಇಂತಹ ನಿಸ್ವಾರ್ಥ ಸ್ವಯಂ ಸೇವಾ ಸಂಘವನ್ನು ಸ್ಥಾಪಿಸಿದ ಕೇಶವ ಬಲಿರಾಂ ಹೆಡಗೆವಾರ್ ದೇಶ ಕಂಡ ಹಲವು ಮಹನೀಯರಲ್ಲಿ ಪ್ರಮುಖರಾಗಿದ್ದಾರೆ. ಇವರು ನಮ್ಮ ನಾಡು ಕಂಡ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಶ್ರೇಷ್ಠ ಸಮಾಜ ಸೇವಕರು ಹಾಗೂ ಸುಧಾರಕರು ಆಗಿದ್ದವರು. ಅಲ್ಲದೆ ಕೋಟ್ಯಾಂತರ ಯುವಪೀಳಿಗೆಗೆ ಮಾದರಿ ಹಾಗೂ ಪ್ರೇರಣೆಯಾಗಿದ್ದರು. ತಮ್ಮ ವೈಯಕ್ತಿಕ ಜೀವನಕ್ಕಿಂತ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದವರು. ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯಂತಹ ದೊಡ್ಡ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಶ್ರಮಿಸಿದ್ದವರು.

ಆರ್‌ಎಸ್‌ಎಸ್‌ನಂತಹ ಒಂದು ದೊಡ್ಡ ಸಂಘಟನೆಯನ್ನು ಹೆಡಗೆವಾರ್ ಕಟ್ಟಿದ್ದರು ಎಂಬ ಒಂದೇ ಒಂದು ಕಾರಣಕ್ಕೆ ಅವರ ಭಾಷಣವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲು ವಿರೋಧಿಸುವವರು ಕೂಡ ಸಂಕುಚಿತ ಮನಸ್ಸಿನವರು ಎಂದರೆ ತಪ್ಪಾಗಲಾರದು. ಇಂತಹ ಮಹಾನ್ ವ್ಯಕ್ತಿಯ ಭಾಷಣವನ್ನು ಹತ್ತನೇ ತರಗತಿಯ ಪಠ್ಯಪುಸ್ತಕದಲ್ಲಿ ಅಳವಡಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಅತ್ಯಂತ ಸೂಕ್ತವಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರಕ್ಕೆ ತುಂಬು ಹೃದಯದ ಧನ್ಯವಾದಗಳು.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ತೆರೆದವು ಶಾಲೆಗಳು: ಜ್ಞಾನಾರ್ಜನೆಯನ್ನು ಸುರಕ್ಷಿತ–ಸುಸ್ಥಿರ ಅನುಭವವನ್ನಾಗಿಸುವುದು ಹೇಗೆ?

> "ಶಾಲೆಗಳಲ್ಲಿ ಗುಣಮಟ್ಟದ ಬೋಧನೆ–ಕಲಿಕೆಗೆ ಸೂಕ್ತವಾದ ಶೈಕ್ಷಣಿಕ ವಾತಾವರಣದ ಸೃಷ್ಟಿ ಎಷ್ಟು ಮುಖ್ಯವೋ ತರಗತಿಗಳ, ಅಧ್ಯಾಪಕರ ಕೊಠಡಿಗಳ, ಆಟದ ಮೈದಾನ, ಶೌಚಾಲಯಗಳ, ಒಟ್ಟಿನಲ್ಲಿ ಇಡೀ ಶಾಲೆಯ ಭೌತಿಕ ಪರಿಸರವನ್ನು ಶುಚಿಯಾಗಿಡುವುದೂ ಅಷ್ಟೇ ಮುಖ್ಯ. ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಂಪೂರ್ಣವಾಗಿ ಮುಚ್ಚಿದ್ದರಿಂದ ಅನೇಕ ಶಾಲಾ ಕಟ್ಟಡಗಳು ಅಸುರಕ್ಷಿತ ಸ್ಥಿತಿಯಲ್ಲಿದ್ದು ಈಗ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ, ತಕ್ಷಣವೇ ಅವುಗಳ ದುರಸ್ತಿ ಕಾರ್ಯ ಆಗುವುದಿಲ್ಲ ಎಂದೆನಿಸುತ್ತದೆ.

ಸುಮಾರು ಎರಡು ವರ್ಷಗಳ ಕಾಲ ಮುಚ್ಚಿದ್ದ ಶಾಲೆಗಳು ತೆರೆಯುವ ಕಾಲ ಕೊನೆಗೂ ಬಂದಿದೆ. ಬಹುತೇಕ ಸರ್ಕಾರಿ, ಅನುದಾನಿತ ಮತ್ತು ಅನೇಕ ಖಾಸಗಿ ಶಾಲೆಗಳು ನಾಲ್ಕು ದಿನಗಳ ಹಿಂದಷ್ಟೇ ತೆರೆದಿದ್ದು ಕೇಂದ್ರೀಯ ಪಠ್ಯಕ್ರಮವನ್ನು ಅಳವಡಿಸಿಕೊಂಡಿರುವ ಶಾಲೆಗಳು ಸದ್ಯದಲ್ಲಿಯೇ ಕಾರ್ಯಾರಂಭ ಮಾಡಲಿವೆ ಎಂಬ ಆಶಾದಾಯಕ ಸುದ್ದಿ ಬಂದಿದೆ. ಮಕ್ಕಳೂ ಸೇರಿದಂತೆ ಅನೇಕರಲ್ಲಿ ಇದು ನೆಮ್ಮದಿಯ ನಿಟ್ಟುಸಿರನ್ನು ತಂದಿದ್ದರೂ ವ್ಯಕ್ತ–ಅವ್ಯಕ್ತ ಭಯ ಎಲ್ಲೋ ಒಂದೆಡೆ ಶಿಕ್ಷಣ ವ್ಯವಸ್ಥೆಯ ಎಲ್ಲ ಭಾಗೀದಾರರನ್ನೂ ಕಾಡುತ್ತಿದೆ. ಇನ್ನೂ ನಮ್ಮನ್ನು ಬಿಟ್ಟು ಹೋಗದ ಕೋವಿಡ್‌ನ ನೆರಳು ಒಂದೆಡೆಯಾದರೆ, ಕಳೆದು ಹೋದ ಶೈಕ್ಷಣಿಕ ಬದುಕನ್ನು ಮರು ಕಟ್ಟಿಕೊಡುವುದು ಹೇಗೆ ಎಂಬ ಆತಂಕ ಮತ್ತೊಂದೆಡೆ, ಶಾಲಾ ವ್ಯವಸ್ಥೆಯನ್ನು ಬಾಧಿಸುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಶಾಲೆಗಳನ್ನು ಸೇರದ ಅಥವಾ ಮಧ್ಯದಲ್ಲೇ ಬಿಟ್ಟ ಮಕ್ಕಳನ್ನು ಶಾಲೆಗಳಿಗೆ ಮರು ಕರೆತರುವುದು ಹೇಗೆ ಎಂಬ ಪ್ರಶ್ನೆಗಳಿಗೂ ಉತ್ತರವನ್ನು ಹುಡುಕಬೇಕಾಗಿದೆ.

ಕೋವಿಡ್‌ನ ನಾಲ್ಕನೇ ಅಲೆ ಬರುವ ಸಾಧ್ಯತೆ ಇದೆ. ಈಗಾಗಲೇ ಕೆಲ ದೇಶಗಳಲ್ಲಿ ಅದರ ಹರಡುವಿಕೆಯ ಪ್ರಮಾಣ ಕಳವಳಕಾರಿ ಘಟ್ಟ ತಲುಪುತ್ತಿದೆ ಎಂಬ ಸುದ್ದಿಗೆ ಹೆಚ್ಚು ಹೆಚ್ಚು ಚಾಲ್ತಿ ದೊರೆತ ಹಾಗೆಲ್ಲಾ ಅನೇಕ ಪೋಷಕರು ಮತ್ತೆ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವ ಬಗ್ಗೆ ಅನಿಶ್ಚಿತ ಸ್ಥಿತಿಗೆ ತಲುಪಿದ್ದಾರೆ. ದೇಶದಾದ್ಯಂತ ಲಸಿಕೆಯ ನೀಡಿಕೆ ಚಳವಳಿಯೋಪಾದಿಯಲ್ಲಿ ಬಹು ಕಡೆಗಳಲ್ಲಿ ನಡೆದಿದ್ದರೂ, ಮಕ್ಕಳಿಗೆ ಲಸಿಕೆ ನೀಡಿದ್ದರೂ ಕೋವಿಡ್ ಮತ್ತೆ ಎಲ್ಲಿ ತನ್ನ ಕಬಂಧಬಾಹುಗಳನ್ನೂ ಚಾಚಿ ಮಕ್ಕಳನ್ನು ಸೆಳೆಯುತ್ತದೆಯೋ ಎಂಬ ಭಯ ಗುಪ್ತಗಾಮಿನಿಯಂತೆ ಪೋಷಕರ ಮನಸ್ಸಿನಲ್ಲಿ ಕಾಡುತ್ತಲೇ ಇದೆ.

ಮಾಧ್ಯಮ ವರದಿಗಳ ಅನ್ವಯ ಅನೇಕ ಶಾಲೆಗಳಲ್ಲಿ ಅವರವರ ಸಂಪನ್ಮೂಲ–ಸಾಮರ್ಥ್ಯಗಳಿಗನುಗುಣವಾಗಿ ಮುಂಜಾಗ್ರತಾ ಕ್ರಮಗಳನ್ನೂ ಈಗಾಗಲೇ ತೆಗೆದುಕೊಂಡಿದ್ದು ಮಕ್ಕಳು ಶಾಲೆಗಳಿಗೆ ಬಂದಾಗ ಅವರಿಗೆ ಧನಾತ್ಮಕ ಪರಿಸರವನ್ನು ಸೃಷ್ಟಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಅಧಿಕ ಸಂಖ್ಯೆಯಲ್ಲಿ ಮಕ್ಕಳು ಶಾಲೆಗಳಿಗೆ ಹಾಜರಾಗಿದ್ದರು ಎಂಬ ಸುದ್ದಿ ಕೂಡ ಮನಸ್ಸಿಗೆ ಮುದವನ್ನು ತಂದಿದೆ. ಆದರೆ ಮಕ್ಕಳು ಶಾಲೆಗಳಿಗೆ ಹಿಂದಿರುಗುವುದಷ್ಟೇ ಮುಖ್ಯವಲ್ಲ. ಅವರ ಕಲಿಕಾ ಮಟ್ಟದ ಮೌಲ್ಯಮಾಪನ ಮಾಡಿ ಅವರು ಪಡೆದಿದ್ದ ಜ್ಞಾನ ಯಾವ ಪ್ರಮಾಣದಲ್ಲಿ ಅವರಲ್ಲಿ ಉಳಿದಿದೆ? ಮುಂದಿನ ತರಗತಿಗೆ ಹೋಗಲು ಅಗತ್ಯವಾದ ಶೈಕ್ಷಣಿಕ ಸಾಮರ್ಥ್ಯ ಅವರಲ್ಲಿ ಇದೆಯೇ? ಮೇಲು ಮೇಲಿನ ತರಗತಿಗಳಿಗೆ ಹೋದ ಹಾಗೆಲ್ಲ ಕ್ಲಿಷ್ಟವಾಗುವ ಕೆಲ ವಿಷಯಗಳನ್ನು ಗ್ರಹಿಸಿ–ಮನನ ಮಾಡಿಕೊಳ್ಳಲು ಬೇಕಾದ ಪೂರ್ವತಯಾರಿ ಮನೆಯ ಮಟ್ಟದಲ್ಲಾಗಲಿ, ಶಾಲಾ ಮಟ್ಟದಲ್ಲಾಗಲಿ ಆಗಿದೆಯೇ?–ಇವೇ ಮುಂತಾದ ಪ್ರಶ್ನೆಗಳಿಗೆ ಮೊದಲು ಉತ್ತರಗಳನ್ನು ಕಂಡುಕೊಳ್ಳಬೇಕು. ಆರ್ಥಿಕವಾಗಿ ಅನುಕೂಲಗಳಿದ್ದ ಪೋಷಕರೇನೂ ರಜಾ ದಿನಗಳಲ್ಲೂ 'ಟ್ಯೂಷನ್'ಗೆ ಮಕ್ಕಳನ್ನು ಕಳುಹಿಸಿ ಅವರ ಕಲಿಕಾ–ಗ್ರಹಿಕಾ ಶಕ್ತಿ, ಸುಸ್ಥಿರ ಸ್ಥಿತಿಯಲ್ಲಿರುವಂತೆ ನೋಡಿಕೊಂಡರು.



ಆದರೆ ಆರ್ಥಿಕ ಅನುಕೂಲಗಳಿಲ್ಲದ, ಇಂಥ ಬೆಂಬಲ ವ್ಯವಸ್ಥೆಯಿಲ್ಲದ ಕುಟುಂಬಗಳಿಗೆ ಪರ್ಯಾಯ ಕಲಿಕಾ ವ್ಯವಸ್ಥೆಯನ್ನು ಒದಗಿಸಲಾಗಲಿಲ್ಲ. ಈ ಮಕ್ಕಳ ಶೈಕ್ಷಣಿಕ ಬೆಳವಣಿಗೆಯನ್ನು ಹೇಗೆ ಶಾಲೆಗಳು ನಿರ್ವಹಿಸುತ್ತವೆ ಎನ್ನುವುದು ಶಾಲೆಗಳ ಮುಂದಿರುವ ದೊಡ್ಡ ಸವಾಲು.

ಶಾಲೆಗಳಲ್ಲಿ ಗುಣಮಟ್ಟದ ಬೋಧನೆ–ಕಲಿಕೆಗೆ ಸೂಕ್ತವಾದ ಶೈಕ್ಷಣಿಕ ವಾತಾವರಣದ ಸೃಷ್ಟಿ ಎಷ್ಟು ಮುಖ್ಯವೋ ತರಗತಿಗಳ, ಅಧ್ಯಾಪಕರ ಕೊಠಡಿಗಳ, ಆಟದ ಮೈದಾನ, ಶೌಚಾಲಯಗಳ, ಒಟ್ಟಿನಲ್ಲಿ ಇಡೀ ಶಾಲೆಯ ಭೌತಿಕ ಪರಿಸರವನ್ನು ಶುಚಿಯಾಗಿಡುವುದೂ ಅಷ್ಟೇ ಮುಖ್ಯ. ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಂಪೂರ್ಣವಾಗಿ ಮುಚ್ಚಿದ್ದರಿಂದ ಅನೇಕ ಶಾಲಾ ಕಟ್ಟಡಗಳು ಅಸುರಕ್ಷಿತ ಸ್ಥಿತಿಯಲ್ಲಿದ್ದು ಈಗ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ, ತಕ್ಷಣವೇ ಅವುಗಳ ದುರಸ್ತಿ ಕಾರ್ಯ ಆಗುವುದಿಲ್ಲ ಎಂದೆನಿಸುತ್ತದೆ. ಸ್ವಲ್ಪ ಮಟ್ಟಿಗಾದರೂ ಬಂಡವಾಳ ಲಭ್ಯವಿರುವ ಶಾಲೆಗಳಲ್ಲಿ ಕೊಠಡಿಗಳಿಗೆ ಸುಣ್ಣ–ಬಣ್ಣ ಹೊಡೆಯುವ ಕೆಲಸ ಆರಂಭವಾಗಿದೆ ನಿಜ. ಅನೇಕ ಕಡೆಗಳಲ್ಲಿ ನಿರ್ಮಲೀಕರಣ ಕಾರ್ಯವೂ ನಡೆಯುತ್ತಿದೆ. ಆದರೆ ಸರ್ಕಾರಿ ಶಾಲೆಗಳ ಪರಿಸ್ಥಿತಿ ಎಲ್ಲೆಡೆ ಸುಗಮವಾಗಿಲ್ಲದಿರುವುದರಿಂದ ಖಾಸಗಿ ಉದ್ಯಮ ವಲಯ, ಶಾಲೆಯ ಹಿರಿಯ ವಿದ್ಯಾರ್ಥಿ ಸಮುದಾಯ ಹಾಗೂ ಶಾಲೆಯ ನೆರೆಹೊರೆಯಲ್ಲಿ ಆರ್ಥಿಕವಾಗಿ ಅನುಕೂಲವಾಗಿರುವ ಕುಟುಂಬಗಳು, ಶಾಲೆಗಳಲ್ಲಿ ಸುರಕ್ಷಿತ ಪರಿಸರವನ್ನು ನಿರ್ಮಾಣ ಮಾಡಲು ಕೈ ಜೋಡಿಸಬೇಕಾಗಿದೆ.

ಈ ಬಾರಿ ಶಾಲೆಗಳು ತೆರೆದಾಗ ಬಡ ಮತ್ತು ಮಧ್ಯಮ ವರ್ಗದಲ್ಲಿರುವ ಅನೇಕ ಪೋಷಕರಿಗೆ ಮತ್ತೊಂದು ಸಮಸ್ಯೆ ಎದುರಾಗಿದೆ. ಅದೇನೆಂದರೆ ಬಹುತೇಕ ಖಾಸಗಿ, ಮತ್ತು ಅನೇಕ ಅನುದಾನಿತ ಶಾಲೆಗಳಲ್ಲಿ ಹೆಚ್ಚಿಸಿರುವ ವಾರ್ಷಿಕ ಶುಲ್ಕ. ಇದು ಹೊಸದಾಗಿ ದಾಖಲಾಗಬೇಕಾದ ಹಾಗೂ ಈಗಾಗಲೇ ಪ್ರವೇಶವನ್ನು ಪಡೆದು ಮೇಲುಮೇಲಿನ ತರಗತಿಗಳಿಗೆ ಮುನ್ನಡೆಯಬೇಕಾಗಿರುವ ವಿದ್ಯಾರ್ಥಿಗಳಿಬ್ಬರಿಗೂ ಅನ್ವಯಿಸುತ್ತದೆ. ಎರಡು ವರ್ಷಗಳಿಂದ ಶಾಲೆಗಳು ಮುಚ್ಚಿದ್ದರಿಂದ ಬರಬೇಕಾದ ಅನುದಾನ ಬಂದಿಲ್ಲದಿರುವುದು ಇದಕ್ಕೆ ಒಂದು ಕಾರಣವಾದರೆ, ವಿದ್ಯಾರ್ಥಿ ಶುಲ್ಕ ಹೆಚ್ಚು ಕಡಿಮೆ ಎರಡು ವರ್ಷಗಳಿಂದ ಶಾಲೆಗಳ ಬೊಕ್ಕಸಕ್ಕೆ ಸಂದಾಯವಾಗದಿರುವುದು ಮತ್ತೊಂದು ಕಾರಣ. ಅನುದಾನರಹಿತ ಶಾಲೆಗಳಲ್ಲಿ ಅನೇಕವು ಅನುದಾನ ಯೋಜನೆಗೆ ಒಳಪಡದ ಹುದ್ದೆಗಳಲ್ಲಿರುವ ಅಧ್ಯಾಪಕರ ವೇತನ ಹಾಗೂ ಇತರ ವೆಚ್ಚಗಳನ್ನು ಭರಿಸಲು ಅವಲಂಬಿಸಿರುವುದು ವಿದ್ಯಾರ್ಥಿಗಳು ಭರಿಸುವ ಶುಲ್ಕವನ್ನೇ! ಆದ್ದರಿಂದ, ಅನೇಕ ಶಾಲೆಗಳಲ್ಲಿ ಶಿಕ್ಷಕರ ವೇತನ ನೀಡುವಿಕೆಯಲ್ಲಿ ಆಗಿರುವ ವಿಳಂಬ ಅಥವಾ ಅರ್ಧಕ್ಕೆ ಅರ್ಧದಷ್ಟು ಕಡಿತ–ಈ ಪರಿಸ್ಥಿತಿಗಳನ್ನು ಸರಿಪಡಿಸಬೇಕಾದರೆ ವಿದ್ಯಾರ್ಥಿ ಶುಲ್ಕವನ್ನು ಹೆಚ್ಚಿಸುವುದು ಅನಿವಾರ್ಯ ಎನ್ನುವುದು ಶಾಲೆಗಳ ವಾದ. ಅವರ ದೃಷ್ಟಿಯಿಂದ ಇದನ್ನು ಸಂಪೂರ್ಣವಾಗಿ ತಳ್ಳಿಹಾಕಲಾಗದಿದ್ದರೂ ಜೀವನ ನಿರ್ವಹಣೆಗೇ ಕಷ್ಟಪಡುತ್ತಿರುವ ಕುಟುಂಬಗಳಿಗೆ ಶುಲ್ಕ ಹೆಚ್ಚಳ ಮಾತ್ರ ನುಂಗಲಾರದ ತುತ್ತಾಗಿ ಪರಿಣಮಿಸಿದೆ

ಶುಲ್ಕದ ವಿಚಾರ ಬಂದಾಗ ಏತಕ್ಕೆ ಮಕ್ಕಳನ್ನು ಖಾಸಗಿ ಅಥವಾ ಭಾಗಶಃ ಅನುದಾನ ದೊರೆಯುವ ಶಾಲೆಗಳಿಗೆ ಕಳುಹಿಸಬೇಕು? ಸರ್ಕಾರಿ ಶಾಲೆಗಳಿಗೆ ಕಳುಹಿಸಬಹುದಲ್ಲಾ ಎಂಬ ಮಾತು ಬರುವುದು ಸಹಜವೇ. ಆದರೆ ಶಾಲೆಯ ಆಯ್ಕೆ ಪೋಷಕರಿಗೆ ಬಿಟ್ಟಿದ್ದು. ಈಗಾಗಲೇ ಒಂದು ಶಾಲೆಯಲ್ಲಿ ಓದುತ್ತಿರುವ ಮಕ್ಕಳನ್ನು ಅಲ್ಲಿಂದ ಬಿಡಿಸಿ ಶುಲ್ಕ ಕಡಿಮೆ ಇದೆ ಎಂಬ ಕಾರಣಕ್ಕೆ ಬೇರೊಂದು ಶಾಲೆಗೆ ಸೇರಿಸುವುದು ಹೇಳುವಷ್ಟು ಸುಲಭವಲ್ಲ. ಅವರ ಇಡೀ ಕಲಿಕಾ ಪ್ರಕ್ರಿಯೆಯೇ ಬೇರೆ ದಾರಿ ಹಿಡಿಯುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ? ಒಂದೇ ಕಂತಿನಲ್ಲಿ ಇಡೀ ವರ್ಷದ ಶುಲ್ಕವನ್ನು ಕಟ್ಟಲು ಒತ್ತಡ ಹೇರದೆ, ಅವರವರ ಶಕ್ತ್ಯಾನುಸಾರ ಸುಲಭ ಕಂತುಗಳಲ್ಲಿ ಹಣವನ್ನು ಪಾವತಿಸಲು ಅವಕಾಶ ಒದಗಿಸಬೇಕು. ಈಗಾಗಲೇ ಕೆಲ ಶಾಲೆಗಳು ಹೀಗೆ ಮಾಡಿವೆ. ಸರ್ಕಾರ ಕೂಡ ಖಾಸಗಿ ಸಹಭಾಗಿತ್ವದೊಂದಿಗೆ, ಹಣಕಾಸಿನ ಅಭಾವದ ಕಾರಣದಿಂದಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗದಂತೆ ಅನುದಾನರಹಿತ ಶಾಲೆಗಳ ಭೌತಿಕ ಮತ್ತು ಶೈಕ್ಷಣಿಕ ಸಾಮರ್ಥ್ಯಗಳನ್ನು ಹೆಚ್ಚಿಸುವಂಥ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಇದುವರೆಗೂ ನಾನು ಪ್ರಸ್ತಾಪ ಮಾಡಿದ್ದು ಈಗಾಗಲೇ ಶಾಲೆಗಳನ್ನು ಸೇರಿರುವ ಮಕ್ಕಳ ವಿಚಾರ. ಆದರೆ ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ತಂದಿಟ್ಟ ಪರಿಸ್ಥಿತಿಗಳಿಂದಾಗಿ ಶಾಲೆಗಳಿಗೆ ದಾಖಲು ಆಗದೆಯೇ ಇರುವಂಥ ಶಾಲಾ ವಯೋಗುಂಪಿನಲ್ಲಿರುವ ಸಾವಿರಾರು ಮಕ್ಕಳನ್ನು ಶಾಲೆಗಳಿಗೆ ಕರೆತರುವುದು ಹೇಗೆ? ಇದುವರೆಗೂ ಇವರ ಸ್ಪಷ್ಟ ಸಂಖ್ಯೆ ಲಭ್ಯವಾಗಿಲ್ಲ.ದೇಶದಾದ್ಯಂತ ಹರಡಿ ಹೋಗಿರುವ ಗ್ರಾಮಗಳಲ್ಲಿ, ವಲಸಿ ಸಮುದಾಯಗಳಲ್ಲಿ, ನಗರಗಳ ಬಡ ನೆರೆಹೊರೆಗಳಲ್ಲಿ ಶಾಲೆಗಳಿಗೆ ದಾಖಲಾಗದ ಎಲ್ಲ ಮಕ್ಕಳನ್ನೂ ಗುರುತಿಸುವುದು ಕಷ್ಟವೇ ಸರಿ, ಆದರೆ ಅವರ ಬದುಕನ್ನು ಹಾಗೆ ನಶಿಸಿ ಹೋಗಲು ಬಿಡಲಾಗುವುದಿಲ್ಲ. ಇದು ಕೇವಲ ನಮ್ಮ ದೇಶದ ಸಮಸ್ಯೆಯಲ್ಲ. ಸಾಮಾಜಿಕ–ಆರ್ಥಿಕ ಅಸಮಾನತೆಯನ್ನು ತೀವ್ರ ಸ್ವರೂಪದಲ್ಲಿ ಎದುರಿಸುತ್ತಿರುವ ವಿಶ್ವದ ಅನೇಕ ದೇಶಗಳಲ್ಲಿ ಶಾಲೆಗಳಿಗೆ ಸೇರದೆಯೇ ಇರುವ ಮಕ್ಕಳ ಸಂಖ್ಯೆ ಕಳೆದ ಎರಡು ವರ್ಷಗಳಲ್ಲಿ ಹೆಚ್ಚಾಗಿದೆ. ಈ ವರ್ಗಗಳ ಬದುಕನ್ನು ಹಸನು ಮಾಡಲು ಶ್ರಮಿಸುತ್ತಿರುವ ಸ್ವಯಂಸೇವಾ ವಲಯ ಶಾಲೆಗೆ ಸೇರದ ಮಕ್ಕಳನ್ನು ಗುರುತಿಸಿ ಸಮರೋಪಾದಿಯಲ್ಲಿ ಅವರನ್ನು ಶಾಲೆಗಳತ್ತ ಕರೆತರಬೇಕು. ಸ್ಥಳೀಯ ಮಟ್ಟದಲ್ಲಿಯೇ ಈ ಆಂದೋಲನಕ್ಕೆ ನಾಯಕತ್ವವನ್ನು ಒದಗಿಸಬಲ್ಲ ಆಸಕ್ತರನ್ನು ಗುರುತಿಸಿ ಅವರಿಗೆ ಜವಾಬ್ದಾರಿಯನ್ನು ನೀಡುವುದು ಸೂಕ್ತವಾದ ಮಾರ್ಗ.

ಶಾಲೆಗಳಿಗೆ ಬರಲಾರಂಭಿಸಿರುವ ಮಕ್ಕಳ ಆಸಕ್ತಿಯನ್ನು ಜೀವಂತವಾಗಿ ಇಟ್ಟು, ಕಲಿಕೆಯಲ್ಲಿ ಅವರನ್ನು ತೊಡಗಿಸುವುದು ಅಧ್ಯಾಪಕರಿಗೆ ಮತ್ತು ಪೋಷಕರಿಗಿರುವ ಒಂದು ಸವಾಲಾದರೆ, ಕೋವಿಡ್‌ನಿಂದ ಶಿಕ್ಷಣ ಸಂಸ್ಥೆಗಳು ಮುಚ್ಚಿದಾಗ, ಶಾಲೆಗಳಿಂದ ಹೊರಗುಳಿದ ಎಲ್ಲ ಮಕ್ಕಳನ್ನೂ ಮತ್ತೆ ಶಾಲೆಗಳಿಗೆ ಕರೆತರುವುದು ಇದಕ್ಕಿನ್ನ ಗಂಭೀರವಾದ ಸವಾಲು. ಈ ಗುಂಪಿನ ಮಕ್ಕಳು ಕೂಡ ಒಂದು ಸಮರೂಪವಾದ ವರ್ಗಕ್ಕೆ ಸೇರಿಲ್ಲ. ಪೋಷಕರನ್ನು ಕಳೆದುಕೊಂಡ ಮಕ್ಕಳು, ಜೀವನಾಧಾರಗಳನ್ನು ಕಳೆದುಕೊಂಡು ತಮ್ಮ ಸ್ವಗ್ರಾಮಗಳಿಗೆ ವಲಸೆ ಹೋದವರ ಮಕ್ಕಳು, ಬಲಾತ್ಕಾರವಾಗಿ ವಿವಾಹ ಬಂಧನಕ್ಕೆ ತಳ್ಳಲ್ಪಟ್ಟ ಹೆಣ್ಣು ಮಕ್ಕಳು ಹಾಗೂ ನಾನಾ ಕಾರಣಗಳಿಗಾಗಿ ತಮ್ಮ ಮಕ್ಕಳ ಓದಿನಲ್ಲಿ ಆಸಕ್ತಿ ವಹಿಸಲಾಗದ/ವಹಿಸದ ಕುಟುಂಬಗಳ ಮಕ್ಕಳು–ಹೀಗೆ ವಿಭಿನ್ನ ಬಗೆಯ ಅಸಹಾಯಕತೆಗಳನ್ನು ಎದುರಿಸುತ್ತಿರುವ ಮಕ್ಕಳ ಬದುಕಿನ ವಾಸ್ತವ್ಯಗಳನ್ನು ಗುರುತಿಸಿ, ಆ ನಿಟ್ಟಿನಲ್ಲಿ ಈ ಮಕ್ಕಳನ್ನು ಶಾಲೆಗಳಿಗೆ ಹಿಂದಿರುಗಿಸಲು ಪ್ರಯತ್ನಗಳಾಗಬೇಕು. ಇದೊಂದು ದೀರ್ಘ ಪಯಣ, ಅದರಲ್ಲಿ ಸಮಾಜದ ಸರ್ವ ವರ್ಗಗಳೂ ಸಹಭಾಗಿಗಳಾದರೆ ಮಾತ್ರ ಸ್ವಲ್ಪ ಮಟ್ಟಿಗಾದರೂ ಶಾಲಾ ಹೊರಗುಳಿಯುವಿಕೆಯ ಸಮಸ್ಯೆಗೆ ಉತ್ತರಗಳನ್ನು ಹುಡುಕಲು ಸಾಧ್ಯವಾಗಬಹುದೇನೋ?

ಮೈಸೂರು ಐಶ್ವರ್ಯ ನಗರ ಮಳೆ ಬಂದಾಗ ಅಲ್ಲಿನ ನಿವಾಸಿಗಳ ಪಾಲಿಗೆ ದೌರ್ಭಾಗ್ಯ ನಗರ!



● ಪ್ರತಿ ಮಳೆಯಲ್ಲಿ ಮುಳುಗಡೆಯ ಭಾಗ್ಯ! ● ಯಾರಿಗೆ ಹೇಳಿದರೂ ಮಾಡ್ತೇವೆ... ಮಾಡ್ತೇವೆ..!?



ಮೈಸೂರು, ಮೇ 18(ಎಂಕೆ)– ಮೈಸೂರಲ್ಲೊಂದು ದೌರ್ಭಾಗ್ಯ ನಗರ... ಇಲ್ಲಿಗೆ ಜನಪ್ರತಿನಿಧಿಗಳ ವಿಸಿಟಿಂಗ್ ಅಷ್ಟೇ... ನೋ ಪ್ಲಾನ್, ನೋ ಆಕ್ಷನ್...!

ಹೌದು! ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಗೆ ಹೊಂದಿಕೊಂಡಿರುವ (ಆರ್‌ಎಂಪಿ ಕ್ವಾಟರ್ಸ್ ಹಿಂಭಾಗ) ವಾರ್ಡ್ ನಂ.59ರ ವ್ಯಾಪ್ತಿಯ ಐಶ್ವರ್ಯ ನಗರ ಅಕ್ಷರಶಃ ಇಲ್ಲಿಯ ನಿವಾಸಿಗಳ ಪಾಲಿಗೆ ದೌರ್ಭಾಗ್ಯ ನಗರವಾಗಿದೆ. 8 ಎಕರೆ ವಿಸ್ತೀರ್ಣ, 93 ನಿವೇಶನಗಳನ್ನೊಳಗೊಂಡ ಐಶ್ವರ್ಯ ನಗರಕ್ಕೆ ಶುಭ ಸೂಚಕ ಎನ್ನುವ ಮಳೆ ಅಶುಭವಾಗಿದೆ.

ಖಾಸಗಿ ಡೆವಲಪರ್ ಸಂಸ್ಥೆಯಿಂದ 2009–10ರಲ್ಲಿ ನಿರ್ಮಾಣವಾದ ಐಶ್ವರ್ಯ ನಗರ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿದೆ. ಆದರೆ ಪ್ರತಿವರ್ಷದ ಮಳೆಗಾಲದಲ್ಲಿ ಜಲಾವೃತಗೊಳ್ಳುತ್ತಿರುವ ಬಡಾವಣೆಯನ್ನು ಕಂಡರೂ ಕಾಣದಂತೆ ಇರುವ ನಗರಪಾಲಿಕೆಯ ಕಾರ್ಯವೈಖರಿ ಕಂಡು, ಕೋಟ್ಯಾಂತರ ರೂ. ಸಾಲ ಮಾಡಿ ಇಲ್ಲಿ ಮನೆ ಕಟ್ಟಿ ಎಡವಟ್ಟು ಮಾಡಿಕೊಂಡಿದ್ದೇವೆ ಎಂದು ನಿವಾಸಿಗಳು ಪರಿತಪಿಸುತ್ತಿದ್ದಾರೆ.

ಮಳೆ ನೀರಿನ ಚರಂಡಿಗಳಿಲ್ಲ: ಬಡಾವಣೆಯಲ್ಲಿ ಮಳೆ ನೀರು ಹರಿಯಲು ಇದ್ದ ಚರಂಡಿಗಳೆಲ್ಲವೂ ಸಂಪೂರ್ಣವಾಗಿ ಮುಚ್ಚಿ ಹೋಗಿವೆ. ಅಲ್ಲದೆ ಇಸ್ಕಾನ್ ಟೆಂಪಲ್‌ನಿಂದ ಅರವಿಂದನಗರದ ಕಡೆಗೆ ಸಾಗುವ ದೊಡ್ಡ ಮೋರಿಯನ್ನು ಐಶ್ವರ್ಯ ನಗರದ ಬಳಿ ಅಭಿವೃದ್ಧಿ ಮಾಡದಿರುವುದು ಭಾರೀ ತೊಂದರೆಗೆ ಕಾರಣವಾಗಿದೆ. ದೊಡ್ಡ ಮೋರಿಯ ಮಳೆ ನೀರಲ್ಲಿ ಬರುವ ಕಸ ತ್ಯಾಜ್ಯ ಬಡಾವಣೆಯನ್ನು ಆವರಿಸುತ್ತಿದ್ದು, ನಿವಾಸಿಗಳಿಗೆ ನರಕ ದರ್ಶನ ಮಾಡಿಸುತ್ತಿದೆ. ತಗ್ಗು ಪ್ರದೇಶದಲ್ಲಿರುವ ಐಶ್ವರ್ಯ ನಗರಕ್ಕೆ ಕುವೆಂಪುನಗರ, ರಾಮಕೃಷ್ಣ ನಗರ ಸೇರಿದಂತೆ ಸುತ್ತ–ಮುತ್ತಲಿನ ಬಡಾವಣೆಗಳಿಂದ ಮಳೆ ನೀರು ಹರಿದು ಬರಲಿದ್ದು, ದೊಡ್ಡ ಮೋರಿ ಇಲ್ಲದಿರುವುದು ಇಡೀ ಐಶ್ವರ್ಯ ನಗರವೇ ಜಲಾವೃತಗೊಳ್ಳಲು ಕಾರಣವಾಗಿದೆ.

ವಿಸಿಟಿಂಗ್ ಅಷ್ಟೇ: ಸ್ಥಳೀಯ ಜನಪ್ರತಿನಿಧಿಗಳು, ಪಾಲಿಕೆ ಅಧಿಕಾರಿಗಳಿಗೆ 2012ರಿಂದಲೂ ನಿರಂತರ ಮನವಿಗಳನ್ನು ಮಾಡುತ್ತಲೇ ಇದ್ದೇವೆ. ಅದರಂತೆ ತಮ್ಮ ಅಧಿಕಾರ ಅವಧಿಯಲ್ಲಿ ಒಬ್ಬರೇ ಬಂದು ನೋಡುತ್ತಿದ್ದಾರೆಯೇ ಹೊರತು ಸಮಸ್ಯೆ ಬಗೆಹರಿಸುವ ಸಣ್ಣ ಕೆಲಸವೂ ಆಗಿಲ್ಲ. ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್(ಶಾಸಕರಾಗಿದ್ದ ವೇಳೆ), ಹಾಲಿ ಶಾಸಕರಾದ ಎಸ್.ಎ. ರಾಮದಾಸ್, ಮುಡಾ ಅಧ್ಯಕ್ಷರು, ಆಯುಕ್ತರು ಸೇರಿದಂತೆ ಸಂಬಂಧಪಟ್ಟ ಎಲ್ಲಾ ಜನಪ್ರತಿನಿಧಿಗಳು, ಅಧಿಕಾರಿಗಳು ಐಶ್ವರ್ಯನಗರಕ್ಕೆ ಬಂದು ನೋಡಿದ್ದಾರೆ. ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸುವುದಾಗಿಯೂ ಹೇಳಿದ್ದಾರೆ. ಆದರೆ ಅವರೆಲ್ಲರ ಮಾತುಗಳು ಮಾತುಗಳಾಗಿಯೇ ಉಳಿದಿದೆಯೇ ಹೊರತು ಯಾವ ಕೆಲಸವೂ ಆಗಿಲ್ಲ ಎಂದು ಐಶ್ವರ್ಯನಗರ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ದೂರಿದರು.

ಇಲ್ಲಿನ ಒಂದೊಂದು ಮನೆಯಿಂದಲೂ ಸರ್ಕಾರಕ್ಕೆ 5–10 ಲಕ್ಷ ರೂ.ವರೆಗೆ ವಿವಿಧ ಬಗೆಯ ತೆರಿಗೆ ಕಟ್ಟಿದ್ದೇವೆ. ಹಣ ಕಟ್ಟಿಸಿಕೊಳ್ಳುವವರಿಗೆ ಸಮಸ್ಯೆ ಬಗೆಹರಿಸಿಕೊಡಬೇಕು ಎನ್ನುವ ಪರಿಜ್ಞಾನವಿಲ್ಲ. ಜನಪ್ರತಿನಿಧಿಗಳಂತೂ ನಮ್ಮ ಮುಂದೆ ಬಂದು ನಿಂತು ಮಾತನಾಡುವುದಿಲ್ಲ. ಏಕೆಂದರೆ ಅವರಿಗೂ ಇಲ್ಲಿನ ಸಮಸ್ಯೆ ಬಗ್ಗೆ ಗೊತ್ತಿದೆ. ಜನಪರ ಕಾಳಜಿ ಅವರಲ್ಲಿ ಇದ್ದಿದ್ದರೆ ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸುತ್ತಿದ್ದರು ಎಂದು ಕಿಡಿಕಾರಿದರು.

ಕಷ್ಟಕ್ಕಾಗದ ಮೇಯರ್...

ಮೈಸೂರು ಮಹಾನಗರ ಪಾಲಿಕೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅವರ ವಾರ್ಡ್ ಇದಾಗಿದೆ. ಮೇಯರ್ ನಮ್ಮ ವಾರ್ಡ್‌ನವರೇ ಆಗಿದ್ದರೂ ನಮ್ಮ ಕಷ್ಟಕ್ಕಾಗಿಲ್ಲ. ಚುನಾವಣೆ ಸಂದರ್ಭದಲ್ಲಿ ಮತ ನೀಡಿ, ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಎಂದಿದ್ದ ಅಮ್ಮ, ಈಗ ಕೇಳಿದರೆ ನೀವ್ಯಾರು ನನಗೆ ಓಟ್ ಹಾಕಿಲ್ಲ. ಪತ್ರಿಕೆಗಳು, ಟಿವಿಗಳಿಗೆ ಪ್ರಕಟಣೆ ನೀಡುವ ನೀವು ಅವರಿಂದಲೇ ನಿಮ್ಮ ಬಡಾವಣೆ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಿ ಎನ್ನುತ್ತಾರೆ. ಮುಂದಿನ ದಿನಗಳಲ್ಲಿ ಚುನಾವಣೆಗಳನ್ನು ಬಹಿಷ್ಕರಿಸುತ್ತೇವೆ.

–ಐಶ್ವರ್ಯ ನಗರ ನಿವಾಸಿಗಳು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗೆ ಇದೆ
20'x30' ಅಳತೆಯ 2 ಬೆಡ್ ರೂಂ ಹಾಗೂ ಸೋಲಾರ್, 24 ಗಂಟೆಗಳ ವಾಟರ್ ಸೌಲಭ್ಯ. 1ನೇ ಮಹಡಿ. ಸ್ಥಳ: ಜೆ.ಪಿ. ನಗರ. ಪನೇಷಿಯಾ ಆಸ್ಪತ್ರೆ ಹತ್ತಿರ. ಸಸ್ಯಾಹಾರಿಗಳಿಗೆ ಮಾತ್ರ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಮೊ: 94487-50455

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು ಅಭಿಷೇಕ್ ಸರ್ಕಲ್ ಬಳಿಯ ಮೆಡಿಕಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ.
9845761114 / 9900387551

WANTED RENTED HOUSE
Independent Single or Double Bedroom House. Prime Location Mysore City. Please Contact:
9611366401
7022470930

Immediately Required
Machine Operators
For a renowned Manufacturing unit in Hebbal Industrial Area. Qualification: ITI or Diploma (Mechanical / Electronics).
Mob: 7760773779
Company name : Kidvento Education and Research Pvt Ltd, Mysore

CORNER COMMERCIAL COMPLEX FOR SALE
Built in 25x30 Three Floors, South West Corner, Facing to 80' Road in Bogadi Second Stage Mysore (MUDA Auction Site)
8310895835

WANTED
1.DTP and Graphic Designer (Coreldraw, Photoshop, Indesign, Illustrator)
2. Tata ace Driver
3. Office Boy, (Qualification: 2nd puc)
Contact: 9739569260 / 9448067939

FOR RENT
80 ft x 110 ft Building Suitable for Godwon North Facing. Opp. to Maharshi Public School, Vishweshwara Nagara, Mysore -570008
9980029192 / 9900996950

ಟೈಲರಿಂಗ್ ತರಬೇತಿ
ನಮ್ಮಲ್ಲಿ ನುರಿತ ತರಬೇತುದಾರರಿಂದ ಟೈಲರಿಂಗ್ ತರಬೇತಿ ನೀಡಲಾಗುತ್ತದೆ. ಇಂದೇ ಸಂಪರ್ಕಿಸಿ.
ಗಾನವಿ ಇಂಟರ್ ನ್ಯಾಷನಲ್
22/2, ಚಂದ್ರಗುಪ್ತ ರಸ್ತೆ, ಸಂಗಮ್ ಥಿಯೇಟರ್ ಹತ್ತಿರ, ಮೈಸೂರು
8073502957 / 8123819136
9590666328

HOUSE FOR RENT
Vijayanagar 3rd Stage 'G' Block, Mysore. Dr. No. 55, Near Hinkal Fly Over Ground and 1st Floor 2+2 BHK, 2nd Floor 1BHK (30x40 Site House) House for Rent. Contact Mobile
9886129408

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

FOR SALE
COMMERCIAL
1040 Sqft - 4 Floors
Rental Income 80 K
Adipampa Road, V.V.Mohalla, Mysuru
2.5 Cr (Negotiable)
Call: 98442 46875

FOR SALE
SEMI COMMERCIAL
2400 Sqft (East)
Rental Income 50 K
Adipampa Road, V.V.Mohalla, Mysuru
Call: 89705 18321

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಬೇಕಾಗಿದ್ದಾರೆ
ಹುದ್ದೆ:– ಲೇಡಿ ಆಫೀಸರ್ ಅಸಿಸ್ಟೆಂಟ್, ವಿದ್ಯಾರ್ಹತೆ: ಪಿಯುಸಿ ಅಥವಾ ಡಿಗ್ರಿ Tally ಮತ್ತು ಕಂಪ್ಯೂಟರ್ ಜ್ಞಾನ. ಸೂಚನೆ: ಹೆಬ್ಬಾಳು, ಕುಂಬಾರಕೊಪ್ಪಲು, ವಿಜಯನಗರ ಮೊದಲನೇ ಹಂತ, ಅಭ್ಯರ್ಥಿಗಳಿಗೆ ಮೊದಲ ಆದ್ಯತೆ.
9742168396

GODWON FOR RENT
900 Sq.ft with 5 hp power, 3phase Near Hinkal Junction Contact:
9060768800

ಶ್ರೀ ರಾಘವೇಂದ್ರ ಬಿಲ್ಡಿಂಗ್ ಕನ್ಸ್ಟ್ರಕ್ಷನ್
ನಿಮ್ಮ ಅದೃಷ್ಟದ ಮನೆಯನ್ನು ವಾಸ್ತು ಪ್ರಕಾರ ಹೊಸ ಮನೆಯನ್ನು ನಾವು ಕಟ್ಟಿಕೊಡುತ್ತೇವೆ ಹಾಗೂ ಯಾವುದೇ ರೀತಿ ಹಳೆ ಮನೆಯ ಆಲ್ಟ್ರೇಶನ್ ಕೆಲಸ ವಿದ್ದರೂ ಹೇಳಿ ಮಾಡಿಕೊಡುತ್ತೇವೆ. (Plan Approval, 3D Elevation) ಮಾಡಿಕೊಡುತ್ತೇವೆ. ಇಂದೇ ಕರೆ ಮಾಡಿ
8749004423 / 9481738565

WANTED
Female Sales Executive - 5 Nos.
Graduates with computer knowledge, may walk-in interview with handwritten bio-data to:
Sharada Jewellers
58, D.D. Urs Road, Opp. Anjaneyaswamy Temple, Mysore.

WANTED IMMEDIATELY
Stores Incharge (Any Degree)
Accounts Executives (Any Degree)
Drivers (Heavy License) (All are Male's Only) Age Below 35 Yrs
Experience: Min 2 Yrs.
Address: The Akshayapatra Foundation Mysore.
No.31, 18th Cross, Jayanagara, Mysore

Shubhamahurtha
ಓಂ ಕೃಷ್ಣಾಯ ನಮಃ
THRIMASTHA BRAHMANA MATRIMONIAL SERVICES
ಶುಭಮುಹೂರ್ತ
ತ್ರಿಮಸ್ತ ಬ್ರಾಹ್ಮಣ ವಧು ವರಾನ್ವೇಷಣೆ
For Details Contact: 78290 92660
7259848032 | 9986762539

CHANGE OF NAME
I Sahil Jain, residing at # 148, Railway Layout, Vijayanagar, Opp. Indira Nursing Home, Metagalli, Mysore-570016 have changed my name from Prathamesh Vaibhav Parsekar to Sahil Jain on my own free will, sworn in before Notary M. Anantha Murthy, Mysuru, vide affidavit dated 13.05.2022.
Sd/- Sahil Jain

WANTED TEACHERS
S.D.E.T School :- Mysore Banglore Road, Siddalingapura, any Degree in English Medium.
B.Sc, B.Ed-2
B.A, D.Ed
NST & School Helper
Afternoon - 1.30 to 5.30
9535587045 / 9845924194

2 ಮನೆ ಬಾಡಿಗೆಗೆ ಇದೆ
2 Bed Room House Saraswathipuram, D.No.792, 12th Main, 14th Cross, Near by Aksya Bhandar
9448653911

ಮಂಟಪ ಮನೆ

ನಮ್ಮಲ್ಲಿ ಬೀಟೆ, ಹಲಸು, ಸಾಗ್ವಾನಿ ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು
9448207634 / 9036742526

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಟಿ.ವಿ. ಚಾನೆಲ್‌ಗೆ ಬೇಕಾಗಿದ್ದಾರೆ.
ಶೀಘ್ರದಲ್ಲೇ ಶುರುವಾಗಲಿರುವ ಸುದ್ದಿವಾಹಿನಿಗೆ ವಾರ್ಡ್, ತಾಲ್ಲೂಕು ಮತ್ತು ಜಿಲ್ಲಾವಾರು ವರದಿಗಾರರು,. ನಿರೂಪಕ, ನಿರೂಪಕಿಯರು, ಕಾಪಿ ಎಡಿಟರ್ಸ್, ವಿಡಿಯೋ ಇಡಿಟರ್ಸ್, ಕ್ಯಾಮೆರಾ ಮೆನ್ MCR & PCR ಟೆಕ್ನಿಷಿಯನ್ ಮತ್ತು ಪ್ರೋಗ್ರಾಮರ್ಸ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ. ಮೋ :
99805 32402

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5100
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ–S.M ಗೋಲ್ಡ್ ಕಂಪನಿ
8050518881

Guava Leaf Liquid Tea
ಪೇರಲ ಎಲೆಯ ಚಹಾ
VITAMIN 'C' USE IN ON TIME.
Use: 1) Control of diabetes. (2) Boost immunity. (3) Weight loss, (4) Good for brain, (4) Avoid of Cancer.
Distributor and customers. Contact:
Mob: 9110222159
ಇದನ್ನು ಉಪಯೋಗಿಸಿ ಯಾವುದೇ ರೀತಿಯ ಉಪಯೋಗ ಬರದಿದ್ದಲ್ಲಿ ನಿಮ್ಮ ಹಣ ವಾಪಸ್.

WANTED
Service Technician, ITI Holder / 2nd PUC for Home Appliances. Authorized Service Center & Kent RO Water Purifier Service Center. Contact:
9900237315 / 9845963421

DOCUMENT MISSING / LOST
The Original document bearing No. MDA-1-01057-2009-10 Dt. 23/07/2009 was missing / lost during transit on 11-05-2022. if any body founds the same, Kindly handover / inform to Jagadish L Urs
9449042487

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409



SUNZONE SOLAR SYSTEM
VM Double Road, Kuvempunagar, Mysuru
9845175443

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSE FOR RENT
(Holiday Home / Guest House)
Fully furnished house at 3rd Stage, 7th Main, Dr. Corner Road, Gokulam, Mysore (I F-3 BHK / II - F 3 BHK / III F - 6 room attached with all amenities).
9945419648 or 9972837203

ಮನೆ ಬಾಡಿಗೆಗೆ ಇದೆ
2BHK ಪೂರ್ವಕ್ಕೆ ಮಾಡಿರುವ ಮನೆ ಬಾಡಿಗೆಗೆ. ಸಂಖ್ಯೆ 26, 9ನೇ ಮುಖ್ಯ, ವಿನಾಯಕನಗರ, ಕೆನರಾ ಬ್ಯಾಂಕ್ / ವಿದ್ಯಾಶ್ರಮದ ಹಿಂದೆ, ಜಯಲಕ್ಷ್ಮಿಪುರಂ
9845291043

ಮನೆ ಮಾರಾಟಕ್ಕಿದೆ
15.50x73 ಅಳತೆಯ ಮನೆ ಕೃಷ್ಣಮೂರ್ತಿಪುರಂನಲ್ಲಿ ಮಾರಾಟಕ್ಕೆ ಇದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9880132897
9844313569

ಪ್ರಮಾಣ ಪತ್ರ
ಮೈಸೂರು ನಗರ, ಸಿದ್ದಿಕಿ ನಗರ, ಬನ್ನಿಮಂಟಪ ಲೇಔಟ್, ನಂ. 82, 5ನೇ ಕ್ರಾಸ್, ವಿಸ್‌ಡಮ್ ವ್ಯಾಲಿ ಸ್ಕೂಲ್ ಹತ್ತಿರ ವಾಸವಾಗಿರುವ ಮೊಹಮ್ಮದ್ ಫಾರೂಖ್ ಮೊಹಮ್ಮದ್ ಅಲಿ ಮನ್ನಾ, ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಮಗಳ ಹೆಸರು Alifya ಹೆಸರಿನಿಂದ Alifya Manna ಎಂದು ಬದಲಾಯಿಸಿರುತ್ತೇನೆ. ಇನ್ನು ಮುಂದೆ ನನ್ನ ಮಗಳ ಎಲ್ಲಾ ವ್ಯವಹಾರವನ್ನು Alifya Manna ಎಂಬ ಹೆಸರಿನಿಂದ ವ್ಯವಹರಿಸುತ್ತೇನೆ. ಈ ಮೇಲೆ ತಿಳಿಸಿರುವ ಎಲ್ಲಾ ವಿಷಯವು ಸತ್ಯವಾಗಿದೆ ಎಂದು ನೋಟರಿ ಸಿ.ಆರ್. ಸೀತಾರಾಮ್ ರವರ ಮುಂದೆ ದಿನಾಂಕ 18.5.2022 ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಮೊಹಮ್ಮದ್ ಫಾರೂಖ್ ಮೊಹಮ್ಮದ್ ಅಲಿ ಮನ್ನಾ

AFFIDAVIT
I, Prabhu Swamy H.B., residing at No. 117, Handuvinahalli Village, Kasaba Hobli, Nanjangud Taluk, Mysore district, have changed my name as Mahadeva Prabhu B.H., on my own free will, in front of Notary Kumaraswamy S. on 18.5.2022. I declare at all times thereafter to designate and address me, and remitter issue by such assumed name Mahadeva Prabhu B.H.
Sd/- Mahadeva Prabhu B.H.

ತಕ್ಷಣ ಬೇಕಾಗಿದ್ದಾರೆ
EXECUTIVE ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ :–
6364414499

D'SOUZA PACKERS & MOVERS
House & Office shifting in our budget.
Event Management
The complete service of your occasions.
Mob: 9611266148

JOB
Front Office Executive
Counsellors
& Tele Callers
In Vijayanagara & Hebbal
Attractive salary + incentives.
Mob: 9035066233

WANTED TEACHERS
(Trained Graduates)
1) Computer Faculty - 1
2) P T Teacher B.Ped -1
3) AYA & Attenders (Females)
Walk in with Originals
JNANA GANGOTRI CONVENT
Rajendra Nagara Mysore
9113980741

ವಧು-ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ/ ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE/B.Tech/MBA/ MS/MBBS/MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ಸ್ ಡಿಗ್ರಿ ದೇಶಿಯ / ವಿದೇಶಿಯ ವಧು – ವರರ ಮಾಹಿತಿಗೆ ಸಂಪರ್ಕಿಸಿ
ಅಂಚೆಪೇದೆ ಮ್ಯಾಟ್ರಿಮೋನಿ
ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು
7259395800 / 7349224222

FOR SALE
1)30x40 attch Brahmins layout 12 lks
2) 40@60 Srinagar (jp nagar)
3) 20@30 g+1floor Aravinda nagar
4)40@60 commercial Dattagalli
5) 20@30 SATHAGALLI 2nd stage
6) 30@40 g+floor new house bogadi near Hari vidyalaya
PRAKRUTHI PROPERTIES
90359 90359 / 95386 90359

ಬೇಕಾಗಿದ್ದಾರೆ
ಕನ್ನಿಕಾ ಕಾವೇರಿ ಎಜುಕೇಷನ್ ಸೊಸೈಟಿ (ರಿ) ಹೆಬ್ಬಾಳ್ 1ನೇ ಹಂತ, ಮೈಸೂರು – 570016 ನರ್ಸರಿ ಶಿಕ್ಷಕಿ ಹುದ್ದೆ–1, ವಿದ್ಯಾರ್ಹತೆ, NST or ಮಾಂಟೆಸ್ಸರಿ ಟ್ರೈನಿಂಗ್, ಕನ್ನಡ ಶಿಕ್ಷಕಿ ಹುದ್ದೆ–1, ವಿದ್ಯಾರ್ಹತೆ:– ಬಿ.ಎ., ಬಿಇಡಿ, ಶಾಲಾ ವ್ಯಾನ್ ಡ್ರೈವರ್ ಹುದ್ದೆ–1, ಅಡುಗೆಯವರು ಹುದ್ದೆ–1 (ಕೊಡಗಿನಲ್ಲಿ ಮಾಡಲು) ಆಕರ್ಷಕ ಸಂಬಳ ನೀಡಲಾಗುತ್ತದೆ. ಸಂದರ್ಶನ 21/5/2022 ಬೆಳಿಗ್ಗೆ 10 ಗಂಟೆಗೆ, ಶಾಲಾ ಕಛೇರಿಯಲ್ಲಿ
9741849537 / 0821-2304537

ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ಯುವಕ / ಯುವತಿಯರು / ಮಹಿಳೆಯರು ಹೋಮ್ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ಸಂಬಳ 12,000 ರಿಂದ 15,000 ರವರೆಗೆ ಕೂಡಲೇ ಸಂಪರ್ಕಿಸಿ.
8147031728
8951603018

FOR SALE
* 50x80 site for sale in J.P. Nagar 2nd Stage.
* 20x30 Site for sale in Bogadi 2nd Stage.
* 40x60 site for sale in Shadara Layout, Near Srinagar.
* 30x40 Site for sale in Kuvempu Layout, Near Dattagalli.
Mob: 9880344263

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ ಊಟ, ವಸತಿಯೊಂದಿಗೆ 12,000–18000 ರವರೆಗೆ
9739292222 / 0821-3563782
9035113222

ಬೇಕಾಗಿದ್ದಾರೆ
ಶ್ರೀ ಸಂಜೀವಿನಿ ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಜೊತೆಗೆ ಇನ್‌ಸೆಂಟಿವ್ ಕೂಡ ಇರುತ್ತದೆ.
6360982300 / 9900864397

SITE FOR SALE
No.63, Nirvana Nagar, Near TVS Campus, Mysore. DTCP Approved 40x40 Rs. 1,100 per Sq.ft. Slightly Negotiable - Immedaiate Registration
9036265108

ಶಿಕ್ಷಕಿಯರು ಬೇಕಾಗಿದ್ದಾರೆ
ನಂಜನಗೂಡು ಶಾಲೆಗೆ ಶಿಕ್ಷಕಿಯರು ಬೇಕಾಗಿದ್ದಾರೆ.
D.Ed-04, B.Sc, B.Ed-2, Spoken English -03, Hindi-02, Contact:
7019219346
9686558859

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಇಂದೇ ಬೇಕಾಗಿದ್ದಾರೆ. Salary: 13,000-21,000 + ESI, PF, ವಿದ್ಯಾರ್ಹತೆ: 10th, PUC, Diploma, Any Degree
9035734821

ಬೇಕಾಗಿದ್ದಾರೆ
ನಾಟಿ ಕೋಳಿ ಸಾರು, ಮಟನ್ ಸಾರು, ಮೀನು ಸಾರು ಮಾಡುವ ಮಹಿಳಾ ಅಡುಗೆಯವರು, ಕ್ಯಾಪ್ಟನ್, ಸಪ್ಲೈಯರ್ ಬೇಕಾಗಿದ್ದಾರೆ. ಸುಗ್ಗಿಮನೆ ಸ್ವೀಚ್ ಅಂಡ್ ಹಿಯರಿಂಗ್ ಸರ್ಕಲ್, ಬೋಗಾದಿ ರಸ್ತೆ
9448654164

HOUSE FOR SALE
MUDA 30x40
New 4 BHK Duplex House with 22 Squares Furnished, E/F Door at SBM Layout, Bogadi - Rs.1.40 Cr Pillar construction, 100 mtrs from Gaddige Road
Direct Owner: 6361295132

SITES FOR SALE
30x40 - 26.40 Lakhs
Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limits) 1.5 kms from J P Nagar Ring Road.
8660105902

JOB VACANCY
BE, Diploma & ITI Jobs Vacancy at Hebbal Industrial Area, Mysore. Kindly send your Resume to below mentioned E-mail ID
hr@shashwatiplastics.com
Qulaification: BE, Diploma & ITI trade Mechanical / Fitter
(Contact Time: 10.00am to 4.00pm)
0821-2402506 / 9590266625

WANTED
For Field Service Technician, 10th, PUC, ITI, Diploma or Fresher, Two Wheeler Must, A.P. Solutions, Mysore
9845110140

ಕೆಲಸಕ್ಕೆ ಬೇಕಾಗಿದ್ದಾರೆ
ಗುಡ್ ವಿಷ್ ಫೌಂಡೇಶನ್ ಸೇವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು ಸಮಾಜಕಾರ್ಯ ಅಧ್ಯಯನ ಮಾಡಿರುವಂತಹ ಪುರುಷ –1, ಬಿ.ಎ ಅಭ್ಯರ್ಥಿ ಮಹಿಳೆ–1 ಅನುಭವಸ್ಥರಿಗೆ ಮೊದಲ ಆದ್ಯತೆ. ಸಂಪರ್ಕಿಸಬಹುದಾದ ಸಂಖ್ಯೆ
9148502314

WANTED
Accountant (Male)
experience in Tally and GST for a Fabrications Industry at Hootagalli Industrial Area. Contact:
8105369940

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
20/06/22 ಪೂರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗಾ ಬೀಚ್, ಲಿಂಗರಾಜ್ ಟೆಂಪಲ್.
21/06/22 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ, ಉಜ್ಜಯಿನಿ ಮಹಾ ಕಾಳೇಶ್ವರ, ಓಂಕಾರೇಶ್ವರ ಜ್ಯೋತಿರ್ಲಿಂಗ.
23/06/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ್, ಗಯ, ಬುದ್ಧ ಗಯ, ಅಯೋಧ್ಯ.
09/06/22 ಕೊಚ್ಚಿ, ಗುರುವಾಯೂರು, ಅಲಪ್ಪಿ ಚೋಟಣಿಕೆರೆ.
14/07/22 ಶಿರಡಿ, ಪಂಡರಾಪುರ.
9964527782 / 9591017782

TEACHER REQUIRED
SRI JNANA BHARATHI SCHOOL
P.Hosahalli, KRS Road (3km from J.K.Tyres) Mysore. Education Qualification: B.Sc / M.Sc
Interview Date: 22.05.2022
8310245354
6363654779

HOUSE FOR SALE
MUDA Allotted 40x55
N/F, 4 BHK Duplex Furnished, 32 squares, 15 years Old House at T K Layout, 4th Stage, Prime Location, Rs. 1.95 cr. Owner will give 6 months Time for registration. Brokers Excuse
8660105902

ನಿವೇಶನ ಮಾರಾಟಕ್ಕಿದೆ
25x30 (Ground Floor -2 Portion, 1st Floor - 1 Partion) ಎ ಬ್ಲಾಕ್, 4ನೇ ಅಡ್ಡರಸ್ತೆ, ಗಣೇಶ್ ನಗರ, ಎನ್.ಆರ್.ಮೊಹಲ್ಲಾ, ಮೈಸೂರು
9108315900 / 9113277450
7090647764

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳು ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,500/ +W/o (8 Hours,) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620667819 / 8310520477

WE ARE HIRING
For A Reputed Builders and Developer Company In Mysore Looking for an Experienced Candidates / Fresher's Can Apply.
* Marketing Manager -1 (Female or Male)
* Sales Executive -1 (Female)
* Tele Sales - 2 (Female)
* Office Maid - 1 (Female)
Mail ID- Apply CV now to office.gsbd@gmail.com
7892878157

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮೈಸೂರು ಸಿಟಿ ಸುತ್ತಮುತ್ತ ಕಾರ್ಯನಿರ್ವಹಿಸಲು ಊಟ, ತಿಂಡಿ, ESI, PF ಸೌಲಭ್ಯವಿದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364560079
9900763507

ಕೆಲಸಕ್ಕೆ ಬೇಕಾಗಿದ್ದಾರೆ
ಫೋಟೋ ಸ್ಟುಡಿಯೋದಲ್ಲಿ ಕೆಲಸ ಮಾಡಲು ಅನುಭವವುಳ್ಳ (Experience ಇರುವ) ಯುವಕ / ಯುವತಿಯರು ಬೇಕಾಗಿದ್ದಾರೆ
9916051771

ಸುವರ್ಣ ಯಾತ್ರ
01/06/22 ಕಾಶಿ ಪ್ರವಾಸ 7 ದಿನಗಳು, ಅಯೋಧ್ಯ ಪ್ರಯಾಗ್‌ರಾಜ್, ಶ್ರೀ ಬಾಬಾ ಬೈದ್ಯನಾಥ ಹಾಗೂ ಇತರೆ. 11/06/22 ಚಾರ್ ದಾಮ್ ಪ್ರವಾಸ 13 ದಿನಗಳು ಕೇದಾರ್‌ನಾಥ, ಬದ್ರಿನಾಥ, ಯಮುನೋತ್ರಿ, ಗಂಗೋತ್ರಿ ಹಾಗೂ ಇತರೆ 9 ದಿನಗಳ ಮುಕ್ತಿನಾಥ ಪ್ರವಾಸ 10/06/22 ಮುಕ್ತಿನಾಥ, ಪಶುಪತಿನಾಥ, ಪೋಕ್ರ, ಕಠ್ಮಂಡು, ಹಾಗು ಇತರೆ ಸ್ಥಳಗಳು. 5 ದಿನಗಳ ತಮಿಳುನಾಡು ಪ್ರವಾಸ 28/06/22, 9 ನವಗ್ರಹ, ತಂಜಾವೂರು, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಪಳನಿ ಹಾಗೂ ಇತರೆ ಸ್ಥಳಗಳು
8970949434 / 9019462508

ಬೇಕಾಗಿದ್ದಾರೆ
ಗ್ರಾಮೀಣ+ನಗರದ ಕನ್ನಡ ಬಲ್ಲ ಅಭ್ಯರ್ಥಿಗಳನ್ನು ಮೈಸೂರಿನಲ್ಲಿರುವ AW ಕಂಪನಿಗೆ ನೇರ ಭರ್ತಿ ಮಾಡಿಕೊಳ್ಳಲಾಗುತ್ತದೆ. ಯಾವುದೇ Experience ಅಗತ್ಯವಿಲ್ಲ. (Consultancy ಅಲ್ಲ) ವಿದ್ಯಾರ್ಹತೆ: SSLC(Pass), PUC, ITI, Any Degree, ವಯೋಮಿತಿ : 18-31 years ತಿಂಗಳಿಗೆ 23,500–32,500+ಉಚಿತ ವಸತಿ
ಅಂಜಲಿ: 9844219943
9743199416

ಬೇಕಾಗಿದ್ದಾರೆ
ಫ್ಯಾಕ್ಟರಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 48, ಸಂಬಳ 14,500 ESI, PF ಒಳಗೊಂಡು 3 Shifts, W/o ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಬಂದು ಸಂಪರ್ಕಿಸಿ. ಸ್ಥಳ: ಮೇಟಗಳ್ಳಿ, CIPET ಕಾಲೇಜ್ ಹತ್ತಿರ, ಮೈಸೂರು.
9986874584

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಮತ್ತು TVS ಫ್ಯಾಕ್ಟರಿ ಸುತ್ತಮುತ್ತ ಏರಿಯಾದ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: 15,000/–+ W/o (8 Hours), ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9538567819

DOCUMENT LOST
M.S.ವಿದ್ಯಾಶ್ರೀ D.No.112, SBM ಕಾಲೋನಿ ಉದಯಗಿರಿ, ಮೈಸೂರು–19, ಮೇಲ್ಕಂಡ M.S.ವಿದ್ಯಾಶ್ರೀ ಆದ ನಾನು ದಿನಾಂಕ 07–05–22 ರಂದು ಸಾಯಂಕಾಲ ಸುಮಾರು 5 ಗಂಟೆ ಸಮಯ ಉದಯಗಿರಿ ಚೆರಾಕ್ ಅಂಗಡಿಯಿಂದ ಮನೆಗೆ ಬರುವಾಗ ನನ್ನ ಮೊದಲನೆ ಡಿಪ್ಲೋಮೊ ಸೆಮಿಸ್ಟರ್ ಮಾರ್ಕ್ಸ್‌ಕಾರ್ಡ್ ಕಳೆದು ಹೋಗಿರುತ್ತದೆ. ದಯಮಾಡಿ ಯಾರಿಗಾದರೂ ಸಿಕ್ಕಿದಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ತಿಳಿಸತಕ್ಕದ್ದು.
9945034561

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಾ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ. ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಶಿಥಿಲಗೊಂಡಿದ್ದ ಕಟ್ಟಡ ತೆರವು



ಮೈಸೂರು, ಮೇ 18(ಎಂಕೆ)– ಮೈಸೂರಿನ ನ್ಯೂ ಸಯ್ಯಾಜಿರಾವ್(ಅಗ್ರಹಾರ ಬಳಿ) ರಸ್ತೆಯಲ್ಲಿ ಕುಸಿದು ಬೀಳುವ ಹಂತದಲ್ಲಿದ್ದ ಕಟ್ಟಡವೊಂದನ್ನು ಬುಧವಾರ ಕೆಡವಿ, ಕಟ್ಟಡ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ಕಟ್ಟಡ ಸಂಪೂರ್ಣ ಶಿಥಿಲಗೊಂಡಿದ್ದು, ಕುಸಿದು ಬೀಳುವ ಹಂತದಲ್ಲಿದೆ ಎಂದು ನಗರ ಪಾಲಿಕೆ ವತಿಯಿಂದ ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಿ, ಜನರಲ್ಲಿ ಅರಿವು ಮೂಡಿಸುವ ದೃಷ್ಟಿಯಿಂದ ಕಟ್ಟಡದ ಮೇಲೂ ನೋಟಿಸ್ ಅಂಟಿಸಲಾಗಿತ್ತು. ಇದನ್ನರಿತ ಕಟ್ಟಡ ಮಾಲೀಕರು ಶಿಥಿಲಗೊಂಡಿದ್ದ ತಮ್ಮ ಕಟ್ಟಡವನ್ನು ಕೆಡವಿದ್ದಾರೆ.

ಕೆಪಿಎ ನಿರ್ದೇಶಕರಾಗಿ ಇಂದು ಅನುಪಮ್ ಅಧಿಕಾರ ಸ್ವೀಕಾರ



ಮೈಸೂರು, ಮೇ 18– ಮೈಸೂರಿನಲ್ಲಿರುವ ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕರಾಗಿ ಡಿಐಜಿಪಿ ಅನುಪಮ ಅಗ್ರವಾಲ್ ಗುರುವಾರ ಅಧಿಕಾರ ಸ್ವೀಕರಿಸಲಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಹಾಲಿ ನಿರ್ದೇಶಕರಾಗಿರುವ ಐಜಿಪಿ ಪ್ರವೀಣ್ ಮಧುಕರ್ ಅವರಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ. 2008ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಅನುಪಮ್ ಅಗ್ರವಾಲ್ ದಾವಣಗೆರೆ ಎಎಸ್‌ಪಿ, ಬೆಳಗಾವಿ ಡಿಸಿಪಿ, ರಾಮನಗರ ಹಾಗೂ ವಿಜಯಪುರ ಎಸ್ಪಿ ಕ್ರೀಡಾ ಇಲಾಖೆ ಆಯುಕ್ತ, ಬಿಎಂಟಿಸಿ ಭದ್ರತಾ ದಳದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿ, ಈಗ ಬಡ್ತಿಯೊಂದಿಗೆ ಕೆಪಿಎ ನಿರ್ದೇಶಕರಾಗಿ ನಿಯೋಜನೆಗೊಂಡಿದ್ದಾರೆ. ಮೂಲತಃ ರಾಜಸ್ತಾನ ರಾಜ್ಯದ ಜೋಧ್‌ಪುರದವರಾದ ಅಗ್ರವಾಲ್ ಬಿಕಾಂ ಪದವೀಧರರಾಗಿದ್ದು, ಚಾರ್ಟರ್ಡ್ ಅಕೌಂಟೆಂಟ್ ಪರೀಕ್ಷೆಯಲ್ಲೂ ಉತ್ತೀರ್ಣರಾಗಿದ್ದಾರೆ.

ಮನೆ ಮುಂದೆ ನಿಲ್ಲಿಸಿದ ಬೊಲೆರೊ ಜೀಪ್ ಕಳವು

ಶ್ರೀರಂಗಪಟ್ಟಣ, ಮೇ 18– ಮನೆ ಮುಂದೆ ನಿಲ್ಲಿಸಿದ್ದ ಬೊಲೆರೊ ಜೀಪ್ ಕಳವಾಗಿರುವ ಘಟನೆ ಶ್ರೀರಂಗಪಟ್ಟಣ ತಾಲೂಕು ಕಿರಂಗೂರು ಗ್ರಾಮದಿಂದ ವರದಿಯಾಗಿದೆ. ಈ ಗ್ರಾಮದ ಕುರಿ ವ್ಯಾಪಾರಿ ಸಮೀರ್ ಅಹ್ಮದ್ ಅವರು ತಮ್ಮ ಬೊಲೆರೊ ಜೀಪ್ (ಕೆಎ16 ಎ6347) ಅನ್ನು ಮೇ 13ರಂದು ರಾತ್ರಿ ತನ್ನ ಮನೆ ಬಳಿ ನಿಲ್ಲಿಸಿದ್ದು, ಮರುದಿನ ಬೆಳಗ್ಗೆ ನೋಡಿದಾಗ ಅದು ಕಳವಾಗಿದೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಶ್ರೀರಂಗಪಟ್ಟಣ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳ ನೇತೃತ್ವದ

ವಿಶ್ವಶಾಂತಿ ಪಾದಯಾತ್ರೆ ಅಂತ್ಯ

ಲೋಕ ಕಲ್ಯಾಣ, ವಿಶ್ವಶಾಂತಿಗಾಗಿ ಮೇಕೆದಾಟುವಿನಿಂದ ಆರಂಭವಾಗಿದ್ದ ಪಾದಯಾತ್ರೆ ಮೈಸೂರು ಆಶ್ರಮದಲ್ಲಿ ಸಮಾಪ್ತಿ

• ಶಾಸಕ ರಾಮದಾಸ್ ನೇತೃತ್ವದಲ್ಲಿ ಕುರುಬಾರಹಳ್ಳಿ ವೃತ್ತದಲ್ಲಿ ಸ್ವಾಗತ
• ಮಳವಳ್ಳಿಯಲ್ಲಿ ಪೌರಕಾರ್ಮಿಕರಿಂದ ಸ್ವಾಗತ • ಮೈಸೂರಲ್ಲಿ ಸಚ್ಚಿದಾನಂದ ಶ್ರೀಗಳ ಹೆಸರಿನ ಸರ್ಕಲ್ • ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ



ಮೈಸೂರು, ಮೇ 18(ಎಂಟಿವೈ)– ಲೋಕ ಕಲ್ಯಾಣ ಹಾಗೂ ವಿಶ್ವಶಾಂತಿಗಾಗಿ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಗಳು ಹಮ್ಮಿಕೊಂಡಿದ್ದ ಮೇಕೆದಾಟು ಮೈಸೂರು ಪಾದಯಾತ್ರೆ ಬುಧವಾರ ಬೆಳಗ್ಗೆ ಮೈಸೂರು ತಲುಪಿತು.

ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜನ್ಮದಿನದ ಹಿನ್ನೆಲೆಯಲ್ಲಿ ಸ್ವಾಮೀಜಿ ಅವರ ಹುಟ್ಟೂರಾದ ಮೇಕೆದಾಟುವಿನಿಂದ ಮೇ 13ರಂದು ದತ್ತಪೀಠದ ಕಿರಿಯ ಸ್ವಾಮೀಜಿ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪಾದಯಾತ್ರೆ ಆರಂಭಿಸಿದ್ದರು. ಆರು ದಿನಗಳ ಪಾದಯಾತ್ರೆ ಇಂದು ಬೆಳಗ್ಗೆ ಮೈಸೂರು ಆಶ್ರಮ ತಲುಪಿತು.

ಪಾದಯಾತ್ರೆ ಮೈಸೂರು ಪ್ರವೇಶಿಸುತ್ತಿದ್ದಂತೆ ಕುರುಬಾರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಆಶ್ರಮದ ಭಕ್ತರು ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಗೆ ಹಾರ ಹಾಕಿ, ಪುಷ್ಪಾರ್ಚನೆ ಮಾಡಿ ಜೈಕಾರದ ಘೋಷಣೆ ಮೊಳಗಿಸಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಇದೇ ವೇಳೆ ದತ್ತ ವಿಜಯಾನಂದ ಸ್ವಾಮೀಜಿ ಮಾತನಾಡಿ, ಈಗ ಶುಭಕೃತ್ ನಾಮ ಸಂವತ್ಸರವಾಗಿದ್ದು, ಸರ್ವರಿಗೂ ಶುಭವಾಗಲೆಂದು ಪ್ರಾರ್ಥಿಸಿದ್ದೇನೆ. ದತ್ತಪೀಠದ ಹಿರಿಯ ಸ್ವಾಮೀಜಿ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜನ್ಮದಿನದ ಹಿನ್ನೆಲೆಯಲ್ಲಿ ಸ್ವಾಮೀಜಿ ಅವರ ಹುಟ್ಟೂರಾದ ಮೇಕೆದಾಟುವಿನಿಂದ ವಿಶ್ವಶಾಂತಿಗಾಗಿ ಪಾದಯಾತ್ರೆ ನಡೆಸಲಾಯಿತು ಎಂದರು.

ಮೇಕೆದಾಟುವಿನಿಂದ ಕಾವೇರಿ ತೀರ್ಥವನ್ನು ತರಲಾಗಿದೆ. ಇದರೊಂದಿಗೆ ವಿಶ್ವಶಾಂತಿಗಾಗಿ, ಗೋ–ಸಂರಕ್ಷಣೆ, ಪರಿಸರ ಸಂರಕ್ಷಣೆಗೆ ವಿಶೇಷ ಪ್ರಾರ್ಥನೆ ಮಾಡಲಾಗಿದೆ. ಅಲ್ಲದೆ, ಸಂಕಷ್ಟದಲ್ಲಿರುವ ವೇದ ಪಾಠಶಾಲೆಗಳಿಗೆ, ರೈತರಿಗೂ ನೆರವಾಗುವ ನಿಟ್ಟಿನಲ್ಲಿ ಪಾದಯಾತ್ರೆ ನಡೆಸಲಾಗಿದೆ. ಸಕಾಲದಲ್ಲಿ ಮಳೆ ಬರುವಂತೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿದೆ. ನಮಗೆ ಅಕಾಲದ ಮಳೆ ಬೇಡ. ಸಕಾಲದಲ್ಲೇ ಮಳೆ ಬೇಕಾಗಿದೆ. ಇದರಿಂದ ರೈತರ ಸ್ಥಿತಿಗತಿ ಸುಧಾರಿಸಲು ಸಾಧ್ಯವಾಗಲಿದೆ ಎಂದರು.

ನಮ್ಮ ಪಾದಯಾತ್ರೆಗೆ ಮಳವಳ್ಳಿಯಲ್ಲಿ ಅಭೂತಪೂರ್ವ ಸ್ವಾಗತ ದೊರೆತಿದೆ. ಮೊದಲು ಪೌರಕಾರ್ಮಿಕರು ಪಾದಯಾತ್ರೆಗೆ ಸ್ವಾಗತ ಕೋರಿದರು. ನಂತರ ನಾವು ಪೌರಕಾರ್ಮಿಕರ ಬೀದಿಗೆ ತೆರಳಿದ ಬಳಿಕ ಬ್ರಾಹ್ಮಣರ ಬೀದಿ ಹಾಗೂ ಶ್ರೀರಾಮ ಮಂದಿರಕ್ಕೆ ಭೇಟಿ ನೀಡಿದ್ದೆವು. ಬಳಿಕ ನಡೆದ ಪಾದಯಾತ್ರೆಯಲ್ಲಿ ಪೌರ ಕಾರ್ಮಿಕರು ಹಾಗೂ ಬ್ರಾಹ್ಮಣ ಸಮುದಾಯದವರು ಒಟ್ಟಿಗೆ ಪಾಲ್ಗೊಂಡರು. ಇದೊಂದು ಒಳ್ಳೆಯ ಸಂದೇಶ ನೀಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪಾದಯಾತ್ರೆಯಲ್ಲಿ ಜನರ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆಯೂ ಜಾಗೃತಿ ಮೂಡಿಸಿದೆ. ಇತ್ತೀಚಿನ ದಿನದಲ್ಲಿ ಬದಲಾದ ಜೀವನ ಶೈಲಿಯಿಂದಾಗಿ ಜನರು ನಡೆಯುವುದನ್ನೇ ಮರೆತಿದ್ದಾರೆ. ಎಲ್ಲರೂ ಪ್ರತಿದಿನ ಕನಿಷ್ಠ 40 ನಿಮಿಷವಾದರೂ ನಡೆಯಬೇಕು. ನಡೆಯುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಆದರೆ ಜನರು ಕಾಲ್ನಡಿಗೆ ಬಿಟ್ಟು ಎಲ್ಲದಕ್ಕೂ ವಾಹನವನ್ನೇ ಅವಲಂಬಿಸಿದ್ದಾರೆ. ಇನ್ನು ಮುಂದೆಯಾದರೂ ಎಲ್ಲರೂ ನಡೆದಾಡುವುದಕ್ಕೆ ಮುಂದಾಗಬೇಕು. ಎಲ್ಲರೂ ಆರೋಗ್ಯ ಕಾಪಾಡಿಕೊಂಡರೆ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವಾಗಲಿದೆ ಎಂದು ಹೇಳಿದರು.

ಸ್ವಾಮೀಜಿ ಹೆಸರಲ್ಲಿ ವೃತ್ತ ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ಗಣಪತಿ ಸಚ್ಚಿದಾನಂದ ಸ್ವಾಮೀಜಿ 80ನೇ ವರ್ಷಕ್ಕೆ ಕಾಲಿಟ್ಟಿರುವುದು ದೇಶವೇ ಸಂಭ್ರಮ ಹಾಗೂ ಹೆಮ್ಮೆಪಡುವ ಸಂಗತಿಯಾಗಿದೆ. 70 ರಾಷ್ಟ್ರಗಳಲ್ಲಿ ಆಶ್ರಮ ನಿರ್ಮಿಸುವ ಮೂಲಕ ಸನಾತನ ಧರ್ಮ ಉಳಿಸಿ, ಪ್ರಚಾರ ಮಾಡುವ ಮಹತ್ತರ ಕೆಲಸವನ್ನು ನಿಭಾಯಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿಗಳಿಗೆ 80 ವರ್ಷ ಸಂದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸ್ವಾಮೀಜಿ ಹೆಸರಲ್ಲಿ ಯಾವುದಾದರೂ ಒಂದು ವೃತ್ತವನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರೊಂದಿಗೆ ಚರ್ಚಿಸಲಾಗಿದೆ. ವೃತ್ತ ನಿರ್ಮಾಣಕ್ಕೆ ನಿರ್ಣಯ ಕೈಗೊಳ್ಳಲಾಗುತ್ತದೆ. ಅದಕ್ಕಾಗಿ 1.50 ಕೋಟಿ ರೂ. ಮೀಸಲಿಡಲು ಉದ್ದೇಶಿಸಲಾಗಿದ್ದು, ವೃತ್ತದ ಕಾಮಗಾರಿಯ ಶಂಕುಸ್ಥಾಪನೆ ಬರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮ್ಮತಿಸಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಪಾಲಿಕೆ ಸದಸ್ಯ ಕೆ.ಜೆ. ರಮೇಶ್, ಬ್ರಾಹ್ಮಣ ಸಂಘದ ಡಿ.ಟಿ. ಪ್ರಕಾಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೇಬಲ್ ಮಹೇಶ್, ಅಪೂರ್ವ ಸುರೇಶ್, ಮೋಹನ್, ಹರೀಶ್, ಶ್ಯಾಮ್, ಕುರುಬಾರಹಳ್ಳಿ ಮಂಜಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಎಂ.ಕೆ.ಸೋಮಶೇಖರ್‌ರಿಂದ ಸ್ವಾಗತ



ಪಾದಯಾತ್ರೆ ಆಶ್ರಮದ ಸಮೀಪಕ್ಕೆ ಬರುತ್ತಿದ್ದಂತೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಬೆಂಬಲಿಗರೊಂದಿಗೆ ಆಗಮಿಸಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಗೆ ಹಾರ ಹಾಕಿ ಭಕ್ತಿಪೂರ್ವಕವಾಗಿ ಬರಮಾಡಿಕೊಂಡರು. ಈ ವೇಳೆ ಸ್ವಾಮೀಜಿಯವರ ಕುಶಲೋಪರಿ ವಿಚಾರಿಸಿದರು. ಈ ವೇಳೆ ಸ್ವಾಮೀಜಿ ಎಂ.ಕೆ.ಸೋಮಶೇಖರ್ ಅವರಿಗೆ ಆಶೀರ್ವದಿಸಿದರು.

ಬೆಂಗಳೂರಲ್ಲಿ ದಾಖಲೆ ಮಳೆ: ಕಾರ್ಮಿಕರಿಬ್ಬರ ಸಾವು

ಬೆಂಗಳೂರು, ಮೇ 18– ಮಂಗಳವಾರ ಸಂಜೆಯಿಂದ ಬೆಂಗಳೂರಲ್ಲಿ ಸುರಿದ ಭಾರೀ ಮಳೆಯಿಂದ ಅವಾಂತರಗಳು ಉಂಟಾಗಿದ್ದು, ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ.

ಉಲ್ಲಾಳ ಉಪನಗರದ ಉಪಕಾರ್ ಲೇಔಟ್‌ನಲ್ಲಿ ಪೈಪ್‌ಲೈನ್ ಕಾಮಗಾರಿ ವೇಳೆ ಈ ದುರಂತ ಸಂಭವಿಸಿದೆ. ಪೈಪ್‌ಲೈನ್ ಕಾಮಗಾರಿ ಸ್ಥಳದಲ್ಲಿ ಮಳೆ ನೀರು ತುಂಬಿಕೊಂಡು ಇಬ್ಬರು ಕಾರ್ಮಿಕರು ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಮೂವರು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅದೃಷ್ಟವಶಾತ್ ಓರ್ವ ಅಲ್ಲಿಂದ ಪಾರಾಗಿ, ಇಬ್ಬರು ಮೃತಪಟ್ಟಿದ್ದಾರೆ.

ಮೃತರನ್ನು ಬಿಹಾರ ಮೂಲದ ದೇವ್ ಭರತ್ ಹಾಗೂ ಉತ್ತರ ಪ್ರದೇಶದ ಅಂಕಿತ್ ಕುಮಾರ್ ಅಂತ ಗುರುತಿಸಲಾಗಿದೆ. ರಾತ್ರಿಯಿಡೀ ಪೈಪ್ ಲೈನ್‌ನಲ್ಲೇ ಮೃತದೇಹವಿದ್ದು ಇಂದು ಬೆಳಗ್ಗೆ ಹೊರತೆಗೆಯಲಾಗಿದೆ.

ಕಾವೇರಿ ಐದನೇ ಹಂತದ ಕಾಮಗಾರಿಗಾಗಿ ಬೃಹತ್ ಪೈಪ್ ಒಳಗೆ ಮೂವರು ಕಾರ್ಮಿಕರು ಇಳಿದಿದ್ದರು. ಮಳೆ ಬರುತ್ತಿದ್ದಂತೆ ಕಾಮಗಾರಿಗೆ ಅಳವಡಿಕೆ ಮಾಡಿದ್ದ ಪೈಪ್‌ಗೆ ನೀರು ತುಂಬಿಕೊಂಡಿತು. ಹೀಗಾಗಿ ಪೈಪ್ ತುಂಬಿ ಕಾಮಗಾರಿಗೆ ಅಗೆಯಲಾಗಿದ್ದ ಹೊಂಡಕ್ಕೂ ನೀರು ತುಂಬಿದೆ. ಮೂವರ ಪೈಕಿ ಓರ್ವ ನೀರು ತುಂಬುತ್ತಿದ್ದಂತೆ ಹೊರಕ್ಕೆ ಬಂದು ಬಚಾವ್ ಆಗಿದ್ದಾನೆ. ಆದರೆ ನೀರಿನ ರಭಸಕ್ಕೆ ಇಬ್ಬರು ಕಾರ್ಮಿಕರು ಪೈಪ್ ಒಳಗೆಯೇ ಹಲವು ದೂರ ಕೊಚ್ಚಿ ಹೋಗಿದ್ದಾರೆ. ಉಸಿರುಗಟ್ಟಿ ಇಬ್ಬರು ಸತ್ತಿದ್ದು, ರಾತ್ರಿಯಿಡೀ ಮೃತ ದೇಹ ಅದೇ ಪೈಪ್ ಲೈನ್‌ನಲ್ಲಿ ಇತ್ತು. ಇಬ್ಬರು ಕಾರ್ಮಿಕರ ಸಾವಿಗೆ ಸಂಬಂಧಿಸಿದಂತೆ ಇಬ್ಬರು ಗುತ್ತಿಗೆದಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ನೀರಿನಿಂದ ಜಲಾವೃತ: ನಗರದ ಬಹುತೇಕ ಭಾಗಗಳು 2–3 ಅಡಿ ಆಳದ ನೀರಿನಿಂದ ಜಲಾವೃತವಾಗಿವೆ, ನೀರು ಕೆಳಗೆ ಹರಿಯುವ ಪ್ರದೇಶಗಳಲ್ಲಿ ಹೂಳು, ಕೆಸರು ಮತ್ತು ಕಸ ತುಂಬಿಹೋಗಿದೆ. ಮಂಗಳವಾರ ತಡರಾತ್ರಿ ಮತ್ತು ಬುಧವಾರ ಬೆಳಗ್ಗೆ ನಗರದ ಬಹುತೇಕ ಭಾಗಗಳಲ್ಲಿ ನೀರು ಹರಿದಿರುವುದು ಮಾತ್ರವಲ್ಲದೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸಿಬ್ಬಂದಿ ಸ್ಥಳಕ್ಕೆ ತಲುಪಲು ಸಾಧ್ಯವಾಗದ ಕಾರಣ ಕಸ ಮತ್ತು ಹೂಳು ಸ್ವಚ್ಛಗೊಳಿಸುವ ಕೆಲಸವನ್ನು ನಿವಾಸಿಗಳೇ ಮಾಡಿಕೊಂಡರು.

ಭಾರತೀಯ ಹವಾಮಾನ ಇಲಾಖೆ (IMD) ಪ್ರಕಾರ ನಗರದಲ್ಲಿ ಮಂಗಳವಾರ ರಾತ್ರಿ 8.30 ರಿಂದ 8.30 ರವರೆಗೆ 11cm (114.6mm) ಮಳೆ ದಾಖಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ ಹೊರಮಾವಿನಲ್ಲಿ 155 ಮಿಮೀ ಗರಿಷ್ಠ ಮಳೆ ದಾಖಲಾಗಿದ್ದರೆ, ಯಲಹಂಕದಲ್ಲಿ 129 ಮಿಮೀ, ವಿದ್ಯಾಪೀಠ 127 ಮಿಮೀ, ರಾಜಮಹಲ್ 122 ಮಿಮೀ, ನಾಗಪುರ 120 ಮಿಮೀ ಮತ್ತು ಸಂಪಂಗಿರಾಮನಗರ 119 ಮಿಮೀ ಮಳೆ ದಾಖಲಾಗಿದೆ.

ಕಂಟ್ರೋಲ್ ರೂಂಗೆ ನೂರಾರು ಕರೆಗಳು: ಬಿಬಿಎಂಪಿ ನಿಯಂತ್ರಣ ಕೊಠಡಿಯ ಕೇಂದ್ರ ಕಚೇರಿಯೊಂದರಲ್ಲೇ ರಾತ್ರಿಯಿಡೀ 1500ಕ್ಕೂ ಹೆಚ್ಚು ಕರೆಗಳು ಬಂದಿವೆ. ಎಲ್ಲಾ ಎಂಟು ವಲಯಗಳ ನಿಯಂತ್ರಣ ಕೊಠಡಿಗಳಿಗೆ 8000 ಕರೆಗಳು ಬಂದಿವೆ, ಅವುಗಳಲ್ಲಿ ಹೆಚ್ಚಿನವು ತಗ್ಗು ಪ್ರದೇಶಗಳಿಗೆ, ಮನೆಗಳಿಗೆ ನೀರು ನುಗ್ಗಿದ್ದು, ಕಾರುಗಳು ಹಾನಿಗೊಳಗಾದ ಮತ್ತು ಹೂಳು ತುಂಬಿಕೊಂಡವುಗಳಿಗೆ ಸಂಬಂಧಿಸಿದವು. ನೀರನ್ನು ತೆರವುಗೊಳಿಸಲು ನೆಲಮಾಳಿಗೆಯಿಂದ ಪಂಪ್ ಮಾಡಲಾಗುವುದು, ಇಡೀ ದಿನ ತೆಗೆದುಕೊಳ್ಳುತ್ತದೆ ಎಂದು ಹಿರಿಯ ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹೂಳು ಮತ್ತು ಕಸವನ್ನು ತೆರವುಗೊಳಿಸಲು ಸುಮಾರು 2–3 ದಿನಗಳು ಬೇಕಾಗುತ್ತದೆ. ಆದಷ್ಟು ಬೇಗ ತೆರವುಗೊಳಿಸಲು ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದರು.

ಶಾಂತಿನಗರ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ, ದೇವೇನಗಲ್ಲಿ ಮುಖ್ಯರಸ್ತೆ, ಕೋರಮಂಗಲ, ಇಂದಿರಾನಗರ ಮುಂತಾದ ಕಡೆಗಳಲ್ಲಿ ನೀರು ನಿಂತಿದ್ದರಿಂದ ಸಂಚಾರ ಪೊಲೀಸರು ಟ್ರಾಫಿಕ್ ನಿರ್ವಹಣೆ ಮಾಡಲು ಹರಸಾಹಸ ಪಡುತ್ತಿರುವುದು ಕಂಡು ಬಂತು. ಮಂಗಳವಾರ ರಾತ್ರಿಯಿಂದಲೇ ನೀರು ತುಂಬಿ ವಾಹನಗಳು ಜಖಂಗೊಂಡಿರುವುದರಿಂದ ವಿಮಾನ ನಿಲ್ದಾಣ ರಸ್ತೆಯಲ್ಲಿ 3 ಕಿ.ಮೀ.ವರೆಗೆ ಟ್ರಾಫಿಕ್ ಜಾಮ್ ಬುಧವಾರ ಬೆಳಗ್ಗೆಯೂ ಮುಂದುವರಿದಿದೆ. ಹೆಬ್ಬಾಳ ಮೇಲ್ಸೇತುವೆಯಲ್ಲಿ ಬುಧವಾರ ಬೆಳಗ್ಗೆಯೂ ನೀರು ನಿಂತಿದ್ದರಿಂದ ಟ್ರಾಫಿಕ್ ಜಾಮ್ ಆಗಿತ್ತು.



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬುಧವಾರ ಮೈಸೂರಿಗೆ ಆಗಮಿಸಿದರು. ಅವರನ್ನು ಹೂಗುಚ್ಛ ನೀಡಿ ಖಾಸಗಿ ಹೋಟೆಲ್ ಬಳಿ ಮುಡಾ ಸದಸ್ಯೆ ಲಕ್ಷ್ಮಿ ದೇವಿ ಸ್ವಾಗತಿಸಿದರು. ಪಾಲಿಕೆ ಸದಸ್ಯ ಜಗದೀಶ್, ಶಿವರಾಜ್ ಉಪಸ್ಥಿತರಿದ್ದರು.

ಪೊಲೀಸ್ ಪೇದೆಯ ಸಹೋದರಿ ಅಪಹರಣ

ಚಾಮರಾಜನಗರ, ಮೇ 18– ಸಶಸ್ತ್ರ ಮೀಸಲು ಪಡೆಯ ಹೆಡ್‌ಕಾನ್ಸ್‌ಟೇಬಲ್ ತಂಗಿಯನ್ನು ದುಷ್ಕರ್ಮಿಗಳು ಅಪಹರಣ ಮಾಡಿರುವ ಬಗ್ಗೆ ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸ್ ವಸತಿಗೃಹದಲ್ಲಿ ಡಿಎಆರ್ ಹೆಡ್‌ಕಾನ್ಸ್‌ಟೇಬಲ್ ಮಹದೇವಸ್ವಾಮಿ ವಾಸವಾಗಿದ್ದು, ಅವರ ಜೊತೆಯೇ ತಂಗಿ ಶ್ಯಾಮಲಾ ಮತ್ತು ತಮ್ಮ ಪ್ರೇಮ್‌ಕುಮಾರ್ ವಾಸವಾಗಿದ್ದಾರೆ. ಮೇ 16ರಂದು ಬೆಳಗ್ಗೆ 11.45ರ ಸುಮಾರಿನಲ್ಲಿ ಪೊಲೀಸ್ ವಸತಿಗೃಹದ ಟೆನ್ನಿಸ್ ಕೋರ್ಟ್ ಪಕ್ಕದಲ್ಲಿರುವ ರಸ್ತೆಯಲ್ಲಿ ಮಹದೇವಸ್ವಾಮಿ ಅವರ ತಂಗಿ ಶ್ಯಾಮಲಾ (25) ಅವರನ್ನು ಸಿಲ್ವರ್ ಬಣ್ಣದ ಈಟಿಯೋಸ್ ಕಾರಿನಲ್ಲಿ ಬಂದ ಮೂವರು ಅಪಹರಿಸಿಕೊಂಡು ಹೋಗಿದ್ದಾರೆ ಎಂದು ಆಕೆಯ ಸಹೋದರ ಪ್ರೇಮ್‌ಕುಮಾರ್ ಪೊಲೀಸರಿಗೆ ದೂರು ಸಲ್ಲಿಸಿದ್ದು, ಈ ಅಪಹರಣದ ವಿಚಾರದಲ್ಲಿ ಶಿವನಸಮುದ್ರ ಗ್ರಾಮದ ರಘು ಎಂಬಾತನ ಮೇಲೆ ನನಗೆ ಅನುಮಾನವಿದೆ ಎಂದು ತಿಳಿಸಿದ್ದಾರೆ.

ಉಪ್ಪಿನ ಕಾರ್ಖಾನೆ ಗೋಡೆ ಕುಸಿದು 12 ಕಾರ್ಮಿಕರು ಸಾವು

ಮೊರ್ಬಿ (ಗುಜರಾತ್), ಮೇ 18– ಮೊರ್ಬಿಯ ಹಲ್ವಾಡ್ ಜಿಐಡಿಸಿಯಲ್ಲಿ ಉಪ್ಪು ಕಾರ್ಖಾನೆಯ ಗೋಡೆ ಕುಸಿದು ಕನಿಷ್ಠ 12 ಕಾರ್ಮಿಕರು ಮೃತಪಟ್ಟಿರುವ ದಾರುಣ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ. ಹಲ್ವಡ್ ಜಿಐಡಿಸಿಯ ಸಾಗರ್ ಉಪ್ಪಿನ ಕಾರ್ಖಾನೆಯಲ್ಲಿ ಇಂದು ಈ ದುರ್ಘಟನೆ ನಡೆದಿದ್ದು ಸರ್ಕಾರ ಮೃತರ ಕುಟುಂಬಸ್ಥರ ನೆರವಿಗೆ ನಿಲ್ಲಲಿದೆ ಎಂದು ಸಚಿವ ಬ್ರಿಜೇಶ್ ಮೆರ್ಜಾ ತಿಳಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ ಗುರುವಾರ 19 ಮೇ 2022

ಮೇಲುಕೋಟೆ ಯೋಗಾನರಸಿಂಹಸ್ವಾಮಿ ದೇಗುಲದ ರಾಜಗೋಪುರ ಮಹಾ ಸಂಪ್ರೋಕ್ಷಣೆ

ಮೇಲುಕೋಟೆ, ಮೇ 18– ಮೇಲುಕೋಟೆ ಯೋಗಾನರಸಿಂಹಸ್ವಾಮಿ ದೇವಾಲಯದ ರಾಜಗೋಪುರ ಮತ್ತು ಕಳಶಗಳ ಮಹಾ ಸಂಪ್ರೋಕ್ಷಣ ಕಾರ್ಯಕ್ರಮ ಬುಧವಾರ ವೈಭವದಿಂದ ನೆರವೇರಿತು. ಉಡುಪಿಯ ಪೇಜಾವರ ಶ್ರೀಗಳು ಪಾಲ್ಗೊಂಡು ಕಳಶಗಳಿಗೆ ಪುಷ್ಪಾರ್ಚನೆ ಮಾಡಿದರು.

ಚೆಲುವನಾರಾಯಣಸ್ವಾಮಿ ದೇವಾಲಯದ ಅರ್ಚಕರಾದ ವರದರಾಜಭಟ್ಟರ್ ನೇತೃತ್ವದಲ್ಲಿ ಆಗಮೋಕ್ತ ಧಾರ್ಮಿಕ ಕೈಂಕರ್ಯ ನಡೆದು ರಾಜಗೋಪುರದ ಮೇಲಿನ ಪ್ರಧಾನ ಕಳಶಕ್ಕೆ ಅಭಿಷೇಕ ನೆರವೇರಿಸಿ ಪುಷ್ಪವೃಷ್ಟಿಯೊಂದಿಗೆ ಮಹಾಸಂಪ್ರೋಕ್ಷಣ ನೆರವೇರಿಸಲಾಯಿತು.



ಮೇಲುಕೋಟೆಗೆ ಭಕ್ತರನ್ನು ಹತ್ತಾರು ಕಿಮೀ ದೂರದಿಂದಲೇ ಕೈಬೀಸಿ ಕರೆಯುವ ಐದು ಮಹಡಿಗಳುಳ್ಳ ವಿಜಯನಗರ ಶೈಲಿಯ ಸುಂದರ ವಿಗ್ರಹಗಳಿಂದ ಕೂಡಿದ ರಾಜಗೋಪುರವನ್ನು ಅನಿವಾಸಿ ಭಾರತೀಯ ರವೀಂದ್ರ 1.25 ಕೋಟಿಗೂ ಹೆಚ್ಚು ವೆಚ್ಚದಲ್ಲಿ ನವೀಕರಣ ಮಾಡುವ ಜೊತೆಗೆ ಗೋಪುರದ ಮೇಲ್ಭಾಗದ ಕಳಶಗಳಿಗೆ ಸ್ವರ್ಣಲೇಪನ ಮಾಡಿಸಿ ಮಹಾಸಂಪ್ರೋಕ್ಷಣ ನೆರವೇರಿಸಿ ಲೋಕಾರ್ಪಣೆ ಮಾಡಿಸಿದರು.

ತೊಲೆಗಳು ಮುರಿದು ಬಿದ್ದು ವಿಗ್ರಹಗಳ ಕೈಕಾಲುಗಳು ಮುರಿದು ಶಿಥಿಲಾವಸ್ಥೆಯಲ್ಲಿದ್ದ ರಾಜಗೋಪುರ ದುಸ್ಥಿತಿಯನ್ನು ಮಾಧ್ಯಮಗಳಲ್ಲಿ ವೀಕ್ಷಿಸಿ ರಾಜಗೋಪುರ ನವೀಕರಣಕ್ಕೆ ಸಂಕಲ್ಪಮಾಡಿದ ರವೀಂದ್ರ ಹಲವು ಸಲ ಇದಕ್ಕಾಗಿಯೇ ದುಬೈನಿಂದ ಬಂದು ಕಚೇರಿಗಳಿಗೆ ಸುತ್ತಾಡಿ ಕೊನೆಗೂ ಬುಧವಾರ ಸಂಕಲ್ಪ ಪೂರ್ಣಗೊಳಿಸಿದರು. ದಶಕಗಳಿಂದ ನರಸಿಂಹನ ಬೆಟ್ಟದ ರಾಜಗೋಪುರ ನವೀಕರಣವಾಗಿ ಸ್ವರ್ಣ ಲೇಪಿತ ಕಳಶಗಳು ಶಿಖರಪ್ರಾಯವಾಗಲಿ ಎಂಬ ಭಕ್ತರು ಮತ್ತು ನಾಗರೀಕರ ಆಶಯ ಈಡೇರಿದಂತಾಗಿದೆ.

ನರಸಿಂಹನ ಸನ್ನಿಧಿಯಲ್ಲಿ ಹೋಮದ ದ್ರವ್ಯಗಳನ್ನು ದಾನಿ ರವೀಂದ್ರ ಹಾಗೂ ಮೇಲುಕೋಟೆ ಶಾಸಕ ಸಿ.ಎಸ್. ಪುಟ್ಟರಾಜು ಪತ್ನಿ ನಾಗಮ್ಮ ಮಂಗಳ 'ವಾದ್ಯದ ಮೆರವಣಿಗೆಯಲ್ಲಿ ಪ್ರಾಕಾರದ ಪ್ರದಕ್ಷಿಣೆಯಲ್ಲಿ ತಂದು ಪೂರ್ಣಾಹುತಿ ಸಮರ್ಪಿಸಿದರು.

ಮಹಾಸಂಪ್ರೋಕ್ಷಣೆಯ ಕಾರ್ಯಕ್ರಮದಲ್ಲಿ ಮಂಡ್ಯಜಿಲ್ಲಾಧಿಕಾರಿ ಅಶ್ವಥಿ, ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ ಹಾಗೂ ಸ್ಥಾನೀಕರು, ಅರ್ಚಕರು ಪರಿಚಾರಕರು ಕೈಂಕರ್ಯಪರರು ಭಾಗವಹಿಸಿದ್ದರು. ಮಹಾಸಂಪ್ರೋಕ್ಷಣ ಕೇವಲ ಧಾರ್ಮಿಕ ಕೈಂಕರ್ಯಗಳಿಗೆ ಮಾತ್ರ ಸೀಮಿತವಾಗಿ ನೆರವೇರಿತು.

ಸತತ ಸುರಿಯುತ್ತಿರುವ ಮಳೆಯ ಪರಿಣಾಮ ಇಡೀ ಮೇಲುಕೋಟೆಯಲ್ಲಿ ಮಂಜು ಮುಸುಕಿದ ವಾತಾವರಣ ಸೃಷ್ಟಿಯಾಗಿತ್ತು.

ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ



ಶ್ರೀರಂಗಪಟ್ಟಣ, ಮೇ 18 (ಮಂಜು)– ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಇಂದು ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಪಶ್ಚಿಮವಾಹಿನಿಯಿಂದ ಪಂಪ್‌ಹೌಸ್‌ವರೆಗೂ ರಸ್ತೆ ಗುಂಡಿಗಳು ಬಿದ್ದಿದೆ, ಪ್ರತಿನಿತ್ಯ ವಾಹನ ಸವಾರರು ಪರದಾಡುವಂತಾಗಿದೆ, ಹಾಗೂ ಅಪಘಾತಕ್ಕೆ ಕಾರಣವಾಗಿದೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ರಸ್ತೆ ದುರಸ್ತಿಯಾಗದ ಕಾರಣ ಇಂದು ಗ್ರಾಮಸ್ಥರು ಪ್ರತಿಭಟನೆ ಮಾಡಿದರು. ಈ ಪ್ರತಿಭಟನೆಯಲ್ಲಿ ಪಾಲ ರಾಮೇಗೌಡ, ಪಿ.ಎಸ್.ಚಂದ್ರಶೇಖರ್, ರೈತ ಮುಖಂಡ ಪಾಲಹಳ್ಳಿ ಶ್ರೀನಿವಾಸು, ಪಿ.ಎಂ.ಶ್ರೀಧರ, ಪೈಲ್ವಾನ್ ಉಮೇಶ್, ಪಿ.ಎನ್. ರಮೇಶ್, ಪಿ.ಎನ್.ದಾಸೇಗೌಡ, ಪುಟ್ಟಸ್ವಾಮಿ ಹಾಗೂ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹೊಸಹಳ್ಳಿಯಲ್ಲಿ ವಿಜೃಂಭಣೆಯ ಮಾರಮ್ಮ ಹಬ್ಬ

ಮಂಡ್ಯ,ಮೇ 18(ಮೋಹನ್‌ರಾಜ್)– ಗ್ರಾಮದೇವತೆ ಬಿಸಿಲು ಮಾರಮ್ಮ ಹಬ್ಬ ನಗರದ ಹೊಸಹಳ್ಳಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು.



ಹೊಸಹಳ್ಳಿ ಹಾಗೂ ರಾಮನಹಳ್ಳಿ ಗ್ರಾಮಸ್ಥರು ಸೇರಿ ಗ್ರಾಮದೇವತೆ ಬಿಸಿಲು ಮಾರಮ್ಮ ದೇವಸ್ಥಾನದ ಹಬ್ಬವನ್ನು ಈ ಬಾರಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವಿಜೃಂಭಣೆಯಿಂದ ಆಚರಿಸಿದರು.

ಕಳೆದ ಎರಡು ವರ್ಷಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ಯಾವುದೇ ಹಬ್ಬ ಆಚರಿಸಲು ಆಗಿರಲಿಲ್ಲ. ಈಗ ಮಹಾಮಾರಿ ತೊಲಗಿ ಹಬ್ಬ–ಹರಿದಿನಗಳನ್ನು ಆಚರಿಸಲಾಗುತ್ತಿದೆ.

ಮಹಿಳೆಯರು ದೇವಿಗೆ ತಂಬಿಟ್ಟಿನ ಆರತಿ ತಂದು ವಿಶೇಷಪೂಜೆ ಸಲ್ಲಿಸಿದರು. ನಂತರ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತೆರಳಿ ದೇವರ ಮೆರವಣಿಗೆಯಲ್ಲಿ ಸಾಗಿದರು.

ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿ ಹಬ್ಬ ಆಚರಿಸುವಂತಾಗಲಿ ಎಂದು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹೆಚ್.ಸಿ.ಶಿವಲಿಂಗೇಗೌಡ ತಿಳಿಸಿದರು

ಯಜಮಾನರುಗಳಾದ ಸಿದ್ದಪ್ಪ, ಹೆಚ್.ಎಂ.ಸುರೇಶ್, ಬೋರೇಗೌಡ, ಪಟೇಲ್ ನಿಂಗಣ್ಣ, ಸ್ವಾಮಿ, ರೇವಣ್ಣ, ಶಿವಲಿಂಗಯ್ಯ, ಪುಟ್ಟರಾಮು, ರವಿಕುಮಾರ್, ಗ್ಯಾಸ್ ನಾಗಣ್ಣ, ಸೇರಿದಂತೆ ಹೊಸಹಳ್ಳಿ ಹಾಗೂ ರಾಮನಹಳ್ಳಿ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಬಿಜೆಪಿ ನೂತನ ಜಿಲ್ಲಾಧ್ಯಕ್ಷರಾಗಿ ಉಮೇಶ್ ನೇಮಕ

ಮಂಡ್ಯ,ಮೇ 18(ಮೋಹನ್ ರಾಜ್)– ಮಂಡ್ಯ ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷರನ್ನಾಗಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ. ಉಮೇಶ್ ಅವರನ್ನು ನೇಮಕ ಮಾಡಲಾಗಿದೆ.



ಈ ಸಂಬಂಧ ಆದೇಶ ಹೊರಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲು, ತುಮಕೂರು ಹಾಗೂ ಮಂಡ್ಯ ಜಿಲ್ಲೆಯ ಅಧ್ಯಕ್ಷರನ್ನು ಬದಲಾಯಿಸಿದ್ದು, ಮಂಡ್ಯ ಜಿಲ್ಲೆಯ ನೂತನ ಅಧ್ಯಕ್ಷರನ್ನಾಗಿ ಉಮೇಶ್ ಅವರನ್ನು ನೇಮಿಸಿದ್ದಾರೆ.

ಈ ಹಿಂದೆ ಇದ್ದ ಕೆ.ಜೆ.ವಿಜಯಕುಮಾರ್ ಕಳೆದ ಮೂರು ವರ್ಷಗಳಿಂದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಆದರೆ ಇದೀಗ ದಿಢೀರನೇ ಅಧ್ಯಕ್ಷರನ್ನು ಬದಲಿಸಲಾಗಿದೆ. ಉಮೇಶ್, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಬೆಂಬಲಿಗರಾಗಿದ್ದು, ಡಿಸಿಸಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಸಂದರ್ಭದಲ್ಲಿ ನಾಮ ನಿರ್ದೇಶಿತ ನಿರ್ದೇಶಕನಾಗಿ ನೇಮಕಗೊಂಡು ಜೆಡಿಎಸ್– ಬಿಜೆಪಿ ಮೈತ್ರಿಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಕಳೆದ ಒಂದು ವರ್ಷದಿಂದ ಪಕ್ಷ ಸಂಘಟನೆ ಹಾಗೂ ಬ್ಯಾಂಕ್‌ನ ಅಧ್ಯಕ್ಷರಾಗಿ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಿದ್ದ ಹಿನ್ನೆಲೆಯಲ್ಲಿ ಇದೀಗ ಉಮೇಶ್‌ರನ್ನು ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಬೆಂಬಲಿಗರು ಉಮೇಶ್ ಅವರನ್ನು ಅಭಿನಂದಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	100.95 ಅಡಿ
ಒಳಹರಿವು	5,396 ಕ್ಯೂಸೆಕ್
ಹೊರಹರಿವು	1,065 ಕ್ಯೂಸೆಕ್

ಜೂ.20ರಂದು ಉಚಿತ ಸಾಮೂಹಿಕ ವಿವಾಹ

ಚಾಮರಾಜನಗರ, ಮೇ 18– ಮಹದೇಶ್ವರ ಬೆಟ್ಟದ ಮಲೆಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಉಚಿತ ಸಾಮೂಹಿಕ ವಿವಾಹವನ್ನು ಜೂ. 20ರಂದು ಏರ್ಪಡಿಸಲಾಗಿದೆ. ವರನ ವಯಸ್ಸು 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಪ್ರಾಧಿಕಾರದಿಂದ ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ–ರವಿಕೆ ಹಾಗೂ ವರನಿಗೆ ಪಂಚೆ, ಶರ್ಟ್ ಹಾಗೂ ಟವೆಲ್ ಉಚಿತವಾಗಿ ನೀಡಲಾಗುತ್ತದೆ. ವಧು–ವರರ ಕಡೆಯವರು ತಲಾ 10 ಜನಕ್ಕೆ ಮೀರದಂತೆ ಭಾಗವಹಿಸಲು ಅವಕಾಶವಿದೆ. ಮಾಹಿತಿಗಾಗಿ ಮೊ:9480065393, 9113215342, ದೂ:08225–272128ನ್ನು ಸಂಪರ್ಕಿಸುವಂತೆ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ತಿಳಿಸಿದ್ದಾರೆ.

ಬಿಳಿಗಿರಿರಂಗನ ಬೆಟ್ಟದ ಕಮರಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ



ಯಳಂದೂರು, ಮೇ 18(ವಿ.ನಾಗರಾಜು)– ತಾಲೂಕಿನ ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟದ ಕಮರಿಗೆ ಹಾರಿ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಬೆಳಕಿಗೆ ಬಂದಿದೆ.

ನಂಜನಗೂಡು ತಾಲೂಕಿನ ಶೆಟ್ಟಳ್ಳಿ ಗ್ರಾಮದ ಎಸ್.ಆರ್. ರಂಗಸ್ವಾಮಿ(65) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಈತ ಸೋಮವಾರ ಬೆಳಗ್ಗೆ ಬೆಟ್ಟಕ್ಕೆ ಬಂದು ರಂಗನಾಥಸ್ವಾಮಿ ದರ್ಶನ ಪಡೆದು, ಪೂಜೆ ಮಾಡಿಸಿದ್ದಾರೆ. ಬಳಿಕ ದೇವಾಲಯದ ಪಕ್ಕದಲ್ಲಿಯೇ ಇರುವ ಕಮರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈತನ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಕಮರಿ ಬಳಿ ಎರಡು ದಿನಗಳಿಂದ ವ್ಯಕ್ತಿಯ ಚಪ್ಪಲಿ ಹಾಗೂ ಪೂಜಾ ಸಾಮಗ್ರಿ ಇರುವುದನ್ನು ಗಮನಿಸಿದ ಸ್ಥಳೀಯರು ಹಾಗೂ ದೇವಾಲಯದ ಆಡಳಿತ ಮಂಡಳಿ ಈ ಬಗ್ಗೆ ಯಳಂದೂರು ಪಟ್ಟಣ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಸಿಪಿಐ ಶಿವಮಾದಯ್ಯ, ಪಿಎಸ್‌ಐ ಕರಿಬಸಪ್ಪ, ಸಿಬ್ಬಂದಿ ಮುರಳಿ, ನಾಗೇಂದ್ರ, ಅರಣ್ಯ ಇಲಾಖೆಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಬಳಿಕ ಸ್ಥಳೀಯ ಗಿರಿಜನರ ಸಹಾಯದಿಂದ ಶವವನ್ನು ಕಮರಿಯಿಂದ ಮೇಲೆತ್ತಲಾಗಿದೆ. ಈ ಸಂಬಂಧ ಯಳಂದೂರು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಪಂ ಮಾಜಿ ಸದಸ್ಯ ಪುಟ್ಟಮರಿ ನಿಧನ



ಹನೂರು, ಮೇ 18– ತಾಲೂಕಿನ ಗುಂಡಾಪುರ ಗ್ರಾಪಂ ಮಾಜಿ ಸದಸ್ಯ, ಸಮಾಜ ಸೇವಕ ಪುಟ್ಟಮರಿ(54) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ ಗುಂಡಾಪುರದ ರುದ್ರಭೂಮಿಯಲ್ಲಿ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಕೊಳ್ಳೇಗಾಲದಲ್ಲಿ ಸಂಭ್ರಮದ ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಣೆ

ಬಸವಣ್ಣನವರ ತತ್ವಾದರ್ಶ ಅಳವಡಿಸಿಕೊಳ್ಳಲು ಸುತ್ತೂರು ಶ್ರೀ ಸಲಹೆ

ಕೊಳ್ಳೇಗಾಲ, ಮೇ 18(ನಾಗೇಂದ್ರಸ್ವಾಮಿ)– ಬಸವಣ್ಣ ಅವರ ಜಯಂತಿಯನ್ನು ಕೇವಲ ಉತ್ಸವಗಳಿಗೆ ಸೀಮಿತಗೊಳಿಸಬಾರದು. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಬಸವಣ್ಣ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಸುತ್ತೂರು ಸಂಸ್ಥಾನ ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಜಗಜ್ಯೋತಿ ಬಸವೇಶ್ವರರ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಬುಧವಾರ ವೀರಶೈವ ಸಂಘಟನೆಗಳಿಂದ ಆಯೋಜಿಸಿದ್ದ ಬಸವಣ್ಣನವರ ಭಾವಚಿತ್ರದ ಬೃಹತ್ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲರ ಮನೆ, ಮನೆಗಳಲ್ಲಿ ಬಸವಣ್ಣ ಮನೆಮಾಡಬೇಕು. ದೇಶದಲ್ಲಿ ಎಲ್ಲರೂ ಸಮಾನತೆಯಿಂದ ಬದುಕಬೇಕು. ತಾರತಮ್ಯ ಹಾಗೂ ಮೇಲು–ಕೀಳು ಎಂಬುದು ಇರಬಾರದೆಂಬ ಸಾರ್ವಕಾಲಿಕ ಸತ್ಯದ ಸಂದೇಶಗಳನ್ನು ಜಗತ್ತಿಗೆ ಸಾರಿದವರು ಬಸವಣ್ಣನರು. ಆ ಕಾರಣಕ್ಕಾಗಿಯೇ ಅವರು ಲೋಕ ಪೂಜ್ಯರಾಗಿದ್ದಾರೆ ಎಂದರು.



ಮಳೆಯ ನಡುವೆಯೂ ಅದ್ದೂರಿ ಮೆರವಣಿಗೆ: ಜಗಜ್ಯೋತಿ ಬಸವೇಶ್ವರರ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಬುಧವಾರ ವೀರಶೈವ ಸಂಘಟನೆಗಳಿಂದ ಆಯೋಜಿಸಿದ್ದ ಬಸವಣ್ಣನವರ ಭಾವಚಿತ್ರದ ಬೃಹತ್ ಮೆರವಣಿಗೆ ಪಟ್ಟಣದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ನೂರಾರು ಮಂದಿಯ ಹರ್ಷೋದ್ಗಾರಗಳ ನಡುವೆ ಆರಂಭವಾಗಿಜೋರು ಮಳೆಯ ನಡುವೆಯೂ ಅದ್ದೂರಿಯಾಗಿ ನಡೆಯಿತು.

ವೀರಗಾಸೆ, ನಂದಿಕಂಬ, ಗಾರುಡಿ ಗೊಂಬೆ, ಪೂಜಾ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಜನಪದ ಕಲಾ ತಂಡಗಳು ಪಾಲ್ಗೊಂಡು ಮೆರವಣಿಗೆಗೆ ಮೆರಗು ನೀಡಿತು. ಮಳೆಯನ್ನು ಲೆಕ್ಕಿಸದೇ ವೀರಶೈವ, ಬಸವ ಬಳಗದ ಯುವಕರು ಹಾಗೂ ಮುಖಂಡರು ಪಾಲ್ಗೊಂಡರು. ಮೆರವಣಿಗೆಯು ಕೆನರಾ ಬ್ಯಾಂಕ್ ವೃತ್ತದ ಮೂಲಕ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ಮುಕ್ತಾಯವಾಯಿತು.

ಮೆರವಣಿಗೆಯುದ್ದಕ್ಕೂ ಕಲಾವಿದರು, ಯುವಕರಿಗೆ ಮಜ್ಜಿಗೆ, ಸಿಹಿ, ಬಾಳೆಹಣ್ಣು ವಿತರಿಸಲಾಯಿತು. ಬಳಿಕ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ದಾಸೋಹ, ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಡಿವೈಎಸ್‌ಪಿ ನಾಗರಾಜು, ವೃತ್ತ ನಿರೀಕ್ಷಕ ಶಿವರಾಜ್, ಪಿಎಸ್‌ಐ ಉಮಾವತಿ, ಚೇತನ್, ಸಿಬ್ಬಂದಿಯಿಂದ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಈ ವೇಳೆ ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಮುಡಿಗುಂಡ ವಿರಕ್ತ ಮಠದ ಶ್ರೀಕಂಠ ಸ್ವಾಮೀಜಿ, ಹರಗುರು ಚರಮೂರ್ತಿಗಳು, ಶಾಸಕರಾದ ಸಿ.ಎಸ್.ನಿರಂಜನ್‌ಕುಮಾರ್, ಆರ್.ನರೇಂದ್ರ, ಮಾಜಿ ಶಾಸಕರಾದ ಪರಿಮಳಾ ನಾಗಪ್ಪ ಎಸ್.ಜಯಣ್ಣ, ಎ.ಆರ್. ಕೃಷ್ಣಮೂರ್ತಿ, ನಗರಸಭೆ ಅಧ್ಯಕ್ಷೆ ಸುಶೀಲಾ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ದತ್ತೇಶಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ್, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಮಹದೇವಪ್ರಸಾದ್, ಮುಖಂಡರಾದ ಡಾ.ಪ್ರೀತನ್‌ನಾಗಪ್ಪ, ಪೊನ್ನಾಚಿ ಮಹದೇವಸ್ವಾಮಿ, ದಿವ್ಯಾನಂದ ಮೂರ್ತಿ, ನಂಜುಂಡಸ್ವಾಮಿ, ಶಿವಕುಮಾರ್, ಗುರುಸ್ವಾಮಿ, ಮಂಜೇಶ್, ಶಿವಮಲ್ಲು ಬಿಂದು, ಲೋಕೇಶ್, ಗೌಡರ ಸೋಮಣ್ಣ, ಕೆಂಡಗಣ್ಣಸ್ವಾಮಿ, ಮಹದೇವ ಸ್ವಾಮಿ, ವೀರಭದ್ರಸ್ವಾಮಿ, ಪ್ರದೀಪ್, ಕಾರು ಪ್ರದೀಪ್, ಭೃಂಗೇಶ್, ತೋಂಟೇಶ್, ಮಲ್ಲಿಕಾರ್ಜುನಪ್ಪ, ಮಾದಪ್ಪ, ರವಿ, ಈಶ್ವರ್, ನಾಗೇಂದ್ರಸ್ವಾಮಿ, ಎಸ್.ಆರ್.ಮನೋಹರ್, ಜಿ.ಎನ್.ಲೋಕೇಶ್, ಜಿ.ಪಿ.ಶಿವಕುಮಾರ್, ಬಸವರಾಜು, ಇಂದ್ರೇಶ್, ಮಹೇಶ್, ಮಲ್ಲೇಶಪ್ಪ, ನಂದೀಶ್ ಸೇರಿದಂತೆ ಇತರರು ಹಾಜರಿದ್ದರು.

ಕಿನಕಹಳ್ಳಿ: ಸಂಭ್ರಮದ ಶ್ರೀ ಭಗೀರಥ ಜಯಂತಿ ಆಚರಣೆ

ಯಳಂದೂರು, ಮೇ 18(ವಿ.ನಾಗರಾಜು)– ತಾಲೂಕಿನ ಕಿನಕಹಳ್ಳಿ ಗ್ರಾಮದ ಉಪ್ಪಾರ ಬಡಾವಣೆಯಲ್ಲಿ ಭಾನುವಾರ ಸಂಭ್ರಮ, ಸಡಗರದಿಂದ ಶ್ರೀಭಗೀರಥ ಮಹರ್ಷಿ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷ ಕಿನಕಹಳ್ಳಿ ಸಿದ್ದರಾಜು ಮಾತನಾಡಿ, ರಾಜ್ಯದಲ್ಲಿ 40 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಉಪ್ಪಾರ ಸಮುದಾಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರು ಇರುವುದರಿಂದ ಜನಾಂಗವು ಹಿಂದುಳಿಯಲು ಪ್ರಮುಖ ಕಾರಣವಾಗಿದೆ. ಇದರಿಂದಾಗಿ ಸರ್ಕಾರದಿಂದ ಜನಾಂಗಕ್ಕೆ ದೊರೆಯುವ ವಿಶೇಷ ಸೌಲಭ್ಯಗಳ ಬಗ್ಗೆ ಮಾಹಿತಿಯ ಅರಿವಿಲ್ಲದೇ ಸೌಲಭ್ಯವಂಚಿತರಾಗುತ್ತಿದ್ದಾರೆ. ಆದ್ದರಿಂದ ಗ್ರಾಮದ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀಭಗೀರಥ ಮಹರ್ಷಿಯವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಪಂ ಸದಸ್ಯರಾದ ಎನ್.ನಾಗರಾಜು, ರಾಚಶೆಟ್ಟಿ, ಮುಖಂಡರಾದ ರಂಗಶೆಟ್ಟಿ ಶ್ರೀನಿವಾಸ್, ಸಿದ್ದರಾಜು, ರಾಜೇಶ್, ರಘು, ಆನಂದ್, ಮಹದೇವಶೆಟ್ಟಿ, ಶ್ರೀನಿವಾಸ, ಮರಿಶೆಟ್ಟಿ, ಸಿ.ಸಿದ್ದರಾಜು, ರೇವಣ್ಣ, ರಾಚಪ್ಪಾಜಿ ಸೇರಿದಂತೆ ಹಾಗೂ ಇತರರು ಹಾಜರಿದ್ದರು.



ಮತಾಂತರ ಆರೋಪ

ಕೇರಳ ಮೂಲದ ಕ್ರೈಸ್ತ ದಂಪತಿ ವಿರುದ್ಧ ಕೇಸ್

ಮಡಿಕೇರಿ,ಮೇ 18– ಕುಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಂಚಳ್ಳಿ ಗ್ರಾಮದ ಮೂರು ಎಕರೆ ಪೈಸಾರಿ ಕಾಲೋನಿಯಲ್ಲಿ ಮತಾಂತರಕ್ಕೆ ಯತ್ನಿಸುತ್ತಿದ್ದ ಆರೋಪದಡಿ ಕೇರಳ ಮೂಲದ ಕ್ರೈಸ್ತ ದಂಪತಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮೂರು ಎಕರೆ ಪೈಸಾರಿಯ ಪಣಿ ಎರವರ ಮುತ್ತ ಎಂಬವರ ಮನೆಗೆ ಬಂದ ಕೇರಳದ ಮಾನಂದವಾಡಿಯ ಕುರಿಯಚ್ಚನ್ ಹಾಗೂ ಆತನ ಪತ್ನಿ ಬಲವಂತದ ಮತಾಂತರಕ್ಕೆ ಯತ್ನಿಸಿರುವುದಲ್ಲದೆ ಆಮಿಷವೊಡ್ಡಿರುವುದಾಗಿ ಆರೋಪಿಸಲಾಗಿದೆ. ಕುಟ್ಟ ಪೊಲೀಸ್ ಠಾಣೆಗೆ ದೂರು ನೀಡಿರುವ ಮುತ್ತ ತಮ್ಮನ್ನು ಮತಾಂತರಗೊಳಿಸಲು ದಂಪತಿ ಪ್ರಯತ್ನಿಸಿದರು ಎಂದು ತಿಳಿಸಿದ್ದಾರೆ.



ಕ್ರೈಸ್ತ ದಂಪತಿ ಮತಾಂತರ ಕಾರ್ಯದಲ್ಲಿ ತೊಡಗಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆ ಸ್ಥಳಕ್ಕೆ ಬಂದ ಬಿಜೆಪಿ ಹಾಗೂ ಹಿಂದೂ ಸಂಘಟನೆಗಳ ಪ್ರಮುಖರು ನೂತನ ಮತಾಂತರ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು.

ಬಾಡಗ ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖ್ ನವೀನ್ ಪೆಮ್ಮಣಮಾಡ, ಬೂತ್ ಅಧ್ಯಕ್ಷ ಜಾಯ್ ಅಯ್ಯಪ್ಪ, ಕುಟ್ಟ ಗ್ರಾ.ಪಂ ಸದಸ್ಯೆ ಹಾಗೂ ಮಾತೃ ಮಂಡಳಿ ತಾಲೂಕು ಅಧ್ಯಕ್ಷೆ ತೀತಿರ ತೀರ್ಥ ಮಂಜುನಾಥ್, ಬಜರಂಗದಳ ತಾಲೂಕು ಸಂಚಾಲಕ ಸಜು ಗಣಪತಿ, ಧರ್ಮ ಜಾಗರಣ ಸ್ವಯಂ ಸೇವಕರು ಹಾಗೂ ಹಿಂದೂ ಸಂಘಟನೆಗಳ ಕಾರ್ಯಕರ್ತರು ಹಾಜರಿದ್ದರು.

ವಿಹೆಚ್‌ಪಿ ಖಂಡನೆ: ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ ಅವರು ಮತಾಂತರ ಪ್ರಕರಣವನ್ನು ತೀವ್ರವಾಗಿ ಖಂಡಿಸಿದ್ದಾರೆ. ಕೊಡಗಿನ ದುರ್ಬಲ ವರ್ಗವನ್ನು ಗುರಿಯಾಗಿಸಿಕೊಂಡು ಆಮಿಷವೊಡ್ಡುವ ಮೂಲಕ ಬಲವಂತದ ಮತಾಂತರ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಜಾರಿಗೆ ಬಂದಿರುವ ಮತಾಂತರ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದು ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ್ದಾರೆ.

ಕೊಡಗಿನ ವಿವಿಧೆಡೆ ಮುಂದುವರೆದ ಮಳೆ

ಮಡಿಕೇರಿ,ಮೇ 18– ವಾಯುಭಾರ ಕುಸಿತದ ಪರಿಣಾಮ ಕೊಡಗು ಜಿಲ್ಲೆಯ ಮೇಲೂ ಬೀರಿದ್ದು, ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಂಗಳವಾರ ರಾತ್ರಿಯಿಂದ ಬುಧವಾರ ಸಂಜೆವರೆಗೆ ಉತ್ತಮ ಮಳೆಯಾಗಿದೆ. ಬುಧವಾರ ಮಧ್ಯಾಹ್ನದ ಬಳಿಕ ಮಳೆಯಲ್ಲಿ ಕೊಂಚ ಬಿಡುವು ಕಂಡು ಬಂದಿತ್ತಾದರೂ ಸಂಜೆ ವೇಳೆಗೆ ಮತ್ತೆ ಮಳೆ ಮುಂದುವರೆದಿದೆ. ಮಡಿಕೇರಿ, ಭಾಗಮಂಡಲ, ನಾಪೋಕ್ಲು, ಸಂಪಾಜೆ, ಕಾಲೂರು, ಗಾಳಿಬೀಡು, ಸುಂಟಿಕೊಪ್ಪ, ಕುಶಾಲನಗರ ಹಾಗೂ ದಕ್ಷಿಣ ಕೊಡಗಿನ ವಿವಿಧ ಗ್ರಾಮ ವ್ಯಾಪ್ತಿಯಲ್ಲೂ ಉತ್ತಮ ಮಳೆ ಸುರಿದಿದೆ.

ವಿರಾಜಪೇಟೆ–ಗೋಣಿಕೊಪ್ಪಲು ಮುಖ್ಯ ರಸ್ತೆಯ ಹಾತೂರು ಸೇತುವೆ ಬಳಿ ಸಂಜೆ ವೇಳೆ ಮರ ಮುರಿದು ಬಿದ್ದು ಕೆಲಕಾಲ ರಸ್ತೆ ಸಂಚಾರ ವ್ಯತ್ಯಯವಾಗಿತ್ತು. ಅರಣ್ಯ ಇಲಾಖೆ, ಪೊಲೀಸ್ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಕಾರ್ಯಾಚರಣೆ ನಡೆಸಿ ಮರವನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟ ಬಗ್ಗೆಯೂ ವರದಿಯಾಗಿದೆ.



ಮಳೆಯಿಂದಾಗಿ ಕೆಲವು ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಕಂಡು ಬಂದಿದೆ. ಸಾರ್ವಜನಿಕರಿಂದ ಈ ಕುರಿತು ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಚೆಸ್ಕಾಂ ಇಲಾಖೆ ವಿದ್ಯುತ್ ವ್ಯವಸ್ಥೆ ಸುಗಮಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ಜಿಲ್ಲೆಯಲ್ಲಿ ದಟ್ಟ ಮಂಜು ಕವಿದ ವಾತಾವರಣ ಮನೆ ಮಾಡಿದ್ದು, ಮೈಕೊರೆಯುವ ಚಳಿಯೂ ಕಂಡು ಬಂದಿದೆ. ಮಂಜು ಕವಿದ ವಾತಾವರಣದಿಂದ ರಸ್ತೆ ಅಪಘಾತಗಳು ನಡೆದಿರುವ ಬಗ್ಗೆ ವರದಿಯಾಗಿದೆ. ಈಗಾಗಲೇ ಮಾನ್ಸೂನ್ ಆರಂಭವಾದ ರೀತಿಯಲ್ಲಿ ಭಾಸವಾಗುತ್ತಿದ್ದು, ಮಳೆಗಾಲದ ತಯಾರಿಗೆ ಜನರು ಮುಂದಾಗುತ್ತಿದ್ದಾರೆ. ಕೊಡೆ, ರೇನ್ ಕೋಟ್, ಸ್ವೆಟರ್‌ಗಳ ಖರೀದಿಯೂ ಭರ್ಜರಿಯಾಗಿ ನಡೆಯುತ್ತಿದೆ.

ಚಿಪ್ಪುಹಂದಿ ಮಾರುತ್ತಿದ್ದ ನಾಲ್ವರ ಬಂಧನ

ಮಡಿಕೇರಿ,ಮೇ 18– ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಅಳಿವಿನಂಚಿನಲ್ಲಿರುವ ಚಿಪ್ಪುಹಂದಿಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ರಾಜೇಶ್, ಕರಿಯ, ಸೂರ್ಯ, ಕೃಷ್ಣ ಬಂಧಿತ ಆರೋಪಿಗಳಾಗಿದ್ದಾರೆ. ಹೆದ್ದಾರಿ ಬದಿಯಲ್ಲಿ ಅಕ್ರಮವಾಗಿ ಚಿಪ್ಪುಹಂದಿಗಳನ್ನು ಮಾರಾಟ ಮಾಡಲು ಆರೋಪಿಗಳು ಯತ್ನಿಸಿದ್ದ ಖಚಿತ ಮಾಹಿತಿ ಆಧರಿಸಿ ಸಿಐಡಿ ಪೊಲೀಸ್ ಅರಣ್ಯ ಘಟಕ ಸಿಬ್ಬಂದಿಗಳು ದಾಳಿ ನಡೆಸಿ 2 ಚಿಪ್ಪುಹಂದಿಗಳ ಸಹಿತ 4 ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್ ಚಂದ್ರ ನಿರ್ದೇಶನದಲ್ಲಿ ಮಡಿಕೇರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸಿ.ಯು.ಸವಿ, ಸಿಬ್ಬಂದಿಗಳಾದ ಶೇಖರ್, ರಾಜೇಶ್, ಯೋಗೇಶ್, ಮೋಹನ್, ಸ್ವಾಮಿ, ಮಂಜುನಾಥ್ ಪಾಲ್ಗೊಂಡಿದ್ದರು.




ಕಾರುಗಳ ಮುಖಾಮುಖಿ ಡಿಕ್ಕಿ: ಓರ್ವನ ಸಾವು

ಮಡಿಕೇರಿ,ಮೇ 18– ಎರಡು ಕಾರುಗಳ ನಡುವೆ ಡಿಕ್ಕಿ ಸಂಭವಿಸಿ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಕೊಡಗರಹಳ್ಳಿಯಲ್ಲಿ ನಡೆದಿದೆ. ಸುಂಟಿಕೊಪ್ಪದ ನಿವಾಸಿ ಮುಸ್ತಫಾ(47) ಮೃತ ದುರ್ದೈವಿಯಾಗಿದ್ದಾರೆ.

ಇಂದು ಬೆಳಗ್ಗೆ ತಮ್ಮ ಇನೋವಾ ವಾಹನದಲ್ಲಿ ಪುತ್ರಿಯನ್ನು ದ್ವಿತೀಯ ಪಿಯುಸಿ ಪರೀಕ್ಷೆಗೆ ಕುಶಾಲನಗರ ಈ ಕಾಲೇಜಿಗೆ ಬಿಟ್ಟು ಸುಂಟಿಕೊಪ್ಪಕ್ಕೆ ಮರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಮಡಿಕೇರಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಪ್ರವಾಸಿಗರಿದ್ದ ಕಾರು ಹಾಗೂ ಇನೊವಾ ನಡುವೆ ಡಿಕ್ಕಿಯಾಗಿದೆ. ಪ್ರವಾಸಿಗರು ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದಾರೆ. ಅಪಘಾತದ ರಭಸಕ್ಕೆ ಎರಡೂ ವಾಹನಗಳು ಸಂಪೂರ್ಣ ನಜ್ಜುಗುಜ್ಜಾಗಿವೆ. ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.



ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಮಂಗಳವಾರ	2848.35 ಅಡಿ
ಒಳ ಹರಿವು	760 ಕ್ಯೂಸೆಕ್
ಹೊರ ಹರಿವು	40 ಕ್ಯೂಸೆಕ್

ಮೈಸೂರು ಮಿತ್ರ ಗುರುವಾರ 19 ಮೇ 2022

ಇಂದು SSLC ಫಲಿತಾಂಶ

ಮೈಸೂರು, ಮೇ 18(ಆರ್‌ಕೆ)– 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ನಾಳೆ (ಮೇ 19) ಪ್ರಕಟಗೊಳ್ಳಲಿದೆ. ಗುರುವಾರ ಬೆಳಗ್ಗೆ 11 ಗಂಟೆಗೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಬಗ್ಗೆ ಮಾಹಿತಿ ನೀಡಲಿದ್ದು, ಮಧ್ಯಾಹ್ನ 12.30 ಗಂಟೆಗೆ ಇಲಾಖೆ ವೆಬ್‌ಸೈಟ್‌ನಲ್ಲೂ ಪ್ರಕಟಿಸಲಾಗುವುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದ್ದಾರೆ. ಅಲ್ಲದೇ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳುವಾಗ ಮೊಬೈಲ್ ನಂಬರ್ ನೀಡಿದ್ದರೆ, ಅಂತಹವರಿಗೆ ಫಲಿತಾಂಶದ ಮಾಹಿತಿ ಸಂದೇಶದ ಮೂಲಕ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ. ಫಲಿತಾಂಶವನ್ನು ಇಲಾಖಾ ವೆಬ್‌ಸೈಟ್: karresults.nic.in ಮತ್ತು sslc.karnnataka.gov.in ನಲ್ಲಿ ಮಧ್ಯಾಹ್ನ 12.30 ಗಂಟೆ ನಂತರ ಪಡೆಯಬಹುದೆಂದು ತಿಳಿಸಿದರು.

ಸಹಾಯವಾಣಿ: ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಲಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಒತ್ತಡ ನಿವಾರಿಸುವ ಸಲುವಾಗಿ ರಾಜ್ಯ ಆರೋಗ್ಯ ಇಲಾಖೆ ವತಿಯಿಂದ ಸಹಾಯವಾಣಿ ಆರಂಭಿಸಲಾಗಿದೆ. ಗೊಂದಲ ಮತ್ತು ಒತ್ತಡದಲ್ಲಿರುವ ವಿದ್ಯಾರ್ಥಿಗಳು ಸಹಾಯವಾಣಿ (080–64110007) ಮೂಲಕ ಸಂಪರ್ಕಿಸಿ, ಸಲಹೆ ಪಡೆಯಬಹುದು.

ಶೀನಾ ಬೋರಾ ಹತ್ಯೆ ಪ್ರಕರಣ

ಇಂದ್ರಾಣಿ ಮುಖರ್ಜಿಗೆ ಜಾಮೀನು

ನವದೆಹಲಿ, ಮೇ 18– ಶೀನಾ ಬೋರಾ ಹತ್ಯೆ ಪ್ರಕರಣದಲ್ಲಿ ಆರೋಪಿ, ಮಾಧ್ಯಮ ಸಂಸ್ಥೆಯೊಂದರ ಮಾಜಿ ಮುಖ್ಯಸ್ಥೆ ಇಂದ್ರಾಣಿ ಮುಖರ್ಜಿಗೆ ಸುಪ್ರೀಂಕೋರ್ಟ್ ಮೇ 18ರಂದು ಜಾಮೀನು ಮಂಜೂರು ಮಾಡಿದೆ.



ಹತ್ಯೆ ಪ್ರಕರಣ ಸಾಂದರ್ಭಿಕ ಸಾಕ್ಷ್ಯಗಳ ಆಧಾರಿತವಾಗಿದ್ದು, ಇಂದ್ರಾಣಿ 6 ವರ್ಷಗಳಿಂದ ವಶದಲ್ಲಿದ್ದಾರೆ. ಜಾಮೀನು ಆಧಾರದಲ್ಲಿ ಇಂದ್ರಾಣಿ ಅವರ ಬಿಡುಗಡೆ ವಿಚಾರಣಾಧೀನ ನ್ಯಾಯಾಲಯದ ಅನುಮೋದನೆಗೆ ಒಳಪಟ್ಟಿರುತ್ತದೆ. ಪೀಟರ್ ಮುಖರ್ಜಿ ಅವರಿಗೆ ವಿಧಿಸಲಾಗಿದ್ದ ಷರತ್ತುಗಳೇ ಇಂದ್ರಾಣಿ ಮುಖರ್ಜಿಗೂ ಅನ್ವಯಿಸುತ್ತದೆ ಎಂದು ಕೋರ್ಟ್ ಹೇಳಿದೆ. ಇಂದ್ರಾಣಿ ಮುಖರ್ಜಿ ವಿರುದ್ಧ 2012ರ ಏ.24ರಂದು ತನ್ನ ಮಗಳು ಶೀನಾ ಬೋರಾಳನ್ನು ಹತ್ಯೆ ಮಾಡಿರುವ ಆರೋಪವಿದೆ. ಆಗಸ್ಟ್ 25, 2015ರಂದು ಖರ್ ಪೊಲೀಸರು ಬಂಧಿಸಿದ್ದರು.



ಮೈಸೂರಿನ ವಿವಿಪುರಂನಲ್ಲಿರುವ ಹೆರಿಗೆ ಆಸ್ಪತ್ರೆಯಲ್ಲಿ ಮುಡಾ ಸದಸ್ಯ ಕೆ.ಮಾದೇಶ್ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿದರು. ಈ ವೇಳೆ ಡಾ.ಕೆಂಪೇಗೌಡ, ಆಸ್ಪತ್ರೆ ಸಿಬ್ಬಂದಿ ಇದ್ದರು.



ಮೈಸೂರು ವಾರ್ಡ್ ನಂ.46ರಲ್ಲಿ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಲಕ್ಷ್ಮಿ ಕಿರಣ್ ಮಾದೇಗೌಡ, ಪಾಲಿಕೆ ಸದಸ್ಯ ಬಸವಣ್ಣ, ಬಸವಲಿಂಗಪ್ಪ, ಹೇಮಾ ಗಂಗಪ್ಪ ಇನ್ನಿತರರು ಮತಯಾಚಿಸಿದರು.



ಮೆಡ್ಡೇಗೌಡ ನಿಧನ

ಕೆ.ಆರ್.ನಗರ, ಮೇ 18–ತಾಲೂಕಿನ ದಿಡ್ಡಹಳ್ಳಿ ಗ್ರಾಮದ ನಿವಾಸಿ ಮೆಡ್ಡೇಗೌಡ (90) ಭಾನುವಾರ ನಿಧನರಾದರು.

ಮೃತರು ಪತ್ನಿ ಗಿರಿಜಮ್ಮ, ಪುತ್ರ ಸಿಐಎಸ್‌ಎಫ್ ಯೋಧ ಡಿ.ಎಂ.ಮಲ್ಲೇಶ್ ಸೇರಿದಂತೆ ಐವರು ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ದಿಡ್ಡಹಳ್ಳಿ ಗ್ರಾಮದಲ್ಲಿ ಸೋಮವಾರ ನೆರವೇರಿತು. ಜಿಪಂ ಮಾಜಿ ಸದಸ್ಯ ಡಿ.ರವಿಶಂಕರ್, ಸಿ.ಜೆ.ದ್ವಾರಕೀಶ್, ಸಿ.ಬಿ.ಲೋಕೇಶ್, ಡಿ.ಕೆ.ಮಹೇಂದ್ರ ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

'ಅಡ್ಡ' ಭೀತಿ

ಅಸಮಾಧಾನಗೊಂಡಿದ್ದಾರೆ. ಒಂದು ವೇಳೆ ಚುನಾವಣೆ ನಡೆದರೆ, ಇಂತಹವರು ಅಡ್ಡ ಮತದಾನ ಮಾಡಬಹುದೆಂಬ ಭಯ ಕಾಡುತ್ತಿದೆ. ಆಡಳಿತಾರೂಢ ಬಿಜೆಪಿಗೂ ಇದೇ ಭಯ ಕಾಡಿದೆ. ಇದನ್ನು ಮನಗಂಡ ಬಿಜೆಪಿ ವರಿಷ್ಠರು ತಮಗಿಲ್ಲದ್ದನ್ನು ಆಸೆಪಡದೇ ಅವಿರೋಧ ಆಯ್ಕೆ ಮಾಡಿಕೊಳ್ಳಲು ಕಸರತ್ತು ನಡೆಸಿ ಎಂದು ಸಿಎಂ ಬೊಮ್ಮಾಯಿ ಅವರಿಗೆ ಸಲಹೆ ಮಾಡಿದ್ದಾರೆ. ರಮೇಶ್ ಜಾರಕಿಹೊಳಿ ಸ್ನೇಹಿತರು ಮತ್ತು ಮಂತ್ರಿ ಸ್ಥಾನ ಸಿಗದೇ ಅಸಮಾಧಾನದಲ್ಲಿರುವವರು, ಚುನಾವಣೆ ನಡೆದರೆ, ಅಡ್ಡ ಮತದಾನ ಮಾಡುತ್ತಾರೆ ಎಂಬ ಭಯ ಕಾಡಿದೆ. ಇದನ್ನು ತಪ್ಪಿಸಲೆಂದೇ ರಾಷ್ಟ್ರೀಯ ಕಾರ್ಯದರ್ಶಿ ಸಂತೋಷ್, ಕಳೆದ ಶನಿವಾರ ರಾತ್ರಿ ಕೇಶವ ಶಿಲ್ಪದಲ್ಲಿ ರಾಜ್ಯ ಮುಖಂಡರ ಸಭೆ ನಡೆಸಿ, ಅವಿರೋಧ ಆಯ್ಕೆಗೆ ಕಸರತ್ತು ನಡೆಸುವಂತೆ ಸೂಚಿಸಿದ್ದಾರೆ. ಇನ್ನು ಜೆಡಿಎಸ್‌ನಲ್ಲಿ ಆ ಪಕ್ಷದ ಏಳು ಶಾಸಕರು ಬಹಿರಂಗವಾಗಿಯೇ ತಮ್ಮ ನಾಯಕರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇನ್ನು ಕಾಂಗ್ರೆಸ್‌ನಲ್ಲಿ ಕೆಲವು ಶಾಸಕರು ಬಿಜೆಪಿಯ ಬಾಗಿಲು ತಟ್ಟಿದ್ದಾರೆ. ಅಂತಹವರು ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಗಳಿಗೆ ಕೈಕೊಡಬಹುದೆಂಬ ಭಯ ಅವರನ್ನು ಕಾಡಿದೆ.

ಅಧಿಕಾರಿಗಳ ಪರಿಶೀಲನೆ

ಮತ್ತು ಪಾಲಿಕೆಯು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಪ್ರತಾಪ್ ಸಿಂಹ ತಿಳಿಸಿದರು. ಅದೇ ರೀತಿ ಮಳೆ ನೀರು ನುಗ್ಗಿ ತೊಂದರೆಯಾಗಿರುವ ಆನಂದನಗರ, ಸಿಎಫ್‌ಟಿಆರ್‌ಐ ಲೇಔಟ್, ಶಾರದಾದೇವಿನಗರ, ವಿಜಯನಗರ 4ನೇ ಹಂತ, ಲಿಂಗಾಂಬುದಿ ಕೆರೆ ಹಾಗೂ ಸುತ್ತಲಿನ ಪ್ರದೇಶಗಳಿಗೂ ಭೇಟಿ ನೀಡಿ, ಸಮಸ್ಯೆಗೆ ನಿಖರ ಕಾರಣ ಏನೆಂಬುದನ್ನು ಸರ್ವೆ ಮೂಲಕ ಪತ್ತೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ಸೂಚನೆ ನೀಡಿದರು. ಮುಡಾದಿಂದ ಮಳೆ ಹಾನಿ ತಡೆಗಟ್ಟಲು ತುರ್ತಾಗಿ ಕೈಗೊಳ್ಳಬೇಕಾದ ಕಾಮಗಾರಿಗಳು, ಈಗಾಗಲೇ ಹಾನಿಯಾಗಿರುವ ರಸ್ತೆ, ಚರಂಡಿ, ಸೇತುವೆಗಳ ದುರಸ್ತಿ ಕಾರ್ಯಗಳ ಬಗ್ಗೆ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ವಿವರಿಸಿದರಲ್ಲದೇ, ಆ ಸಂಬಂಧ ಸಭೆ ನಡೆಸಿ ಚರ್ಚಿಸಬೇಕೆಂದು ತಿಳಿಸಿದರು.

ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಎಕ್ಸಿಕ್ಯುಟಿವ್ ಇಂಜಿನಿಯರ್ ಮೋಹನ್, ಸುನಿಲ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ ಸೇರಿದಂತೆ ಹಲವು ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು. ಲಿಂಗಾಂಬುದಿ ಕೆರೆ ಸಂರಕ್ಷಣೆ ಬಗ್ಗೆ ಸಾಮಾಜಿಕ ಅರಣ್ಯ ವಿಭಾಗದ ಅಧಿಕಾರಿಗಳನ್ನು ಕರೆಸಿಕೊಂಡು ಮಾಹಿತಿ ಪಡೆದ ಸಂಸದರು, ಹೆಚ್ಚುವರಿ ಮಳೆ ನೀರು ಹರಿದುಹೋಗಲು ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಹಾಗೂ ಕೆರೆ ಸುರಕ್ಷತೆಗೆ ಧಕ್ಕೆ ಬಾರದಂತೆ ಕಾಮಗಾರಿ ನಡೆಸುವ ಬಗ್ಗೆಯೂ ಚರ್ಚೆ ನಡೆಸಿದರು.

ಮೈಸೂರಲ್ಲಿರುವ ಶಂಕೆ

ಬ್ಯಾಂಕ್ ಖಾತೆಯಿಂದ ಫೋನ್ ಪೇ ಮೂಲಕ ವ್ಯಕ್ತಿಯೋರ್ವನ ಖಾತೆಗೆ 2.20 ಲಕ್ಷ ರೂ. ವರ್ಗಾವಣೆಯಾಗಿರುವುದು ಕಂಡು ಬಂದಿದೆ. ಆ ವ್ಯಕ್ತಿಯ ಜಾಡನ್ನು ಹಿಡಿದು ತನಿಖೆ ನಡೆಸಿದಾಗ ಆತ ಮೂಲತಃ ಹಾಸನ ಜಿಲ್ಲೆಯವನಾದ ಮುಜಾಮಿಲ್ ಶಾನವಾಜ್ ಖಾನ್ ಎಂದು ತಿಳಿದು ಬಂದಿದ್ದು, ಮಹಾರಾಷ್ಟ್ರದ ಹೋಂ ಅಪ್ಲೈಯನ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಆತ ಈ ಹಿಂದೆ ಇಬ್ಬರು ಮಹಿಳೆಯರನ್ನು ಇದೇ ರೀತಿ ತನ್ನೊಂದಿಗೆ ಕರೆದುಕೊಂಡು ಹೋಗಿದ್ದು, ಆ ಮಹಿಳೆಯರ ಖಾತೆಗಳಿಂದಲೂ ಈತನ ಖಾತೆಗೆ ಹಣ ವರ್ಗಾವಣೆಯಾಗಿರುವುದು ಪತ್ತೆಯಾಗಿದೆಯಂತೆ.

ಈ ಹಿನ್ನೆಲೆಯಲ್ಲಿ ಮಹಿಳಾ ಪೇದೆ ಈತನಿಂದ ಅಪಹರಣವಾಗಿದ್ದಾಳೆ ಎಂದು ಪರಿಗಣಿಸಿರುವ ಮಹಾರಾಷ್ಟ್ರ ಪೊಲೀಸರು ಆಕೆಯ ಮೊಬೈಲ್ ಟವರ್ ಲೊಕೇಷನ್ ಪತ್ತೆಯಲ್ಲಿ ತೊಡಗಿದಾಗ ಉತ್ತರ ಪ್ರದೇಶ, ಬೆಂಗಳೂರು ಸೇರಿದಂತೆ ಹಲವೆಡೆ ಲೊಕೇಷನ್ ದೊರೆತಿದೆ. ಮೇ 16ರಂದು ಮಧ್ಯಾಹ್ನ 12.12ರ ಸಮಯದಲ್ಲಿ ಮೈಸೂರಿನ ಹಳ್ಳದಕೇರಿಯಲ್ಲಿರುವ ಮನ್ನಾರ್ಸ್ ಕಾಂಪ್ಲೆಕ್ಸ್ ಬಿಲ್ಡಿಂಗ್‌ನಲ್ಲಿರುವ ಟವರ್‌ನಿಂದ ಮಹಿಳಾ ಪೇದೆಯ ಮೊಬೈಲ್ ಕಾರ್ಯ ನಿರ್ವಹಿಸಿರುವುದು ಪತ್ತೆಯಾಗಿದೆ.

ಈ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸಿದ್ದ ಮಹಾರಾಷ್ಟ್ರ ಪೊಲೀಸರ ತಂಡ ಲಷ್ಕರ್ ಠಾಣೆ ಪೊಲೀಸರ ಸಹಕಾರದೊಂದಿಗೆ ಮನ್ನಾರ್ಸ್ ಕಾಂಪ್ಲೆಕ್ಸ್ ಬಿಲ್ಡಿಂಗ್‌ಗೆ ತೆರಳಿ ಪರಿಶೀಲನೆ ನಡೆಸಿತು. ಈ ಟವರ್‌ನಿಂದ ಸುಮಾರು 2 ಕಿ.ಮೀ. ಸುತ್ತಳತೆ ಪ್ರದೇಶದಲ್ಲಿ ಮೊಬೈಲ್‌ಗಳು ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಅರಿತ ಮಹಾರಾಷ್ಟ್ರ ಪೊಲೀಸರ ತಂಡ ಕಳೆದ ಎರಡು ದಿನಗಳಿಂದ ಮಹಿಳಾ ಪೇದೆ ಮತ್ತು ಶಾನವಾಜ್ ಖಾನ್ ಪತ್ತೆಗಾಗಿ ಹುಡುಕಾಟ ನಡೆಸುತ್ತಿದೆ. ಮೇ 16ರಂದು ಆಕೆಯ ಮೊಬೈಲ್ ಕಾರ್ಯ ನಿರ್ವಹಿಸಿದ ನಂತರ ಮತ್ತೆ ಅದರ ಜಾಡು ದೊರೆಯಲಿಲ್ಲ ಎಂದು ಹೇಳಲಾಗಿದೆ.

ಇಂದು ಮಧ್ಯಾಹ್ನ ಮೈಸೂರಿನ ಪತ್ರಕರ್ತರ ಭವನಕ್ಕೆ ಆಗಮಿಸಿದ್ದ ಮಹಾರಾಷ್ಟ್ರ ಪೊಲೀಸರ ತಂಡ ನಿಗೂಢವಾಗಿ ನಾಪತ್ತೆಯಾಗಿರುವ ಮಹಿಳಾ ಪೇದೆ ಮತ್ತು ಆಕೆಯನ್ನು ಅಪಹರಿಸಿದ್ದಾನೆಂದು ಶಂಕಿಸಲಾಗಿರುವ ಶಾನವಾಜ್ ಖಾನ್ ಫೋಟೋಗಳನ್ನು ಪತ್ರಕರ್ತರಿಗೆ ನೀಡಿದೆ. ಇವರಿಬ್ಬರ ಬಗ್ಗೆ ಮಾಹಿತಿ ದೊರೆತವರು ಮೊಬೈಲ್ ಸಂಖ್ಯೆ 9321033018 ಅಥವಾ 9822219011 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ಮೈಸೂರಲ್ಲಿ ಅಂತಾರಾಷ್ಟ್ರೀಯ ಸಂಗ್ರಹಾಲಯ ದಿನ ಆಚರಣೆ

ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಸಂಗ್ರಹಾಲಯ ದರ್ಶನ ಮಾಡಿಸಿದ ಪುರಾತತ್ವ ಇಲಾಖೆ ಅಧಿಕಾರಿಗಳು

ಮೈಸೂರು, ಮೇ 18 (ಆರ್‌ಕೆ)– ಪರಂಪರೆ, ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆ ವತಿಯಿಂದ ಮೈಸೂರಲ್ಲಿ ಸಂಗ್ರಹಾಲಯ ದಿನವನ್ನು ಇಂದು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಪದವಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮೈಸೂರಿನಲ್ಲಿರುವ ಪ್ರಾಚೀನ ಸಂಗ್ರಹಾಲಯಗಳ ದರ್ಶನ ಮಾಡಿಸಿ ಅಪರೂಪದ ಸಂಗ್ರಹಾಲಯಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಜಾಗೃತಿ ಮೂಡಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಹಾಗೂ ಮಹಾಜನ ಕಾಲೇಜಿನ 70 ಪದವಿ ವಿದ್ಯಾರ್ಥಿಗಳು ಹಾಗೂ 30 ಮಂದಿ ಸಾರ್ವಜನಿಕರನ್ನು ಎರಡು ಬಸ್ಸುಗಳಲ್ಲಿ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿರುವ ಪರಂಪರೆ, ಪುರಾತತ್ವ ಮತ್ತು ಸಂಗ್ರಹಾಲಯಗಳ ಇಲಾಖೆ ಕಚೇರಿಯಿಂದ ಕರೆದೊಯ್ದು ಸಿದ್ಧಾರ್ಥನಗರದ ಪ್ರಾಕೃತಿಕ ಇತಿಹಾಸ ಪ್ರಾದೇಶಿಕ ಸಂಗ್ರಹಾಲಯ, ಕೆಆರ್‌ಎಸ್ ರಸ್ತೆಯ ರೈಲ್ವೆ ಮ್ಯೂಸಿಯಂ ಹಾಗೂ ಮಾನಸಗಂಗೋತ್ರಿಯ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್‌ನಲ್ಲಿರುವ ಜಾನಪದ ಸಂಗ್ರಹಾಲಯಗಳಿಗೆ ಕರೆದೊಯ್ದು ಅವುಗಳ ಇತಿಹಾಸ, ಪರಂಪರೆ ಹಿನ್ನೆಲೆಯನ್ನು ವಿವರಿಸಿ, ಸಂಪೂರ್ಣ ಮಾಹಿತಿ ನೀಡಲಾಯಿತು.



ಸಿದ್ಧಾರ್ಥನಗರದ ರೀಜನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ ವೀಕ್ಷಿಸಿದ ವಿದ್ಯಾರ್ಥಿಗಳು, ಸಾರ್ವಜನಿಕರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ.ಎಲ್.ಎನ್.ಸ್ವಾಮಿ ಅವರು ವಿದ್ಯಾರ್ಥಿಗಳು ಮತ್ತು ನಾಗರಿಕರಿಗೆ ಇತಿಹಾಸವನ್ನು ವಿವರಿಸಿ, ಅರ್ಥೈಸಿದರು. ನಂತರ ಮರಳಿ ಪರಂಪರೆ, ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆ ಕಚೇರಿ ಬಳಿ ಮಧ್ಯಾಹ್ನದ ಊಟ ಮಾಡಿಸಿದ ನಂತರ ಮ್ಯೂಸಿಯಂಗಳ ಭೇಟಿ ಕಾರ್ಯಕ್ರಮವನ್ನು ಅಂತ್ಯಗೊಳಿಸಲಾಯಿತು.

ಇಲಾಖೆ ಉಪನಿರ್ದೇಶಕ ಡಾ.ಸಿ.ಎನ್. ಮಂಜುಳಾ, ಕ್ಯೂರೇಟರ್ ಎಂ. ಸುನಿಲ್‌ಕುಮಾರ್, ಪುರಾತತ್ವ ಇಲಾಖೆ ಪುರಾತತ್ವ ಸಹಾಯಕ ಎನ್.ಎಲ್.ಗೌಡ ಸೇರಿದಂತೆ ಸಿಬ್ಬಂದಿಗಳು ಈ ಸಂದರ್ಭ ಸಂಗ್ರಹಾಲಯ ಪ್ರವಾಸದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಪರಂಪರೆ, ಪುರಾತತ್ವ ಸಂಗ್ರಹಾಲಯಗಳ ಇಲಾಖೆ ಪ್ರಭಾರ ಆಯುಕ್ತರು ಹಾಗೂ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಬಿ.ಆರ್.ಪೂರ್ಣಿಮಾ, ವಿದ್ಯಾರ್ಥಿಗಳು ಹಾಗು ನಾಗರಿಕರಿಗೆ ಪ್ರಾಚೀನ ಇತಿಹಾಸ ಹೊಂದಿರುವ ಸಂಗ್ರಹಾಲಯಗಳಿಗೆ ಕರೆದೊಯ್ದು ಅಪರೂಪದ ಮ್ಯೂಸಿಯಂಗಳ ದರ್ಶನ ಮಾಡಿಸಿ, ಹಿನ್ನೆಲೆ, ಇತಿಹಾಸದ ಬಗ್ಗೆ ಮಾಹಿತಿ ನೀಡುವ ಮೂಲಕ ಅರ್ಥಪೂರ್ಣವಾಗಿ ಅಂತಾರಾಷ್ಟ್ರೀಯ ಮ್ಯೂಸಿಯಂ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು ಎಂದು ತಿಳಿಸಿದರು.

ಯುಜಿಡಿ ಸಮಸ್ಯೆ ಮುಕ್ತ ಕೃಷ್ಣರಾಜ ಕ್ಷೇತ್ರ

ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಸ್ಥಳೀಯರಿಂದ ಚಾಲನೆ

ಮೈಸೂರು, ಮೇ 18(ಆರ್‌ಕೆಬಿ)– ಮೈಸೂರಿನ ಕೃಷ್ಣರಾಜ ಕ್ಷೇತ್ರವನ್ನು ಯುಜಿಡಿ ಸಮಸ್ಯೆಯಿಂದ ಮುಕ್ತಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

ಕೃಷ್ಣರಾಜ ಕ್ಷೇತ್ರದ ಹಲವೆಡೆ ಯುಜಿಡಿ ಸಮಸ್ಯೆಗಳಿದ್ದು, ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಶಾಸಕರ ನೇತೃತ್ವದಲ್ಲಿ ಸ್ಥಳೀಯರಿಂದ ಚಾಲನೆ ಕೊಡಿಸಲಾಯಿತು.



ಮೈಸೂರಿನ 47, 57, 59, 64 ಮತ್ತು 65ನೇ ವಾರ್ಡ್ ಸೇರಿದಂತೆ ಕುವೆಂಪುನಗರ, ಅಪೋಲೋ ಆಸ್ಪತ್ರೆಯಿಂದ ಉದಯರವಿ ರಸ್ತೆ ಮಾರ್ಗವಾಗಿ ಆದಿಚುಂಚನಗಿರಿ ಮುಖ್ಯ ರಸ್ತೆ, ಅರವಿಂದನಗರ, ನಾಯ್ಡು ಸ್ಟೋರ್ ಮೂಲಕ ಅಯೋಧ್ಯನಗರ ಮೂಲಕ ಹೆಚ್.ಡಿ.ಕೋಟೆ ರಸ್ತೆಯವರೆಗೆ ತ್ಯಾಜ್ಯ ನೀರು ನಿರ್ವಹಣೆಗಾಗಿ ಕೊಳವೆ ಮಾರ್ಗ ಅಳವಡಿಸುವ 6.7 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಯನ್ನು ಶಾಸಕ ರಾಮದಾಸ್ ನೇತೃತ್ವದಲ್ಲಿ ಪರಿಶೀಲಿಸಲಾಯಿತು. 59ನೇ ವಾರ್ಡ್‌ನ ಕೆ.ಸಿ.ಬಡಾವಣೆ, ಜೆ.ಸಿ.ಬಡಾವಣೆಗೆ ನೀರಿನ ಸಂಪರ್ಕ ಕಲ್ಪಿಸಿಕೊಡುವ ದೃಷ್ಟಿಯಿಂದ ನೀರಿನ ಟ್ಯಾಂಕ್ ಕಾಮಗಾರಿಗೂ ಶಾಸಕರ ಸಮ್ಮುಖದಲ್ಲಿ ಸ್ಥಳೀಯ ಮುಖಂಡರಿಂದ ಚಾಲನೆ ದೊರೆಯಿತು. ಈ ವೇಳೆ ಶಾಸಕರೊಂದಿಗೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಸದಸ್ಯರಾದ ಶಿವಕುಮಾರ್, ಗೀತಾಶ್ರೀ ಯೋಗಾನಂದ್, ಛಾಯಾದೇವಿ, ನವೀನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಕೊಡಗು ಜಿಲ್ಲೆಯಲ್ಲಿ ಇನ್ನು 4 ದಿನ ಭಾರೀ ಮಳೆ

ಮಂಡ್ಯ, ಚಾ.ನಗರ ಜಿಲ್ಲೆಯಲ್ಲಿ ಸಾಧಾರಣ ಮಳೆ ಸಾಧ್ಯತೆ

ಮೈಸೂರು, ಮೇ 18(ಆರ್‌ಕೆಬಿ)– ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮೇ 19ರಿಂದ 22ರವರೆಗೆ ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆ, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ.



ಮೈಸೂರು ಜಿಲ್ಲೆಯಲ್ಲಿ ಮೇ 19ರಂದು 40 ಮಿ.ಮೀ., 20ರಂದು 35 ಮಿ.ಮೀ., 21ರಂದು 22 ಮಿ.ಮೀ. ಹಾಗೂ 22ರಂದು 10 ಮಿ.ಮೀ. ಮಳೆಯಾಗುವ ಸಂಭವವಿದೆ. ಕೊಡಗು ಜಿಲ್ಲೆಯಲ್ಲಿಯೂ ಈ ನಾಲ್ಕು ದಿನಗಳ ಅವಧಿಯಲ್ಲಿ ಕ್ರಮವಾಗಿ 35 ಮಿ.ಮೀ., 35 ಮಿ.ಮೀ., 25 ಮಿ.ಮೀ ಹಾಗೂ 20 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಮಂಡ್ಯ ಜಿಲ್ಲೆಯಲ್ಲಿ ಈ ನಾಲ್ಕು ದಿನಗಳ ಅವಧಿಯಲ್ಲಿ ಕ್ರಮವಾಗಿ 33 ಮಿ.ಮೀ., 19 ಮಿ.ಮೀ., 12 ಮಿ.ಮೀ. 8 ಮಿ.ಮೀ. ಮಳೆಯಾಗಲಿದ್ದು, ಚಾಮರಾಜನಗರ ಜಿಲ್ಲೆಯಲ್ಲಿಯೂ ಕ್ರಮವಾಗಿ 20 ಮಿ.ಮೀ., 18 ಮಿ.ಮೀ., 11 ಮಿ.ಮೀ ಹಾಗೂ 10 ಮಿ.ಮೀ. ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆಯಲ್ಲಿ ತಿಳಿಸಿದೆ.

ಈ ಅವಧಿಯಲ್ಲಿ ಉಷ್ಣಾಂಶದಲ್ಲಿಯೂ ಸ್ವಲ್ಪ ಏರುಪೇರಾಗಲಿದ್ದು, ಮೈಸೂರು ಜಿಲ್ಲೆಯಲ್ಲಿ ಗರಿಷ್ಠ 24ರಿಂದ 28 ಡಿಗ್ರಿ ಸೆಲ್ಸಿಯಸ್, ಕನಿಷ್ಠ 17ರಿಂದ 19 ಡಿಗ್ರಿ ಸೆಲ್ಸಿಯಸ್, ಕೊಡಗು ಜಿಲ್ಲೆಯಲ್ಲಿ ಗರಿಷ್ಠ 26ರಿಂದ 28 ಡಿಗ್ರಿ ಸೆಲ್ಸಿಯಸ್, ಕನಿಷ್ಠ 17ರಿಂದ 18 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 24ರಿಂದ 27 ಡಿಗ್ರಿ ಸೆಲ್ಸಿಯಸ್, ಕನಿಷ್ಠ 19–20 ಡಿಗ್ರಿ ಸೆಲ್ಸಿಯಸ್ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ 30–31 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18–19 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರುವ ಸಾಧ್ಯತೆ ಇದೆ ಎಂದು ಮೈಸೂರಿನ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ದೀರ್ಘಾವಧಿ ಹವಾಮಾನ ಮುನ್ಸೂಚನೆ ಪ್ರಕಾರ ಮೇ 20ರಿಂದ 26ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಸಂಪುಟಕ್ಕೆ ಹೆಚ್.ವಿಶ್ವನಾಥ್ ಸೇರ್ಪಡೆಗೆ ಆಗ್ರಹಿಸಿ ಪತ್ರ ಚಳವಳಿ



ಮೈಸೂರು, ಮೇ 18(ಆರ್‌ಕೆಬಿ)– ಮುಂಬರುವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ಆಶ್ರಯದಲ್ಲಿ ಬುಧವಾರ ಪತ್ರ ಚಳವಳಿ ನಡೆಸಲಾಯಿತು.

ಮಹಾನಗರ ಪಾಲಿಕೆ ಎದುರಿನ ಅಂಚೆ ಡಬ್ಬದ ಬಳಿ ಜಮಾವಣೆಗೊಂಡ ಸಮಿತಿಯ ಮುಖಂಡರು, ಕಾರ್ಯಕರ್ತರು ವಿಶ್ವನಾಥ್ ಪರ ಘೋಷಣೆ ಕೂಗಿದರು. ವಿಶ್ವನಾಥ್ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬರೆದ ಅಂಚೆ ಪತ್ರವನ್ನು ಅಂಚೆ ಡಬ್ಬಕ್ಕೆ ಹಾಕಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಗರಡಿಯಲ್ಲಿ ಬೆಳೆದು ಅರಸು ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿರುವ ವಿಶ್ವನಾಥ್ ಕಳೆದ 45 ವರ್ಷಗಳಿಂದಲೂ ಸಕ್ರಿಯ ರಾಜಕಾರಣದಲ್ಲಿದ್ದಾರೆ. ಶಾಸಕರಾಗಿ, ಸಂಸದರಾಗಿ, ಸಚಿವರಾಗಿ ನಾನಾ ಹುದ್ದೆಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿ ಅಪಾರ ಅನುಭವ ಪಡೆದಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರುವಲ್ಲಿ ಅವರ ಶ್ರಮ ಅಪಾರವಾಗಿದೆ. ಹಾಗಾಗಿ ಅಂತಹ ಹಿರಿಯ ಮುತ್ಸದ್ದಿ ವಿಶ್ವನಾಥ್ ಅವರನ್ನು ಮಂತ್ರಿ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಎಂ.ವೀರಪ್ಪಮೊಯ್ಲಿ ಸಂಪುಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅರಣ್ಯ ಇಲಾಖೆ, ಎಸ್.ಎಂ.ಕೃಷ್ಣ ಸಂಪುಟದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ, ಸಹಕಾರ ಇಲಾಖೆ ಸಚಿವರಾಗಿ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು. ಶಾಲಾ ಮಕ್ಕಳಿಗಾಗಿ ಬಿಸಿಯೂಟ ಯೋಜನೆ ಜಾರಿಗೊಳಿಸಿದವರು ವಿಶ್ವನಾಥ್. ಹಾಗಾಗಿ ಅವರ ಅನುಭವವನ್ನು ಸರ್ಕಾರ ಬಳಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಮುಖಂಡರಾದ ದ್ಯಾವಪ್ಪ ನಾಯಕ, ಎಸ್.ಶಿವಪ್ಪ, ಎಚ್.ಬೀರಪ್ಪ, ಪ್ರಶಾಂತ ಆರ್ಯ, ಭಾನು ಮೋಹನ್, ಪವನ್, ಸಿದ್ದರಾಮ, ಸಲ್ಮಾನ್, ಜೀವಿತ್, ಪ್ರಜ್ವಲ್, ಮಣಿ, ರಾಹಿದ್, ಸಾಹಿಲ್, ಮನು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಎಸ್‌ಎಸ್ ವಿದ್ಯಾ ಸಂಸ್ಥೆಗೆ ಭೇಟಿ ನೀಡಿದ ರಾಜ್ಯ ಬಿಜೆಪಿ ವಕ್ತಾರ ಗಣೇಶ್ ಕಾರ್ಣಿಕ್ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿದರು. ಈ ವೇಳೆ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಮೈಲ್ಯಾಕ್ ಅಧ್ಯಕ್ಷ ಫಣೀಶ್, ನಗರ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಶಿವಕುಮಾರ್, ಯುವ ಮೋರ್ಚಾ ಉಪಾಧ್ಯಕ್ಷ ಕಾರ್ತಿಕ್ ಮರಿಯಪ್ಪ, ಕಾರ್ಯದರ್ಶಿ ಮಧು, ಚಾಮುಂಡೇಶ್ವರಿ ಕ್ಷೇತ್ರ ಯುವ ಮೋರ್ಚಾ ಅಧ್ಯಕ್ಷ ಚೇತನ್, ಒಬಿಸಿ ನಗರ ಉಪಾಧ್ಯಕ್ಷ ಶಿವರಾಜ್, ನರಸೀಪುರ ಯುವ ಮೋರ್ಚಾ ಅಧ್ಯಕ್ಷ ಶಿವು ಇನ್ನಿತರರು ಉಪಸ್ಥಿತರಿದ್ದರು.

ವಿಧಾನಪರಿಷತ್‌ಗೆ ರಘು ಕೌಟಿಲ್ಯ ಆಯ್ಕೆಗೆ ಮಡಿವಾಳ ಸಮಾಜ ಆಗ್ರಹ

ಮೈಸೂರು, ಮೇ 18–ವಿಧಾನ ಪರಿಷತ್ ಚುನಾವಣೆಯಲ್ಲಿ ಎರಡು ಬಾರಿ ಗೆಲುವಿನ ಅವಕಾಶದಿಂದ ವಂಚಿತರಾದ ಹಿಂದುಳಿದ ವರ್ಗಗಳ ನಾಯಕ, ಮಡಿವಾಳ ಸಮುದಾಯದ ರಘು ಕೌಟಿಲ್ಯ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು ಎಂದು ತಾಲೂಕು ಯುವ ಮಡಿವಾಳ ಸಮಾಜದ ಅಧ್ಯಕ್ಷ ಆಟೋ ರಮೇಶ್ ಕೋಟೆ ಒತ್ತಾಯಿಸಿದ್ದಾರೆ.



ವಿಧಾನಪರಿಷತ್ ಚುನಾವಣೆಗೆ ಆರ್. ರಘು ಅವರಿಗೆ ಬಿಜೆಪಿ ಅವಕಾಶ ಕಲ್ಪಿಸಬೇಕು. ರಾಜ್ಯದಲ್ಲಿ ಸುಮಾರು 20 ಲಕ್ಷ ಜನಸಂಖ್ಯೆ ಇರುವ ಮಡಿವಾಳ ಸಮಾಜವು ಸ್ವಾತಂತ್ರ್ಯ ನಂತರದಿಂದಲೂ ರಾಜಕೀಯ ಸ್ಥಾನಮಾನಗಳಿಂದ ವಂಚಿತವಾಗಿದೆ. ಈ ಹಿಂದೆ ಮುಖ್ಯ ಮಂತ್ರಿ ಆಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಎನ್.ಶಂಕರಪ್ಪ ಅವರಿಗೆ ಪರಿಷತ್ ಪ್ರವೇಶಿಸಲು ಅವಕಾಶ ಮಾಡಿಕೊಟ್ಟಿದ್ದರು.

ನಂತರ ಮುಖ್ಯಮಂತ್ರಿಯಾಗಿ ಸದಾನಂದಗೌಡರು ಸದನ ಪ್ರವೇಶಿಸಲು ಅವಕಾಶ ಕಲ್ಪಿಸುವ ಸಲುವಾಗಿ ಅವರಿಂದ ರಾಜೀನಾಮೆ ಪಡೆಯಲಾಯಿತು. ಅಂದಿನಿಂದ ಇಂದಿನವರೆಗೂ ನಮ್ಮ ಸಮಾಜ ವಿಧಾನಸೌಧ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಸಾಮಾಜಿಕ ನ್ಯಾಯದಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿರುವ ಸಮಾಜಕ್ಕೆ ಗಟ್ಟಿಯಾದ ನಾಯಕತ್ವವನ್ನು ನೀಡಬಲ್ಲ ರಘು ಕೌಟಿಲ್ಯರಿಗೆ ಮೇಲ್ಮನೆ ಪ್ರವೇಶಕ್ಕೆ ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿದ್ದಾರೆ.

ಕಮಲ ಹಿಡಿದ ಹೊರಟ್ಟಿ

ಬೆಂಗಳೂರು, ಮೇ 18 (ಕೆಎಂಶಿ)–ವಿಧಾನಪರಿಷತ್‌ನ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಬಸವರಾಜ ಹೊರಟ್ಟಿ ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹೊರಟ್ಟಿ ಅವರಿಗೆ ಪಕ್ಷದ ಚಿಹ್ನೆ ನೀಡುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಸಚಿವರಾದ ಆರ್.ಅಶೋಕ್, ಆರಗ ಜ್ಞಾನೇಂದ್ರ, ಸಿ.ಸಿ. ಪಾಟೀಲ್, ಗೋವಿಂದ್ ಕಾರಜೋಳ ಮತ್ತಿತರರು ಉಪಸ್ಥಿತರಿದ್ದರು.

ಹೊರಟ್ಟಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡ ನಂತರ ಮಾತನಾಡಿದ ಮುಖ್ಯಮಂತ್ರಿಯವರು, ಇವರ ಸೇರ್ಪಡೆಯಿಂದ ಪಕ್ಷಕ್ಕೆ ಬಲ ಬಂದಿದೆ ಎಂದರು.

ಸತತವಾಗಿ 6 ಬಾರಿ ಪರಿಷತ್ ಪ್ರವೇಶಿಸಿ ಇಡೀ ರಾಷ್ಟ್ರದಲ್ಲಿ ದಾಖಲೆ ನಿರ್ಮಿಸಿದ್ದಾರೆ. ಹೊರಟ್ಟಿ ಅವರಿಗೆ ಮುಂದೆ ಉತ್ತಮ ಸ್ಥಾನಮಾನಗಳನ್ನು ನೀಡಲಾಗುವುದು ಎಂದು ನಮ್ಮ ನಾಯಕರುಗಳೇ ತಿಳಿಸಿದ್ದಾರೆ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 18(ಎಂಟಿವೈ)– ಕುಂಬಾರ ಸಮುದಾಯಕ್ಕೆ ಸೇರಿರುವ 2019–20, 2020–21 ಹಾಗೂ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ 'ಪ್ರತಿಭಾ ಪುರಸ್ಕಾರ' ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಕುಂಬಾರ ಮಹಿಳಾ ಸಂಘದ ಅಧ್ಯಕ್ಷೆ ರೇಣುಕಾಂಬ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಂಬಾರ ಸಮುದಾಯದಲ್ಲಿರುವ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಲವಾರು ವರ್ಷಗಳಿಂದ ನಮ್ಮ ಸಂಸ್ಥೆಯಿಂದ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದ್ದೇವೆ ಎಂದರು. ಕೋವಿಡ್‌ನಿಂದ ದೇಶದೆಲ್ಲೆಡೆ ನಿರ್ಬಂಧ ವಿಧಿಸಿದ ಕಾರಣ ಕಳೆದ ಮೂರು ವರ್ಷಗಳಿಂದ ಈ ಕಾರ್ಯಕ್ರಮವನ್ನು ಮಾಡಲು ಸಾಧ್ಯವಾಗಲಿಲ್ಲ ಎಂದರು.

ಕಳೆದ 3 ವರ್ಷಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮೇ 25ರೊಳಗೆ ನಗರದ ಪಡುವಾರಹಳ್ಳಿಯಲ್ಲಿರುವ ಶಾಲಿವಾಹನ ವಿವಿಧೋದ್ದೇಶ ಸಹಕಾರ ಸಂಘಕ್ಕೆ ತಮ್ಮ ಅಂಕಪಟ್ಟಿಯ ನಕಲು ಪ್ರತಿ, ಜಾತಿ ಪ್ರಮಾಣ ಪತ್ರ, ವಿಳಾಸದೊಂದಿಗೆ ಭೇಟಿ ಮಾಡಬಹುದು. ಹಾಗೂ ಮಾಹಿತಿಗಾಗಿ 9900502921 ಹಾಗೂ 9742562565ಗೆ ಸಂಪರ್ಕಿಸಬಹುದು ಎಂದರು. ಸಂಘದ ಉಪಾಧ್ಯಕ್ಷೆ ಸುಬ್ಬಲಕ್ಷ್ಮಿ, ಕಾರ್ಯದರ್ಶಿ ನಾಗರತ್ನ ಚನ್ನಕೇಶವ, ಯಮುನಾ ನಾಗರಾಜು, ಭಾಗ್ಯ ಹಾಜರಿದ್ದರು.

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡದೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಬೇಡ

ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ

ಮೈಸೂರು,ಮೇ 18(ಆರ್‌ಕೆಬಿ)– ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡದೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬಾರದು ಎಂದು ಆಗ್ರಹಿಸಿ ಹಿಂದುಳಿದ ವರ್ಗಗಳ ಮೀಸಲಾತಿ ಸಂರಕ್ಷಣಾ ಸಮಿತಿ ವತಿಯಿಂದ ಬುಧವಾರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇಲ್ಲದ ಕಾರಣ ರಾಜಕೀಯವಾಗಿ ಈ ಸಮುದಾಯಗಳು ಹಿನ್ನಡೆ ಅನುಭವಿಸುತ್ತಿವೆ. ಈಗ ಏಕಾಏಕಿ ಸರ್ವೋಚ್ಚ ನ್ಯಾಯಾಲಯ ಸ್ಥಳೀಯ ಸಂಸ್ಥೆಗಳಿಗೆ ಮೀಸಲಾತಿ ಹೊರತುಪಡಿಸಿ ಚುನಾವಣೆ ಮಾಡಿ ಎಂದು ಆದೇಶಿಸಿರುವುದರಿಂದ ಮೀಸಲಾತಿಗೆ ಸಂಚಕಾರ ಬಂದಿದೆ. ಈ ತೀರ್ಪು ಹಿಂದುಳಿದ ವರ್ಗಗಳಿಗೆ ಮರಣ ಶಾಸನವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಪ್ರಸ್ತುತ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನ್ಯಾಯಾಲಯ ಮೀಸಲಾತಿಯನ್ನು ಹೊರತುಪಡಿಸಿ ಚುನಾವಣೆ ನಡೆಸಲು ಸೂಚಿಸಿರುವುದರಿಂದ ಈ ವರ್ಗಗಳಿಗೆ ಮೀಸಲಾತಿ ಕೈತಪ್ಪುವ ಆತಂಕವಿದೆ. ಆದ್ದರಿಂದ ಸರ್ಕಾರ ಜವಾಬ್ದಾರಿಯುತವಾಗಿ ವರ್ತಿಸದಿದ್ದರೆ ಹಿಂದುಳಿದವರ ಮೀಸಲಾತಿಗೆ ಸಂಚಕಾರ ಬರುವುದು ಶತಸಿದ್ಧ ಎಂದು ಕಿಡಿಕಾರಿದರು.



ಹಿರಿಯ ಸಮಾಜವಾದಿ ಪ.ಮಲ್ಲೇಶ್, ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು, ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್, ಮಾಜಿ ಮೇಯರ್ ಆರ್.ಅನಂತು, ಡಿ.ನಾಗಭೂಷಣ್, ಹಿಂದುಳಿದ ವರ್ಗಗಳ ಮೀಸಲಾತಿ ಸಂರಕ್ಷಣಾ ಸಮಿತಿ ಸಂಚಾಲಕ ಕೆ.ಎಸ್.ಶಿವರಾಮು, ಪ್ರೊ.ಶಬೀರ್ ಮುಸ್ತಾಫ, ಎಚ್.ಎಸ್.ಪ್ರಕಾಶ್, ಎನ್.ಆರ್.ನಾಗೇಶ್, ಯೋಗೇಶ್ ಉಪ್ಪಾರ್, ರವಿನಂದನ್, ಚನ್ನಕೇಶವ, ಇನ್ನಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಿಷ ಸೇವಿಸಿದ್ದ ವ್ಯಕ್ತಿ ಸಾವು

ಮೈಸೂರು,ಮೇ 18(ಆರ್‌ಕೆ)– ಜೀವನದಲ್ಲಿ ಜಿಗುಪ್ಸೆಗೊಂಡು ವಿಷ ಸೇವಿಸಿ ಅಸ್ವಸ್ಥನಾಗಿದ್ದ ವ್ಯಕ್ತಿ ಮಂಗಳವಾರ ಕೆ.ಆರ್.ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಮಂಜುನಾಥ್ (45) ಸಾವನ್ನಪ್ಪಿದವರು. ಮೇ 15ರಂದು ವಿಷ ಸೇವಿಸಿದ್ದ ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮಂಗಳವಾರ ಸಂಜೆ ಕೊನೆಯುಸಿರೆಳೆದರು. ಇಂದು ಮೈಸೂರು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ದೇಹವನ್ನು ಒಪ್ಪಿಸಲಾಯಿತು.

ಪ್ರಕರಣ ದಾಖಲಿಸಿಕೊಂಡಿರುವ ಮೇಟಗಳ್ಳಿ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಸಾರಿಗೆ ಬಸ್-ಕ್ಯಾಂಟರ್ ಮುಖಾಮುಖಿ ಡಿಕ್ಕಿ

ಚಾಲಕರು ಸೇರಿ 35 ಮಂದಿ ಪ್ರಯಾಣಿಕರಿಗೆ ಗಾಯ





ಭೇರ್ಯ, ಮೇ 18(ಮಹೇಶ್)–ಸಾರಿಗೆ ಬಸ್ ಹಾಗೂ ಕ್ಯಾಂಟರ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಬಸ್ ಚಾಲಕ, ನಿರ್ವಾಹಕ, ಕ್ಯಾಂಟರ್ ಚಾಲಕ, ಕ್ಲೀನರ್ ಸೇರಿದಂತೆ 35 ಮಂದಿ ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಕೆ.ಆರ್.ನಗರ ತಾಲೂಕಿನ ಹೊಸಅಗ್ರಹಾರ ರೈಲ್ವೆ ನಿಲ್ದಾಣದ ಬಳಿಯ ಹಾಸನ–ಮೈಸೂರು ಹೆದ್ದಾರಿಯಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ.

ಬಸ್ ಚಾಲಕ ಹೇಮಂತ್ ಕುಮಾರ್(38), ನಿರ್ವಾಹಕ ಕುಮಾರ್(33), ಕ್ಯಾಂಟರ್ ಚಾಲಕ ಮನೋಜ್(23), ಕ್ಲೀನರ್ ಕೀರ್ತಿ(22), ಪ್ರಯಾಣಿಕರಾದ ಮಲ್ಲರಾಜೇ ಅರಸ್(30), ಕಿರಣ್‌ಬಾನು (37), ಎಂಜಿ.ಕೀರ್ತನಾ(19), ನಾಗರಾಜು(32), ಗೌರಮ್ಮ (45), ನಮನ (23), ಪದ್ಮಮ್ಮ(65), ಮಾನಸ(12), ಜಯಮ್ಮ (65), ನಾಗರಾಜು(57), ಅರ್ಪಿತಾ(24), ಕೀರ್ತಿ (33), ಶಶಿಕುಮಾರ್(30), ಅಫ್ಸರ್ ಷರೀಫ್(40), ಬಸವರಾಜು(75), ದಿನೇಶ್(35), ಮಾಂತೇಶ್(15), ಯಶಸ್ವಿನಿ(11), ಸೀತಾಬಾನು(70), ಜಗದೀಶ್(45) ಸೇರಿದಂತೆ 35 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ ಕೆಲವರು ಹೊಳೆನರಸೀಪುರ ಪಟ್ಟಣ ಹಾಗೂ ಸುತ್ತಮುತ್ತಲಿನವರು ಎಂದು ತಿಳಿದು ಬಂದಿದೆ.



ಅಪಘಾತಕ್ಕೀಡಾದ ಸಾರಿಗೆ ಬಸ್ಸು(ಕೆಎ13, ಎಫ್2132) ಹಾಸನ ಜಿಲ್ಲೆಯ ಹೊಳೆ ನರಸೀಪುರ ಘಟಕಕ್ಕೆ ಸೇರಿದ್ದಾಗಿದ್ದು, ಮೈಸೂರು ಕಡೆಯಿಂದ ತೆರಳುತ್ತಿತ್ತು. ಇದೇ ವೇಳೆ ಹಾಸನ ಕಡೆಯಿಂದ ಸರಕು ತುಂಬಿದ್ದ ಕ್ಯಾಂಟರ್ (ಕೆಎ64, 1098) ಮೈಸೂರಿನತ್ತ ಬರುತ್ತಿತ್ತು. ಧಾರಾಕಾರ ಮಳೆ ನಡುವೆ ಎದುರಿಗೆ ಬಂದ ಬೈಕ್ ಸವಾರನಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಕ್ಯಾಂಟರ್ ಸಾರಿಗೆ ಬಸ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬಸ್ ಚಾಲಕ–ನಿರ್ವಾಹಕ ಸೇರಿದಂತೆ 30ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಂಭೀರ ಸ್ವರೂಪದ ಗಾಯವಾಗಿದ್ದರೆ, ಕ್ಯಾಂಟರ್‌ನಲ್ಲಿದ್ದ ಚಾಲಕ, ಕ್ಲೀನರ್ ಕಾಲು ಮುರಿದಿದೆ ಎಂದು ತಿಳಿದು ಬಂದಿದೆ.

ಅಪಘಾತದಿಂದ ಬಸ್ ಹಾಗೂ ಕ್ಯಾಂಟರ್ ತೀವ್ರ ಜಖಂಗೊಂಡಿದ್ದು, ರಸ್ತೆ ಸಂಚಾರ ಅಸ್ತವ್ಯಸ್ತವಾಗಿತ್ತು. ಸ್ಥಳಕ್ಕೆ ಸಾಲಿ ಗ್ರಾಮ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್ ಸಿಬ್ಬಂದಿಯೊಂದಿಗೆ ಭೇಟಿ ನೀಡಿ, ಗಾಯಾಳುಗಳನ್ನು ಸಾಗಿಸಿ, ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದರು. ಅಪಘಾತಕ್ಕೀಡಾದ ಬಸ್, ಕ್ಯಾಂಟರ್ ಅನ್ನು ಕ್ರೇನ್ ಮೂಲಕ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ. ಮಹೇಂದ್ರಪ್ಪ ಹಾಗೂ ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸೌಜನ್ಯ, ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ತಕ್ಷಣವೇ ಆಂಬುಲೆನ್ಸ್‌ಗಳ ಮೂಲಕ ಕೆ.ಆರ್.ನಗರ ತಾಲೂಕು ಆಸ್ಪತ್ರೆ ಹಾಗೂ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಿದರು. ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸದ್ಯ ಯಾವುದೇ ಪ್ರಾಣಾಪಾಯ ವಾಗಿಲ್ಲ. ಕೆಲವರಿಗೆ ಮುಖ ಮತ್ತು ತಲೆಗೆ ಪೆಟ್ಟು ಬಿದ್ದಿದ್ದು, ಉಳಿದವರಿಗೆ ಕಾಲುಗಳು ಮುರಿದಿವೆ. ಇನ್ನೂ ಕೆಲವರಿಗೆ ಸಣ್ಣಪುಟ್ಟ ಗಾಯಾಗಳಾಗಿವೆ ಎಂದು ವೈದ್ಯಾಧಿಕಾರಿ ಡಾ.ಸೌಜನ್ಯ ತಿಳಿಸಿದ್ದಾರೆ.

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ಖಚಿತ

ಶಾಸಕ ಎಸ್.ಎ.ರಾಮದಾಸ್ ವಿಶ್ವಾಸ



ತಿ.ನರಸೀಪುರ ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಬೂತ್ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಎಸ್.ಎ.ರಾಮದಾಸ್ ಮಾತನಾಡಿದರು.

ತಿ.ನರಸೀಪುರ, ಮೇ 18(ಎಸ್‌ಕೆ)–ಮುಂಬರುವ ವಿಧಾನಸಭೆ ಹಾಗೂ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಕ್ಷೇತ್ರದ ಜನತೆ ಗೆಲ್ಲಿಸುವ ವಿಶ್ವಾಸ ತಮಗಿದೆ ಎಂದು ಮಾಜಿ ಸಚಿವ, ಶಾಸಕ ಎಸ್.ಎ.ರಾಮದಾಸ್ ವಿಶ್ವಾಸ ವ್ಯಕ್ತಪಡಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ನಡೆದ ಬಿಜೆಪಿ ಬೂತ್ ಮಟ್ಟದ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಹಾಲಿ ಶಾಸಕರ ವಿರುದ್ಧದ ಅಲೆ ಎದ್ದಿರುವುದು ಬಿಜೆಪಿ ಗೆಲುವಿಗೆ ವರದಾನವಾಗಲಿದ್ದು, ಸಮಯದ ಸದುಪಯೋಗಪಡಿಸಿಕೊಳ್ಳುವುದು ನಮ್ಮ ಕಾರ್ಯಕರ್ತರ ಜವಾಬ್ದಾರಿ. ಹಾಗೆಯೇ ಕ್ಷೇತ್ರದಲ್ಲಿ ತಮ್ಮ ಸಮಸ್ಯೆಗಳಿಗೆ ಸ್ಪಂದಿಸಲು ಶಾಸಕರಿಲ್ಲ ಎಂಬ ಕಾರ್ಯಕರ್ತರ ಕೂಗಿಗೆ ಉತ್ತರ ಸಿಗುವಂತೆ ಮಾಡಲು ಪಕ್ಷದ ಅಭ್ಯರ್ಥಿ ರವಿಶಂಕರ್‌ರನ್ನು ಗೆಲ್ಲಿಸಲು ಕಾರ್ಯಕರ್ತರು ಶ್ರಮ ವಹಿಸಬೇಕಿದೆ. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ಮೈ.ವಿ.ರವಿಶಂಕರ್ ಸ್ಪರ್ಧಿಸಿದ್ದಾರೆ. ಕ್ಷೇತ್ರದಾದ್ಯಂತ ಪಕ್ಷದ ನಾಯಕರು, ಮುಖಂಡರು ಮನೆ–ಮನೆಗೆ ತೆರಳಿ ಮತಯಾಚನೆ ಮಾಡುವ ಮೂಲಕ ಪ್ರಥಮ ಪ್ರಾಶಸ್ತ್ಯ ಅಥವಾ ಎರಡನೇ ಪ್ರಾಶಸ್ತ್ಯ ಮತ ಕೊಡಿಸಲು ಶಕ್ತಿ ಮೀರಿ ಪ್ರಯತ್ನಪಡಬೇಕು ಎಂದು ಕರೆ ನೀಡಿದರು.

ಪ್ರಸಕ್ತ ಎದುರಾಗಿರುವ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಮುಂಬರುವ ವಿಧಾನ ಸಭಾ ಚುನಾವಣೆಗೆ ದಿಕ್ಸೂಚಿಯಾಗಿರುವುದರಿಂದ ಕಾರ್ಯಕರ್ತರು ಆಲಸ್ಯ ಮಾಡದೇ ಸಂಘಟಿತರಾಗಿ ಅಭ್ಯರ್ಥಿಯ ಗೆಲುವಿಗೆ ಕಾರಣೀಭೂತರಾಗುವಂತೆ ರಾಮದಾಸ್ ಕರೆ ನೀಡಿದರು.

ಪಕ್ಷದ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ಕಳೆದ ಬಾರಿ ನಡೆದ ಪದವೀಧರ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಕೇವಲ 160 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಆದರೆ ಈ ಬಾರಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಮಾತನಾಡಿದರು. ಜಿಲ್ಲಾ ಉಪಾಧ್ಯಕ್ಷರಾದ ದಾಸಯ್ಯ, ಜಿಲ್ಲಾ ಕಾರ್ಯದರ್ಶಿ ಬಸವರಾಜು, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮಾ, ಮುಖಂಡರಾದ ಹಿರಿಯೂರು ಪರಶಿವಮೂರ್ತಿ, ಬನ್ನೂರು ರಾಮಚಂದ್ರ, ತಾಪಂ ಸದಸ್ಯರಾದ ಚಂದ್ರಶೇಖರ್, ರತ್ನರಾಜು ಪುರಸಭಾ ಸದಸ್ಯರಾದ ಎಸ್.ಕೆ. ಕಿರಣ್, ಎನ್.ಲೋಕೇಶ್, ರೈತ ಮೋರ್ಚಾ ಅಧ್ಯಕ್ಷ ಕೆಬ್ಬೇಹುಂಡಿ ಶಿವಕುಮಾರ್, ಕರೋಹಟ್ಟಿ ಮಹದೇವಯ್ಯ, ಸಾಮ್ರಾಟ್ ಸುಂದರೇಶನ್, ತಿರುಮಕೂಡಲು ವಾಸು, ಕುರುಬೂರು ಶಿವ ಶಂಕರ್, ಶ್ರೀರಂಗರಾಜಪುರ ಸಿದ್ದರಾಜು, ಸೋಸಲೆ ಶಿವಕುಮಾರ್, ಚೌಹಳ್ಳಿ ಸಿದ್ದರಾಜು, ಕಲಾಂತ ಭಟ್, ಮಹೇಶ್, ನಂದಕುಮಾರ್ ಇದ್ದರು.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು



ಹುಣಸೂರು, ಮೇ 18(ಕೆಕೆ)– ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟಿರುವ ಘಟನೆ ನಗರದ ಎಪಿಎಂಸಿ ಬಳಿ ಮಂಗಳ ವಾರ ಸಂಭವಿಸಿದೆ. ಪಿರಿಯಾಪಟ್ಟಣ ತಾಲೂಕಿನ ಆರ್.ಹೊಸಳ್ಳಿ ನಿವಾಸಿ ಶ್ರೀನಿವಾಸ್(53) ಅಪಘಾತದಲ್ಲಿ ಮೃತಪಟ್ಟವರು.

ಇವರು ಹೀರೋ ಹೊಂಡಾ ಬೈಕ್(ಕೆಎ12, ಜೆ–6562)ನಲ್ಲಿ ಸ್ನೇಹಿತ ಸ್ವಾಮಿಯೊಂದಿಗೆ ಮೈಸೂರಿನಿಂದ ಹುಣಸೂರಿಗೆ ಬರುತ್ತಿದ್ದಾಗ ನಗರದ ಎಪಿಎಂಸಿ ಸಮೀಪ ಗೂಡ್ಸ್ ವಾಹನ (ಕೆಎ12, ಬಿ3746) ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಗಂಭೀರವಾಗಿ ಗಾಯಗೊಂಡ ಶ್ರೀನಿವಾಸ್‌ಗೆ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಕೊನೆಯುಸಿರೆಳೆದಿದ್ದಾರೆ.

ಮೃತರು ಪತ್ನಿ, ಪುತ್ರ–ಪುತ್ರಿ, ಭಾವ ಹುಣಸೂರಿನ 'ಮೈಸೂರು ಮಿತ್ರ' ಪತ್ರಿಕೆ ವರದಿಗಾರ ಕೆ.ಕೃಷ್ಣ(ಕೆಕೆ) ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ನಗರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಹಸ್ತಾಂತರಿಸಲಾಯಿತು.

ಆಂಜನೇಯಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ



ಕೆ.ಆರ್.ನಗರ, ಮೇ 18(ಕೆಟಿಆರ್)– ಪಟ್ಟಣದ ತೋಪಮ್ಮನವರ ದೇಗುಲ ಆವರಣದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ದೇಗುಲ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸಿ.ಎ.ರಾಜು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, 25 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಸಮಿತಿ ನಿರ್ಧರಿಸಿದ್ದು, ಕೇಂದ್ರ ಮಾಜಿ ಸಚಿವ ಕೆ.ಹೆಚ್.ಮುನಿಯಪ್ಪ ಮತ್ತು ಅವರ ಸಂಬಂಧಿ ಆರ್ಥಿಕ ಸಹಕಾರ ಮಾಡುತ್ತಿರುವುದಾಗಿ ಮಾಹಿತಿ ನೀಡಿದರು.

ತೋಪಮ್ಮನವರ ದೇವಸ್ಥಾನದ ಜೊತೆಗೆ ನವಗ್ರಹ ದೇವಾಲಯವಿದ್ದು, ಭಕ್ತರಿಗೆ ಎಲ್ಲಾ ರೀತಿಯ ಅನುಕೂಲವನ್ನು ಸಮಿತಿಯಿಂದ ಕಲ್ಪಿಸಲಾಗಿದೆ. ಜೊತೆಗೆ ಈ ಭಾಗದ ಜನತೆಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಲೋಕೇಶ್, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಕೆ.ಎಂ. ಮಹದೇವ್, ಯೋಗೀಶ್, ಮಾಟೇಗೌಡ, ನಂಜುಂಡ, ಜಯರಾಮ, ನಾಗಣ್ಣಾಚಾರ್ ಇದ್ದರು.

ಶಿರಮಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ



ಮಲ್ಕುಂಡಿ, ಮೇ 18(ಚನ್ನಪ್ಪ)–ನಂಜನಗೂಡು ತಾಲೂಕಿನ ಶಿರಮಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಶ್ರೀಕಂಠಸ್ವಾಮಿ, ಉಪಾಧ್ಯಕ್ಷರಾಗಿ ಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿಂದು ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಶ್ರೀಕಂಠಸ್ವಾಮಿ, ಲಕ್ಷ್ಮಿ ಇವರಿಬ್ಬರನ್ನು ಹೊರತು ಪಡಿಸಿ ಬೇರ್ಯಾರು ನಾಮಪತ್ರ ಸಲ್ಲಿಸಿದ ಹಿನ್ನೆಲೆ ಚುನಾವಣಾಧಿಕಾರಿ ಪ್ರಕಾಶ್‌ರಾವ್ ಅವಿರೋಧ ಆಯ್ಕೆ ಘೋಷಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಮಹದೇವಸ್ವಾಮಿ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದರು. ಮುಖಂಡರಾದ ರಾಜಶೇಖರಮೂರ್ತಿ, ಭೋಗನಂಜಪ್ಪ, ಪರ್ವತಪ್ಪ, ವಿರೋಪಕ್ಷಾ, ಪುಟ್ಟಬಸಪ್ಪ, ಮಾದೇಗೌಡ, ಸಿದ್ದೇಗೌಡ, ಮಹೇಶ್, ನಂಜುಂಡಸ್ವಾಮಿ, ಇಓ ಮೃತುಂಜಯ್ಯ ಹಾಗೂ ನಿರ್ದೇಶಕರು ಹಾಜರಿದ್ದರು.

ನಿರಂತರ ಮಳೆಯಿಂದ ಕೋಟೆ ಜನ ತತ್ತರ

ಕೆರೆ–ಕಟ್ಟೆಗಳು ಭರ್ತಿ, ರೈತರ ಬೆಳೆ ಹಾನಿ



ಹೆಚ್.ಡಿ.ಕೋಟೆ, ಮೇ 18(ಮಂಜು)– ತಾಲೂಕಿನಲ್ಲಿ ಕಳೆದ ಮೂರ್‍ನಾಲ್ಕು ದಿನಗಳಿಂದ ನಿರಂತರವಾಗಿ ಸುರಿದ ಮಳೆಗೆ ಕೆರೆ–ಕಟ್ಟೆಗಳು ತುಂಬಿ ಕೋಡಿ ಬಿದ್ದಿದ್ದು, ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

ತಾಲೂಕಿನ ಮೇಟಿಕುಪ್ಪೆ, ವೀರನಹೊಸಹಳ್ಳಿ ಅರಣ್ಯದಲ್ಲಿ ಸುರಿದ ಮಳೆಗೆ ಅರಣ್ಯದಲ್ಲಿರುವ ಕೆರೆ–ಕಟ್ಟೆಗಳು ತುಂಬಿ ಕೋಡಿ ಹರಿದ ಪರಿಣಾಮ ಕೆ.ಎಡತೊರೆ ಗ್ರಾಮದ ದೊಡ್ಡ ಹೆಬ್ಬಾಳ ಹೊಳೆ ತುಂಬಿ ಹರಿಯುತ್ತಿದೆ. ಇದರಿಂದ ಜಲಾಶಯ ಭರ್ತಿಯಾಗಿ ಕೋಡಿ ಬಿದ್ದಿದೆ. ಮಳೆ ಹಾಗೂ ಕೆರೆಗಳ ಕೋಡಿಯಿಂದ ನೂರಾರು ಹೆಕ್ಟೆರ್ ಪ್ರದೇಶದಲ್ಲಿ ಬೆಳೆದಿದ್ದ ಹತ್ತಿ, ಕಬ್ಬು, ತೆಂಗು, ಬಾಳೆ, ಅರಿಶಿಣ, ಮೆಕ್ಕೆಜೋಳ ಬೆಳೆ ನೀರಿನಲ್ಲಿ ಮುಳುಗಿ ನಷ್ಟ ಉಂಟಾಗಿದೆ.

ಹಂಪಾಪುರ ಹೋಬಳಿ ವ್ಯಾಪ್ತಿಯ ಗಂಗಡಗೊಸಹಳ್ಳಿ ಗ್ರಾಮದ ನಿಂಗರಾಜು ಅವರಿಗೆ ಸೇರಿದ 40 ಸಾವಿರ ಬೆಲೆ ಬಾಳುವ ಹಸುವಿಗೆ ಮಂಗಳವಾರ ರಾತ್ರಿ ಸಿಡಿಲು ಬಡಿದು ಮೃತಪಟ್ಟಿದೆ. ಶಿಂಡೇನಹಳ್ಳಿ ಗ್ರಾಮದಲ್ಲಿ ಎರಡು ಎಕ್ಕರೆ ಹಾಗೂ ಮಣಿಗಾರನಹುಂಡಿ ಗ್ರಾಮದಲ್ಲಿ ಎರಡು ಎಕರೆ ಬಾಳೆ ಗಾಳಿ–ಮಳೆಗೆ ನೆಲಕಚ್ಚಿದೆ. ಅಂತರ ಸಂತೆ ಹೋಬಳಿ ವ್ಯಾಪ್ತಿಯ ಹೊನ್ನಮನಕಟ್ಟೆ ಹಾಗೂ ಎನ್.ಬೆಳ್ತೂರು ಗ್ರಾಮದಲ್ಲಿ ಮನೆ ಕುಸಿದಿವೆ. ಹೊಸ ಹೊಳಲು, ಹೊನ್ನಮ್ಮನಕಟ್ಟೆ ಹಾಗೂ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಇಪ್ಪತ್ತು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಮೆಕ್ಕೆ ಜೋಳ ಮಳೆ ನೀರಿಗೆ ಕೊಚ್ಚಿ ಹೋಗಿದೆ. ವೀರನಹೊಸಹಳ್ಳಿ ಅರಣ್ಯದಿಂದ ಭಾರೀ ಪ್ರಮಾಣದ ನೀರು ಹರಿದು ಬಂದಿದ್ದರಿಂದ ತಾಲೂಕಿನ ಟೈಗರ್ ಬ್ಲಾಕ್ ಗ್ರಾಮದ ಬಳಿ ಇರುವ ಹೆಚ್.ಡಿ.ಕೋಟೆ ಹುಣಸೂರು ಮುಖ್ಯರಸ್ತೆಯ ಸೇತುವೆ ಕೆಲವುಭಾಗ ಕೊರೆದು ಹಾನಿಯಾಗಿದೆ.

ಹೆಬ್ಬಾಳ ಜಲಾಶಯ ಭರ್ತಿಯಾದ ಮಾಹಿತಿ ತಿಳಿದ ಪಟ್ಟಣದ ಅಕ್ಕಪಕ್ಕದ ಗ್ರಾಮದ ಜನರು ವೀಕ್ಷಣೆಗೆ ಮುಗಿಬಿದ್ದರಲ್ಲದೆ, ಫೋಟೋ ತೆಗೆದುಕೊಂಡು ಖುಷಿಪಟ್ಟರು. ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಇಲಾಖೆ ಕೆ.ಎಡತೊರೆ ಗ್ರಾಮದ ಸೇತುವೆ ಬಳಿ, ಹೆಬ್ಬಾಳ ಜಲಾಶಯ ಹಾಗೂ ವಡ್ಡರಗುಡಿ ಗ್ರಾಮದ ಹೆಬ್ಬಾಳ ಜಲಾಶಯ ಹೊಳೆ ಬಳಿ ಬ್ಯಾರಿಕೇಡ್ ಹಾಕಿ ಸಿಬ್ಬಂದಿ ನಿಯೋಜಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ.

ಶಾಸಕ–ಅಧಿಕಾರಿಗಳ ಭೇಟಿ: ಬೆಳೆ ಹಾನಿಯಾಗಿರುವ ಗ್ರಾಮಗಳಿಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಶಾಸಕ ಅನಿಲ್ ಚಿಕ್ಕ ಮಾದು, ರೈತರೊಂದಿಗೆ ಚರ್ಚಿಸಿದರು. ಬೆಳೆಹಾನಿಯ ಸಂಪೂರ್ಣ ಮಾಹಿತಿ ಸಂಗ್ರಹಿಸಿ ಬೆಳೆ ಪರಿಹಾರ ಕೊಡಿಸುವ ಬಗ್ಗೆ ಭರವಸೆ ನೀಡಿದರು. ಹೆಚ್.ಡಿ.ಕೋಟೆ–ಹುಣಸೂರು ಮುಖ್ಯರಸ್ತೆಯ ಟೈಗರ್‌ಬ್ಲಾಕ್ ಗ್ರಾಮ ಸಮೀಪದ ಸೇತುವೆ ಬಳಿ ಕೊರೆದು ರಸ್ತೆ ಹಾಳಾಗಿದ್ದು, ಸ್ಥಳದಲ್ಲೇ ಅಧಿಕಾರಿಗಳಿಗೆ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಶಾಸಕರು ಸೂಚಿಸಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ರತ್ನಾಂಬಿಕ, ತಾಪಂ ಇಓ ರಾಜೇಶ್ ಜೆರಾಲ್ಡ್ ಇನ್ನಿತರರಿದ್ದರು.

ಬುದ್ಧ ಪೂರ್ಣಿಮಾ ಜಯಂತಿ ಆಚರಣೆ

ನಂಜನಗೂಡು, ಮೇ 18–ನಗರದ ತಥಾ ಗತ ಬುದ್ಧ ವಿಹಾರದಲ್ಲಿ ತಥಾಗತ ಗೌತಮ ಬುದ್ಧರ 2566ನೇ ವೈಶಾಖ ಬುದ್ಧ ಪೂರ್ಣಿಮಾ ಜಯಂತಿ ಆಚರಿಸಲಾಯಿತು.

ಜಯಂತಿ ಆಚರಣೆ ಅಂಗವಾಗಿ ನಂಜನಗೂಡು ಪಟ್ಟಣದ ಹುಲ್ಲಹಳ್ಳಿ ವೃತ್ತದಿಂದ ಬುದ್ಧನ ಮೂರ್ತಿಯ ಮೆರವಣಿಗೆಯು ಪಟ್ಟಣದ ಬುದ್ಧ ನಗರದಲ್ಲಿರುವ ತಥಾಗತ ಬುದ್ಧ ವಿಹಾರದವರಿಗೆ ನೂರಾರು ಉಪಾಸಕರು/ಉಪಾಸಕಿಯರು ಮೇಣದ ಬತ್ತಿ ಹಿಡಿದು ಶಾಂತಿಯಿಂದ ಮೆರವಣಿಗೆಯಲ್ಲಿ ಭಾಗವಹಿಸಿದರು. ಪೂಜ್ಯ ಬಿಕ್ಕು ಧಮ್ಮಪಾಲ ರಾದ ಬಿ.ಧಮ್ಮಪಾಲ ಭಂತಾಜೀ ಅವರು ಬುದ್ಧಗುರುವಿನ ಬೆಳಕಿನಲ್ಲಿ ತಮ್ಮ ವಿಮೋಚನೆಯ ಮಾತ್ರವಲ್ಲದೆ, ಸಮುದಾಯದ ವಿಮೋಚನೆಯ ಕನಸನ್ನು ಕಂಡವರು ಬಾಬಾಸಾಹೇಬ್ ಅಂಬೇಡ್ಕರ್. ಮನುಷ್ಯ ತನ್ನ ಒಳ್ಳೆಯದಕ್ಕಾಗಿ ಇನ್ನೊಬ್ಬ ಮನುಷ್ಯನನ್ನು ಪ್ರೀತಿಸಬೇಕು. ನೈತಿಕತೆ ಜೀವನದ ಆದರ್ಶವಾದರೆ ಸಾಲದು. ಎಲ್ಲಾ ಮಾನವರು ಸಮಾನರು. ಎಲ್ಲರ ಬಗೆಗೂ ಮೈತ್ರಿ ಇರಬೇಕು ಎಂದರು.

ವಿಶ್ವನಾಥರ ಅಧಿಕಾರಾವಧಿಯಲ್ಲಿ ಸಾಕಷ್ಟು ಜನೋಪಯೋಗಿ ಕೆಲಸ: ಜಿಟಿಡಿ



ಹುಣಸೂರು, ಮೇ 18(ಕೆಕೆ)– ಮಾಜಿ ಸಚಿವ ಅಡಗೂರು ಎಚ್. ವಿಶ್ವನಾಥರು ತಮ್ಮ ಅಧಿಕಾರಾವಧಿಯಲ್ಲಿ ಸಾಕಷ್ಟು ಜನೋಪಯೋಗಿ ಕೆಲಸವನ್ನು ಮಾಡಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಹುಣಸೂರಿನ ಅಂಬೇಡ್ಕರ್ ಭವನದಲ್ಲಿ ಎಚ್.ವಿಶ್ವನಾಥರ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಎಚ್.ವಿಶ್ವನಾಥರ 75ನೇ ಹುಟ್ಟುಹಬ್ಬ ಸಂಭ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಚ್.ವಿಶ್ವನಾಥರು ತಮಗೆ ಸಿಕ್ಕ ಅಧಿಕಾರದ ಅವಧಿಯಲ್ಲಿ ಬೆಟ್ಟದಷ್ಟು ಕೆಲಸ ಮಾಡಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಕ್ರಾಂತಿಯನ್ನುಂಟು ಮಾಡಿದರು ಎಂದರು.

ಕನ್ನಡ ಸಂಸ್ಕೃತಿ ಇಲಾಖೆಗೆ ಕಾಯಕಲ್ಪ ನೀಡಿದರು. ಸಹಕಾರ ಇಲಾಖೆ ಮೂಲಕ ಸಂಜೀವಿನಿ ಯೋಜನೆಯನ್ನು ಜಾರಿಗೆ ತಂದರು. ಸಂಸದರಾಗಿ ಅಪಾರ ಕೆಲಸ ಮಾಡಿದ್ದ ಇವರು ದೇಶದಲ್ಲೇ ಗಮನ ಸೆಳೆದವರು. ಇವರು ಉಪ ಚುನಾವಣೆಯಲ್ಲಿ ಗೆದ್ದಿದ್ದರೆ ಯಡಿಯೂರಪ್ಪರ ನಂತರ ಸ್ಥಾನದ ಸಚಿವರಾಗುತ್ತಿದ್ದರು. ಇವರಿಂದ ಮತ್ತಷ್ಟು ಸೇವೆ ರಾಜ್ಯಕ್ಕೆ ಸಲ್ಲಿಸುವಂತಾಗಲಿ ಎಂದು ಆಶಿಸಿದರು.

ಶಾಸಕ ಎಚ್.ಪಿ.ಮಂಜುನಾಥ್ ಬೆಳ್ಳಿ ದೀಪ ನೀಡಿ ಸನ್ಮಾನಿಸಿ ಮಾತನಾಡಿ, ನಾನು ಎಚ್.ವಿಶ್ವನಾಥರ ಗರಡಿಯಲ್ಲಿ ಬೆಳೆದವನು. ಅವರ ಒಡನಾಟದಿಂದಾಗಿ ಅವರನ್ನು ಹತ್ತಿರದಿಂದ ಬಲ್ಲೆ. ವಿಶ್ವನಾಥ್ ಹಾಗೂ ಶ್ರೀನಿವಾಸ್‌ಪ್ರಸಾದ್, ಆಸ್ಕರ್ ಫರ್ನಾಂಡಿಸ್ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರ ಸಹಕಾರದಿಂದ ಟಿಕೆಟ್ ಪಡೆದೆ. ಅದೇ ರೀತಿ ಸಿದ್ದರಾಮಯ್ಯರ ಬೆಂಬಲದಿಂದ ಗೆಲುವು ಸಾಧಿಸಿದ್ದೇನೆ. ತಮಗೆ ಸಿಕ್ಕ ಅಧಿಕಾರವನ್ನು ಸಮರ್ಥವಾಗಿ ನಿಭಾಯಿಸಿ ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ. ವಿಶ್ವನಾಥರಿಗೆ ಕುಚೇಲ, ಸುಧಾಮ, ಕುಬೇರರಂಥ ಅಕ್ಷೋಹಿಣಿ ಪಡೆಯೇ ಜೊತೆಗಿದೆ. ವಿಶ್ವನಾಥ್ ಮತ್ತಷ್ಟು ಸೇವೆ ಸಲ್ಲಿಸಲು ಅಮೃತಪಥದೊಂದಿಗೆ ಆರೋಗ್ಯ ಪಥವಿರಲೆಂದು ಆಶಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಚ್. ವಿಶ್ವನಾಥ್, 75ನೇ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಿದಕ್ಕೆ ಕೃತಜ್ಞತೆ ಸಲ್ಲಿಸಿ, ತಮ್ಮ ಅಧಿಕಾರದ ಅವಧಿಯಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆಂಬ ಆತ್ಮ ತೃಪ್ತಿ ಇದೆ. ಕೆ.ಆರ್.ನಗರ, ಹುಣಸೂರು ಕ್ಷೇತ್ರವನ್ನು ಮರೆಯುವಂತಿಲ್ಲ ಎಂದರು.

ಹಿರಿಯ ಲೇಖಕ ಪ್ರೊ.ಸಿ.ನಾಗಣ್ಣ ವಿಶ್ವನಾಥರ ಬದುಕು, ಆಡಳಿತಾವಧಿಯ ಸಾಧನೆಗಳನ್ನು ಪ್ರತಿಬಿಂಬಿಸಿದರು. ಅಧ್ಯಕ್ಷತೆ ವಹಿಸಿದ್ದ ನಟರಾಜ ಸ್ವಾಮೀಜಿ, ಕಾಗಿನೆಲೆ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ ಮಾತನಾಡಿದರು.

ಫಾದರ್ ಜಾರ್ಜ್ ಮಾರ್ಟಿನ್, ರಾಜ್ಯ ಕುರುಬ ಸಮಿತಿ ನಿರ್ದೇಶಕ ಬಿಳಿಗೆರೆ ಮಾದೇಗೌಡ, ಜಿಪಂ ಮಾಜಿ ಸದಸ್ಯರಾದ ಸಿ.ಟಿ.ರಾಜಣ್ಣ, ಕುನ್ನೇಗೌಡ, ಫಜಲುಲ್ಲಾ, ನಾಗರಾಜ ಮಲ್ಲಾಡಿ, ನಗರಸಭಾ ಸದಸ್ಯರಾದ ಗಣೇಶ ಕುಮಾರಸ್ವಾಮಿ, ಹರೀಶ್, ಸತೀಶ, ಮುಖಂಡರಾದ ಎ.ಪಿ.ಸ್ವಾಮಿ, ಮಂಡ್ಯ ಮಹೇಶ್, ರಮೇಶ್, ಜಯರಾಮ್, ಅಜ್ಗರ್ ಪಾಷಾ, ಬಸವರಾಜ್, ಉದ್ಯಮಿ ರಾಜು, ಜಾಕೀರ್, ರಾಘು, ಅಶೋಕ್, ಕಾಯಿ ಶೇಖರ್, ಗಣಪತಿ, ಬಸವರಾಜೇಗೌಡ ಮಲ್ಲೇಶ್, ಧರ್ಮಾಪುರ ರಮೇಶ್, ಮುದಗನೂರು ಸುಭಾಷ್, ಬೀರಪ್ಪ ದೇವರಾಜ್, ಕೂಡ್ಲೂರು ಜಾರ್ಜ್, ದಸಂಸ ನಿಂಗರಾಜ್ ಮಲ್ಲಾಡಿ, ಡಿ.ಕುಮಾರ್, ಡೇವಿಡ್, ಸೇರಿದಂತೆ ಅಭಿಮಾನಿ ಸಂಘದ ಪದಾಧಿಕಾರಿಗಳು ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.9.15ಕ್ಕೆ, ಬೆ.11.40ಕ್ಕೆ, ಮ.2.05ಕ್ಕೆ, ರಾ.7.35ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.30ಕ್ಕೆ, ಕೆಜಿಎಫ್ 2 (ಕ): ರಾ.10ಕ್ಕೆ.
ಸ್ಕ್ರೀನ್ 2	ಡಾನ್ (ತ): ಬೆ.10.10ಕ್ಕೆ, ಸಂ.4ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ಮ.1.20ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಬೆ.10.40ಕ್ಕೆ, ಅಯ್ಯಂಗಾರನ್ (ತ): ಮ.1.15ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.6.50ಕ್ಕೆ, ಮೇರಿ ಆವಾಜ್ ಸುನೊ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಕಸ್ತೂರಿ ಮಹಲ್ (ಕ): ಬೆ.10.25ಕ್ಕೆ, ಕೆಜಿಎಫ್ 2(ಕ): ಮ.12.55ಕ್ಕೆ, ಸಂ.6.35ಕ್ಕೆ, ಅವತಾರ ಪುರುಷ (ಕ): ಸಂ.4.10ಕ್ಕೆ, ಸರ್ಕಾರು ವಾರಿ ಪಾಟ (ಕ): ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.10ಕ್ಕೆ, ಸಂ.4.10ಕ್ಕೆ, ಸಂ.6.55ಕ್ಕೆ, ಡಾನ್ (ತ): ಮ.12.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಜಯೇಶ್‌ಬಾಯ್ ಜೋರ್ದಾರ್ (ಹಿಂ): ಬೆ.10.05ಕ್ಕೆ, ಮ.12.50ಕ್ಕೆ, ರಾ.7.05ಕ್ಕೆ, ಕೆಜಿಎಫ್ 2(ಕ): ಮ.3.35ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಬೆ.9.40ಕ್ಕೆ, ಮ.3.50ಕ್ಕೆ, ರಾ.10ಕ್ಕೆ, ಅವತಾರ ಪುರುಷ (ಕ): ಮ.1ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ರಾ.7.10ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.9.55ಕ್ಕೆ, ಕಸ್ತೂರಿ ಮಹಲ್ (ಕ): ಮ.1.25ಕ್ಕೆ, ಅಯ್ಯಂಗಾರನ್ (ತ): ಸಂ.4.05ಕ್ಕೆ, ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಸಂ.6.55ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಬೆ.11ಕ್ಕೆ, ಸಂ.4ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಮ.1.20ಕ್ಕೆ, ಡಾನ್ (ತ): ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಸ್ತೂರಿ ಮಹಲ್ (ಕ): ಬೆ.10.45ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ಮ.1.25ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಮ.3.55ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಬೆ.10.30ಕ್ಕೆ, ಮ.1.35ಕ್ಕೆ, ಸಂ.4.40ಕ್ಕೆ, ಕೆಜಿಎಫ್ 2 (ಕ): ರಾ.7.45ಕ್ಕೆ
ಸ್ಕ್ರೀನ್ 4	ಕೆಜಿಎಫ್ 2 (ಕ): ಮ.1.20ಕ್ಕೆ, ಅವತಾರ ಪುರುಷ (ಕ): ಸಂ.4.30ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ರಾ.7.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಒಲುಮೆ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ತೂರಿ ಮಹಲ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಸೆಲ್ಫಿ ಮಮ್ಮಿ ಗೂಗ್ಲಿ ಡ್ಯಾಡಿ (ಕ)	2 ಪ್ರದರ್ಶನಗಳು
ಕ್ರಿಟಿಕಲ್ ಕೀರ್ತನಗಳು (ಕ)	2 ಪ್ರದರ್ಶನಗಳು

ರೋಚಕ ಗೆಲುವಿನೊಂದಿಗೆ ಪ್ಲೇ–ಆಫ್ ಪ್ರವೇಶಿಸಿದ ಲಖನೌ



ಮುಂಬೈ, ಮೇ 18– ಕ್ವಿಂಟನ್ ಡಿ ಕಾಕ್, ನಾಯಕ ಕೆ.ಎಲ್.ರಾಹುಲ್ ಅವರ ದಾಖಲೆಯ ಜೊತೆಯಾಟ ಹಾಗೂ ಮೊಹಸಿನ್ ಖಾನ್ ಹಾಗೂ ಮಾರ್ಕಸ್ ಸ್ಟೋಯಿನಿಸ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಲಖನೌ ಸೂಪರ್ ಜೆಂಟ್ಸ್ 2 ರನ್‌ಗಳ ರೋಚಕ ಗೆಲುವು ದಾಖಲಿಸಿತು.

ಇದರೊಂದಿಗೆ ಆಡಿದ 14 ಪಂದ್ಯದಲ್ಲಿ 9ರಲ್ಲಿ ಗೆಲುವು ದಾಖಲಿಸಿರುವ ಕನ್ನಡಿಗ ಕೆ.ಎಲ್.ರಾಹುಲ್ ನೇತೃತ್ವದ ಲಖನೌ 18 ಅಂಕಗಳೊಂದಿಗೆ ಎರಡನೇ ತಂಡವಾಗಿ ಪ್ಲೇ ಆಫ್ ಪ್ರವೇಶಿಸಿದೆ. ಇನ್ನೂ ಸೋಲಿನೊಂದಿಗೆ ಕೋಲ್ಕತ್ತಾ ಟೂರ್ನಿಯಿಂದ ಹೊರಬಿದಿತ್ತು.

ಸಾಕಷ್ಟು ರೋಚಕತೆಯಿಂದ ಕೂಡಿದ ಪಂದ್ಯದಲ್ಲಿ ಕೆಕೆಆರ್‌ಗೆ ಕೊನೆಯ ಓವರ್‌ನಲ್ಲಿ 20 ರನ್‌ಗಳ ಅಗತ್ಯವಿತ್ತು. ಈ ವೇಳೆ ಕ್ರೀಸ್‌ನಲ್ಲಿದ್ದ ಯುವ ಆಟಗಾರ ರಿಂಕುಸಿಂಗ್ ಮೊದಲ ನಾಲ್ಕು ಎಸೆತಗಳಲ್ಲಿ ಒಂದು ಬೌಂಡರಿ, ಎರಡು ಸಿಕ್ಸರ್ ಸೇರಿದಂತೆ 18ರನ್ ಗಳಿಸಿದರು. ನಂತರ 2 ಎಸೆತಗಳಲ್ಲಿ 2ರನ್ ಅಗತ್ಯವಿತ್ತು. ಈ ವೇಳೆ ಮಾರಕ ಬೌಲಿಂಗ್ ಮಾಡಿದ ಸ್ಟೋಯಿನಿಸ್ ಕೊನೆಯ ಎರಡು ಎಸೆತದಲ್ಲಿ 2 ವಿಕೆಟ್ ಪಡೆಯುವ ಮೂಲಕ ಲಖನೌಗೆ ರೋಚಕ ಗೆಲುವು ತಂದುಕೊಟ್ಟರು.

ಇಲ್ಲಿನ ಡಾ.ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ 66ನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಲಖನೌಗೆ ನಾಯಕ ಕೆ.ಎಲ್.ರಾಹುಲ್ ಅಜೇಯ 68 ಹಾಗೂ ಕ್ವಿಂಟನ್ ಡಿ ಕಾಕ್ ಅಜೇಯ 140ರನ್‌ಗಳ ಸ್ಫೋಟಕ ಬ್ಯಾಟಿಂಗ್ ನಿಗದಿತ 20 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 209ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. 210ರನ್‌ಗಳ ಗುರಿ ಬೆನ್ನತ್ತಿದ್ದ ಕೆಕೆಆರ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 208ರನ್ ಗಳಿಸುವ ಮೂಲಕ 2ರನ್‌ಗಳಿಂದ ಸೋಲನ್ನೊಪ್ಪಿಕೊಂಡಿತ್ತು. ತಂಡದ ಪರವಾಗಿ ನಿತಿಶ್‌ರಾಣಾ 42, ಶ್ರೇಯಸ್ ಅಯ್ಯರ್ 50, ಸ್ಯಾಮ್ ಬಿಲ್ಲಿಂಗ್ಸ್ 36, ರಿಂಕು ಸಿಂಗ್ 40, ಸುನೀಲ್ ನರೈನ್ ಅಜೇಯ 21ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಮೊಹಸಿನ್ ಖಾನ್, ಮಾರ್ಕಸ್ ಸ್ಟೋಯಿನಿಸ್ ತಲಾ 3, ಕೆ.ಗೌತಮ್, ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಮಾಡಿದ ಕ್ವಿಂಟನ್ ಡಿ ಕಾಕ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ಶ್ರೀ ಗೋವಿಂದೇಗೌಡ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಪ್ರಥಮ ದರ್ಜೆ ಗುತ್ತಿಗೆದಾರರು ಮತ್ತು ಮೈಸೂರಿನ
ಹೆಸರಾಂತ ವೈಶಾಖ್ ಗ್ರೂಪ್ ಆಫ್ ಹೋಟೆಲ್ಸ್‌ನ
ಮಾಲೀಕರು
(ಹೋಟೆಲ್ ವೈಶಾಖ್ ಇಂಟರ್‌ನಾಷನಲ್,
ಹೋಟೆಲ್ ವೈಶಾಖ್ ರೆಸಿಡೆನ್ಸಿ,
ಹೋಟೆಲ್ ವೈಶಾಖ್ ಕಂಫರ್ಟ್,
ಹೋಟೆಲ್ ರಿಯೋ ಮೆರಿಡಿಯನ್)
ಹಾಗೂ ನೂರಾರು ಕುಟುಂಬದ
ಅನ್ನದಾತರಾದ
ಶ್ರೀ ಗೋವಿಂದೇಗೌಡರಿಗೆ
ಹುಟ್ಟುಹಬ್ಬದ ಶುಭಾಷಯಗಳು.
ತಾಯಿ ಚಾಮುಂಡೇಶ್ವರಿ ನಿಮಗೆ
ಆಯುರಾರೋಗ್ಯ ಕರುಣಿಸಲೆಂದು ಪ್ರಾರ್ಥಿಸುವ
ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು
RIO MERIDIAN
your host in city of palaces
ಶುಭ ಕೋರುವವರು :
ಸಿ. ಪ್ರವೀಣ್ ಕುಮಾರ್
ಶ್ರೀ ಓಂಶಕ್ತಿ ಟೂರ್ಸ್ & ಟ್ರಾವೆಲ್ಸ್ ಮಾಲೀಕರು
ರಿಯೋ ಮೆರಿಡಿಯನ್
RIO MERIDIAN
ROOMS
RESTAURANT
BANQUET HALL
CONVENTION HALL
SPA & GYM
SWIMMING POOL
BAR & RESTAURANT
24X7 COFFEE SHOP
SuprabA Shades
Mysuru - 98452 18266